# ಶುಕ್ರವಾರ, ೨೫ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

## ಪರಿಚಯಪತ್ರಗಳನ್ನು ನೀಡುವುದು ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

ಕೆಳಕಂಡ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ಸಲ್ಲಿಸಿ ದಾಖಲೆ ಪುಸ್ತಕದಲ್ಲಿ ಸಹಿಯನ್ನು ಮಾಡಿದರು:

ಶ್ರೀ ಮಿಹಿರ್ ಲಾಲ್ ಚಟ್ಟೋಪಾಧ್ಯಾಯ (ಪಶ್ಚಿಮ ಬಂಗಾಳ : ಸಾಮಾನ್ಯ)

## ನಿಯಮಗಳಿಗೆ ತಿದ್ದುಪಡಿ

**ಮಾನ್ಯ ಸಭಾಧ್ಯಕ್ಷರು** : ಇಂದಿನ ಮೊದಲ ಕಾರ್ಯಕ್ರಮವೆಂದರೆ, ಶ್ರೀ ಶ್ರೀಪ್ರಕಾಶ ಅವರು ಮಂಡಿಸುವ ಪ್ರಸ್ತಾವ.

**ಶ್ರೀ ಶ್ರೀಪ್ರಕಾಶ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ:

ಸಂವಿಧಾನ ರಚನಾಸಭೆಯ ೫ನೆಯ ನಿಯಮದ ಅನಂತರ ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು:

"೫ಎ. ೪ ಮತ್ತು ೫ನೆಯ ನಿಯಮಗಳ ಉಪಬಂಧಗಳ ಹೊರತಾಗಿ, ಮಹಾಪ್ರಭುಗಳ ಸರ್ಕಾರದ ೧೯೪೭ರ ಜೂನ್ ೩ರ ಹೇಳಿಕೆಯ ಪ್ರಕಾರ, ಭಾರತದ ಗವರ್ನರ್ ಜನರಲ್ ಅವರ ಹೇಳಿಕೆಯ ೧೪ನೆಯ ಕಂಡಿಕೆಯಲ್ಲಿ ನಮೂದಿಸಲಾಗಿರುವ ಪ್ರದೇಶಗಳಿಂದ ಸಂವಿಧಾನ ರಚನಾಸಭೆಯ ಹೊಸ ಚುನಾವಣೆಗಾಗಿ ಹಾಗೂ ಈ ಪ್ರದೇಶಗಳಿಂದ ಈಗಾಗಲೇ ಆಯ್ಕೆಯಾಗಿರುವ ಸದಸ್ಯರು ನಿಯಮ ೩ರಲ್ಲಿ ನಿಯಮಿತವಾದ ರೀತಿಯಲ್ಲಿ ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಬಹುದೇ ಅಥವಾ ಇಲ್ಲವೆ ಎಂಬುದನ್ನು ಕುರಿತು ಆದೇಶವನ್ನು ಹೊರಡಿಸಬಹುದು; ಮತ್ತು ಹೊಸದಾಗಿ ಚುನಾಯಿತರಾದ ಸದಸ್ಯರನ್ನು ಸಂವಿಧಾನ ರಚನಾಸಭೆಯ ಸದಸ್ಯರು ಎಂದು ಪರಿಗಣಿಸತಕ್ಕದ್ದು.

ಈ ನಿಯಮವು ೧೯೪೭ರ ಜೂನ್ ೩ನೆಯ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರತಕ್ಕದ್ದು."

ಮಾನ್ಯರೆ, ನಾನು ಮಂಡಿಸಿರುವ ಈ ಪ್ರಸ್ತಾವವು ಮೂರು ಉದ್ದೇಶಗಳನ್ನು ಹೊಂದಿದೆ. ಮೊದಲನೆಯದು, ಕಳೆದ ಕೆಲವು ತಿಂಗಳುಗಳಲ್ಲಿ ಸಂಭವಿಸಿದ ಅನಪೇಕ್ಷಣೀಯ ಘಟನೆಗಳನ್ನು ನಿಯಂತ್ರಿಸುವುದು. ಎರಡನೆಯದು, ಈ ಸಂವಿಧಾನ ರಚನಾಸಭೆಯ ಗೌರವವನ್ನು, ನಿಮ್ಮ ಅನುಮತಿಯಿಂದ ಹೇಳಬಹುದಾದರೆ, ಸಭೆಯ ಸಭಾಧ್ಯಕ್ಷರಾದ ನಿಮ್ಮ ಗೌರವವನ್ನು ಎತ್ತಿಹಿಡಿಯುವುದು. ಕೊನೆಯದಾಗಿ, ಕಳೆದ ಕೆಲವು ತಿಂಗಳುಗಳಲ್ಲಿ ಹಲವಾರು ಘಟನೆಗಳು ಸಂಭವಿಸಿದ ರೀತಿಯ ಬಗೆಗೆ ನನ್ನ ಪ್ರತಿಭಟನೆಯನ್ನು ದಾಖಲಿಸುವುದು (ಕೇಳಿ, ಕೇಳಿ). ಮೂಲತಃ ಚುನಾಯಿತರಾಗಿ ಇಲ್ಲಿಗೆ ಬಂದಿದ್ದ ಈ ಸದನದ ಹಿಂದಿನ ಹಲವು ಸದಸ್ಯರನ್ನು

ತೆಗೆದುಹಾಕಲಾಯಿತು; ಹೊಸ ಚುನಾವಣೆಗಳಿಗೆ ಆದೇಶವನ್ನು ಮಾಡಲಾಯಿತು ಮತ್ತು ಹಿಂದಿನ ಸದಸ್ಯರ ಸ್ಥಾನಕ್ಕೆ ಹೊಸ ಸದಸ್ಯರು ಬಂದರು.

ಮಾನ್ಯರೆ, ಈ ಸಭೆಯು ಯಾವುದೇ ರೀತಿಯಲ್ಲಿ ಚುನಾಯಿತವಾಗಿದ್ದರೂ, ಅದು ಪ್ರಥಮವಾಗಿ ಚುನಾಯಿತವಾದಾಗ, ಸಹಜವಾಗಿಯೇ ತನ್ನನ್ನು ಸ್ವತಂತ್ರ ಸಂಸ್ಥೆಯೆಂದು ಕರೆದುಕೊಂಡು ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ತನ್ನದೇ ನಿಯಮಗಳನ್ನು ರೂಪಿಸಿಕೊಳ್ಳುವುದಕ್ಕೆ ತನಗೆ ಸಂಪೂರ್ಣವಾದ ಹಕ್ಕು ಇದೆಯೆಂದು ಹೇಳಿಕೊಂಡಿತು. ಇಂತಹ ಸಂಸ್ಥೆಯೊಂದು ಯಾವ ನಿಯಮವೂ ಇಲ್ಲದೆ ತನ್ನ ಉದ್ದೇಶಿತ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದು ಸಾಧ್ಯವಿಲ್ಲವೆಂಬುದು ವಾಸ್ತವವೇ ಆಗಿರುವುದರಿಂದ, ನಾವು ಸದನಕ್ಕಾಗಿ ಒಂದು ನಿಯಮಾವಳಿಯನ್ನು ರೂಪಿಸಿಕೊಂಡೆವು. ಈ ನಿಯಮಾವಳಿಗಳು ತಮಗೆ ತಿಳಿದಿರಲಿಲ್ಲವೆಂದು ಯಾರೂ ಹೇಳಲಾಗುವುದಿಲ್ಲ. ಈ ನಿಯಮಾವಳಿಗಳನ್ನು ಯಾರಾದರೂ ಗಮನಿಸಿದರೆ, ಅವರಿಗೆ ೪ ಮತ್ತು ೫ನೆಯ ನಿಯಮಗಳು ಈ ಸದನದ ಸದಸ್ಯರ ಸ್ಥಾನಗಳು ಖಾಲಿಯಾದಾಗ ಹೊಸ ಸದಸ್ಯರನ್ನು ಚುನಾಯಿಸುವ ಕ್ರಮಗಳನ್ನು ತಿಳಿಸುತ್ತವೆ ಎಂಬುದು ಕಂಡುಬರುತ್ತದೆ. ಆದರೆ, ಈಗ ಆಗಿರುವುದು ಏನೆಂದರೆ, ತೆರೆಯ ಮರೆಯಲ್ಲಿ ಕೆಲವು ಸಂಧಾನಗಳು ನಡೆದವು, ಕೆಲವೊಂದು ಒಪ್ಪಂದಗಳು ಏರ್ಪಟ್ಟವು, ಪರಿಣಾಮವಾಗಿ, ಕೆಲವು ಸದಸ್ಯರನ್ನು ಸದನದಿಂದ ಏಕಾಏಕಿ ವಜಾಗೊಳಿಸಿ, ಅವರ ಸ್ಥಾನಗಳಲ್ಲಿ ಹೊಸ ಸದಸ್ಯರನ್ನು ಚುನಾಯಿಸಲಾಯಿತು. ನಾವು ಈ ಒಪ್ಪಂದಗಳಿಗೆ ನಮ್ಮ ಮೂಗೊಪ್ಪಿಗೆಯನ್ನು ನೀಡಬೇಕಾಯಿತು. ನಾವು ಅದನ್ನು ಇಷ್ಟಪಡುತ್ತೇವೆಯೋ ಇಲ್ಲವೋ, ಈ ಪ್ರಕ್ರಿಯೆಯಲ್ಲಿ ನಮ್ಮ ದೇಶವನ್ನು ಎರಡು ಭಾಗವನ್ನಾಗಿಸಲಾಯಿತು. ಮಾನ್ಯರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ಈಗಲಾದರೂ ನಮಗಾಗಿ ಒಂದು ನಿಯಮವನ್ನು ರಚಿಸಿಕೊಂಡು ನಿರ್ದಿಷ್ಟ ಕ್ರಮವನ್ನು ಅನುಸರಿಸಬೇಕು, ಇದರಿಂದ ನಾವು ನಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಬಹುದು ಮತ್ತು ನಾವು ಮಾಡಿದುದು ನಮಗಾಗಿ, ನಾವು ಮಾಡಿಕೊಂಡಿರುವ ಒಂದು ನಿರ್ದಿಷ್ಟ ನಿಯಮವನ್ನು ಅನುಸರಿಸಿ ಅದನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುವ ಅವಕಾಶ ನಮಗಿರುತ್ತದೆ.

ಮಾನ್ಯರೆ, ಈಗ, ನನ್ನ ಎರಡನೆಯ ಉದ್ದೇಶವೆಂದರೆ, ಸದನದ ಗೌರವವನ್ನು ಮತ್ತು ಅದರ ಸಭಾಧ್ಯಕ್ಷರ ಗೌರವವನ್ನು ಎತ್ತಿಹಿಡಿಯುವುದು. ಆ ಸಂಧಾನಗಳು ನಡೆಯುತ್ತಿದ್ದ ಭಯಂಕರ ದಿನಗಳಲ್ಲಿ ತಮ್ಮ ಸಲಹೆಗಳನ್ನು ಕೂಡ ಕೇಳುತ್ತಾರೆಂದು ತಾವು ಹೇಳಿದುದನ್ನು ನಾನು ಅಸಹಾಯಕನಾಗಿ ನೋಡಿದ್ದೆ. ತಾವು ಈ ಮಧ್ಯಾವಧಿಯ ಸರ್ಕಾರದ ಸದಸ್ಯರಾಗಿರಬಹುದು, ಮತ್ತು ಕಾಂಗ್ರೆಸ್‌ನ ಕೇಂದ್ರ ಸಮಿತಿಯ ಸದಸ್ಯರೂ ಆಗಿರಬಹುದು; ಆದರೆ, ಈ ಸಭೆಯ ಸಭಾಧ್ಯಕ್ಷರಾಗಿ ತಾವು ಸಂಧಾನಗಳಲ್ಲಿ ಪಾತ್ರವಹಿಸಿರಲಿಲ್ಲ. ತಾವು ಈ ಸಭೆಯ ಸಭಾಧ್ಯಕ್ಷರಾಗಿರುವ ಕಾರಣದಿಂದ ತಮ್ಮನ್ನು ಅದರಲ್ಲಿ ಒಳಗೊಳ್ಳುವ ಹಾಗೆ ಮಾಡಿದ್ದಿದ್ದರೆ, ಔಚಿತ್ಯ ಮತ್ತು ಶಿಷ್ಟಾಚಾರಕ್ಕೆ ಅನುಗುಣವಾಗಿ ಎಚ್ಚರಿಕೆಯಿಂದ ನಡೆದುಕೊಳ್ಳುವ ತಾವು ಈ ವಿಷಯದಲ್ಲಿ ಸದನದ ಸಲಹೆಯನ್ನು ಪಡೆದುಕೊಳ್ಳುತ್ತಿದ್ದಿರಿ.

ಅಂದು ಇಂತಹ ಒಂದು ಸಣ್ಣ ನಿಲುವಳಿಯನ್ನು ಮಂಡಿಸುವುದಕ್ಕೆ ನನಗೆ ಒಪ್ಪಿಗೆಯನ್ನು ನೀಡುತ್ತದೆಯೇ ಎಂದು ಸದನವನ್ನು ಕೇಳಿದ ತಾವು, ಬಹಳ ಪ್ರಾಮುಖ್ಯವಿರುವ ಇಂತಹ ವಿಷಯದಲ್ಲಿ ಈ ಸದನದ ಸಭಾಧ್ಯಕ್ಷರಾಗಿ ಖಂಡಿತವಾಗಿಯೂ ಸದನವನ್ನು ಕೇಳಿರುತ್ತಿದ್ದಿರಿ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ. ಆ ಸಮಯದಲ್ಲಿ ಸದನವು ಅಧಿವೇಶನ ಸೇರಿಲ್ಲದಿದ್ದುದರಿಂದ ಸದನದ ಪರವಾಗಿ ಈ ಕ್ರಮಕ್ಕೆ ತಾವು ತಮ್ಮ ಸಮ್ಮತಿಯನ್ನು ಸೂಚಿಸುತ್ತಿದ್ದೀರೆಂದು ನಮಗೆ ತಿಳಿಸಿದ್ದರೆ, ನಮಗೆ ಬಹಳಷ್ಟು ತೃಪ್ತಿಯಾಗಿರುತ್ತಿತ್ತು. ತಮ್ಮ ವೈಯಕ್ತಿಕ ನೆಲೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ತಮಗೆ ಎಲ್ಲ ಹಕ್ಕುಗಳೂ ಇವೆ. ಆದರೆ ಈ ವಿಷಯದಲ್ಲಿ, ನಾನು ಹೇಳಬಹುದಾದರೆ, ಸಂವಿಧಾನ ರಚನಾಸಭೆಯು ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿತು. ಇತ್ತೀಚೆಗೆ ಒಂದು ದಿನ ಪಂಡಿತ ಗೋವಿಂದವಲ್ಲಭ ಪಂತ್ ಅವರು ಪಕ್ಷದ ಒಂದು ಪ್ರಣಾಳಿಕೆಯ ಬಗೆಗೆ

ಮಾತನಾಡಿದಾಗ, ಈ ಸದನವು ಯಾವ ಪಕ್ಷವನ್ನೂ ಗುರುತಿಸುವುದಿಲ್ಲವೆಂದು ತಾವು ಸರಿಯಾಗಿಯೇ ಹೇಳಿದಿರಿ. ಆದರೆ, ನಾನು ತಪ್ಪಾಗಿ ಗ್ರಹಿಸದೆ ಇದ್ದರೆ, ಆ ದುರ್ದಿನಗಳ ಅವಧಿಯಲ್ಲಿ, ಎರಡು ಪ್ರಮುಖ ಪಕ್ಷಗಳ ಮುಖಂಡರ ಹೆಸರುಗಳು ಪತ್ರಿಕೆಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತಿದ್ದವು. ಈ ಸಂವಿಧಾನ ರಚನಾಸಭೆಯ ಮಟ್ಟಿಗೆ ತಾವು ಯಾವ ಪಕ್ಷಗಳ ಅಸ್ತಿತ್ವವನ್ನೂ ಮಾನ್ಯ ಮಾಡುವುದಿಲ್ಲವಾದ್ದರಿಂದ, ದೇಶದಲ್ಲಿ ಪ್ರಮುಖ ಪಕ್ಷಗಳೆಂದು ಹೇಳುವ ಪಕ್ಷಗಳು ನಮ್ಮ ಬೆನ್ನಿನ ಹಿಂದೆ ನಡೆಸಿದ ಒಪ್ಪಂದಗಳಿಗೆ ನಾವು ಒಪ್ಪಿಗೆಯನ್ನು ಸೂಚಿಸಬೇಕಾಗಿ ಬಂದಿತು. ಈ ವಿಷಯದ ಸಂದರ್ಭದಲ್ಲಿ, ಈ ನಿಯಮವು ಸ್ವಲ್ಪಮಟ್ಟಿಗೆ ಈ ತಪ್ಪನ್ನು ಸರಿಪಡಿಸುತ್ತದೆ. ಇದರಿಂದ ನಾವು ಏನನ್ನೇ ಮಾಡಿದರೂ, ಸದನದ ನಿಯಮಗಳಿಗೆ ಅನುಸಾರವಾಗಿಯೇ ಮಾಡುತ್ತಿದ್ದೇವೆ ಎಂಬ ಭಾವನೆಯಾದರೂ ನಮ್ಮಲ್ಲಿ ಇರುತ್ತದೆ.

ಅಂತ್ಯದಲ್ಲಿ, ಇದು ನನ್ನ ಮಟ್ಟಿಗಂತೂ ಬಹಳ ಮುಖ್ಯವಾದುದಾಗಿದೆ, ಈ ಹಿಂದೆ ನಡೆದುದೆಲ್ಲದರ ವಿರುದ್ಧ ನಾನು ನನ್ನ ಪ್ರತಿಭಟನೆಯನ್ನು ಈ ಸದನದಲ್ಲಿ ದಾಖಲಿಸಲೇಬೇಕು. ಪ್ರಮುಖವಾದ ಆ ವಿಷಯವನ್ನು ಕುರಿತು ಹಿಂದೆ ಉಕ್ತವಾದ ಹೇಳಿಕೆಯು ಹೆಸರಿಸಿರುವ ಮುಖಂಡರು ಅಥವಾ ಗವರ್ನರ್ ಜನರಲ್ ಅವರು ಈ ಸದನದ ಸಭಾಧ್ಯಕ್ಷರಾಗಿರುವ ತಮ್ಮೊಂದಿಗಾಗಲೀ ಅಥವಾ ಈ ಸದನದೊಂದಿಗಾಗಲೀ ಚರ್ಚಿಸದೇ ಇರುವುದು ಒಳ್ಳೆಯ ನಡೆಯಲ್ಲವೆಂಬುದು ನನ್ನ ಅಭಿಪ್ರಾಯ. ಆ ಸಂಧಾನಗಳು, ನಮ್ಮ ದೇಶವನ್ನು ನಮ್ಮ ಇಷ್ಟಕ್ಕೆ ವಿರುದ್ಧವಾಗಿ ಎರಡು ಭಾಗವನ್ನಾಗಿಸಿದುದು ತಮಗೆ ತಿಳಿದೇ ಇದೆ. ಮೂಲ ಕ್ರಮವು ಅನುಸರಿಸಲ್ಪಟ್ಟಿದ್ದರೆ, ಈ ಸದನಕ್ಕೆ ಚುನಾಯಿತರಾದವರು ಸದನಕ್ಕೆ ಹಾಜರಾಗಿದ್ದಿದ್ದರೆ, ಮತ್ತು ವಿಷಯವನ್ನು ಸರಿಯಾದ ಕ್ರಮವನ್ನು ಅನುಸರಿಸಿ ಈ ಸದನದ ಮುಂದೆ ಇಟ್ಟಿದ್ದರೆ, ಈಗ ನಮ್ಮ ತಲೆಗೆ ಬಂದಿರುವ ಈ ವ್ಯವಸ್ಥೆಗೆ ನಾವೇ ಸಂತೋಷದಿಂದ ಒಪ್ಪಿಗೆಯನ್ನು ನೀಡುತ್ತಿದ್ದೆವು ಅಥವಾ ತಿರಸ್ಕರಿಸುತ್ತಿದ್ದೆವು ಮತ್ತು ಈ ದೇಶದ ಜನತೆಯ ಪ್ರತಿನಿಧಿಗಳು ಈ ಭವನದಲ್ಲಿ ಸೇರಿ, ಗಂಭೀರವಾಗಿ ಚರ್ಚಿಸಿ, ಸದ್ಯದ ಪರಿಸ್ಥಿತಿಯಲ್ಲಿ ದೇಶದ ಹಿತದೃಷ್ಟಿಯಿಂದ ಎರಡು ಪ್ರತ್ಯೇಕ ಸಂವಿಧಾನ ರಚನಾಸಭೆಗಳನ್ನು ಹೊಂದಿರಬೇಕು ಮತ್ತು ದೇಶದ ಎರಡು ಭಾಗಗಳು ಎರಡು ಪ್ರತ್ಯೇಕವಾದ ಸರ್ಕಾರದಿಂದ ಆಳಲ್ಪಡಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡ ತೃಪ್ತಿಯಾದರೂ ನಮಗೆ ಇರುತ್ತಿತ್ತು. ಆದರೆ, ಈಗಿರುವಂತೆ, ಇಡೀ ಪ್ರಸಂಗವನ್ನು ನಮ್ಮ ಮುಖದ ಮೇಲೆ ಬಿಸಾಡಿದಂತಿದೆ. ಇದಕ್ಕೆ ಬೆಲೆ ಕಟ್ಟುವುದಿರಲಿ, ಸಾಮಾನ್ಯರಿಗೆ ಇದನ್ನು ಅರ್ಥಮಾಡಿಕೊಳ್ಳುವುದೂ ಸಾಧ್ಯವಿಲ್ಲ. ಈಗಿನ ಸನ್ನಿವೇಶದಲ್ಲಿ, ಆಗಿಹೋಗಿರುವುದನ್ನು ನಾವು ಗೌರವಯುತವಾಗಿ ಒಪ್ಪಿಕೊಳ್ಳುವುದರ ಹೊರತು ನಮಗೆ ಇನ್ನೇನೂ ಈ ವಿಷಯದಲ್ಲಿ ಉಳಿದಿಲ್ಲ. ಸದನದ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಇರುವ ನಿಯಮಗಳಲ್ಲಿ ನಾನು ಪ್ರಸ್ತಾವಿಸಿರುವ ನಿಲುವಳಿಯನ್ನು ಸದನವು ಏಕಕಂಠದಿಂದ ಒಪ್ಪಿಕೊಳ್ಳುತ್ತದೆ ಎಂದು ನಾನು ಆಶಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಈ ನಿಲುವಳಿ ನೋಡಿದಾಗ ನನಗೆ ಕಷ್ಟವಾಗುತ್ತದೆ. ಆದರೆ ಆಗಿರಬಹುದಾದ ಲೋಪವನ್ನು ಸರಿಪಡಿಸುವ ಗೌರವಾನ್ವಿತ ಸದಸ್ಯರ ಬಯಕೆಯನ್ನು ಕುರಿತು ನನಗೆ ಅನುಕಂಪವಿದೆ. ಅಷ್ಟೇ ಅಲ್ಲದೆ ತಮ್ಮ ಗೌರವವನ್ನು ಎತ್ತಿಹಿಡಿಯುವ ವಿಷಯದಲ್ಲಿಯೂ ನನಗೆ ಸಂಪೂರ್ಣ ಅನುಕಂಪವಿದೆ. ಈಗ ನಡೆದಿರುವ ಪ್ರಸಂಗಗಳನ್ನು ಕುರಿತ ಪ್ರತಿಭಟನೆಗಳ ವಿಷಯದಲ್ಲಿ ನಾನು ಯಾವ ಪಕ್ಷಕ್ಕೂ ಸೇರುವುದಿಲ್ಲ. ಸಂಭವಿಸಿರುವುದರ ಹಿಂದೆ ಶಕ್ತಿಗಳ ಸಂಘಟನೆ ಇದ್ದುದರಿಂದ ಬಡಪಾಯಿಗಳಿಗೆ ಏನೂ ಮಾಡಲಾಗಲಿಲ್ಲ.

ನಿಲುವಳಿಯ ಹೆಚ್ಚುಗಾರಿಕೆಗೆ ಬಂದರೆ, ಅದು ಹೀಗೆ ಹೇಳುತ್ತದೆ: ಮಹಾಪ್ರಭುಗಳ ಸರ್ಕಾರದ ೧೯೪೭ರ ಜೂನ್ ೩ರ ಹೇಳಿಕೆಯ ಪ್ರಕಾರ, ಭಾರತದ ಗವರ್ನರ್ ಜನರಲ್ ಅವರು ಹೇಳಿಕೆಯಲ್ಲಿನ ೧೪ನೆಯ ಕಂಡಿಕೆಯಲ್ಲಿ ನಮೂದಿಸಲಾಗಿರುವ ಪ್ರದೇಶಗಳಿಂದ ಸಂವಿಧಾನ ರಚನಾಸಭೆಗಾಗಿ ಸದಸ್ಯರನ್ನು ಆಯ್ಕೆಮಾಡಲು ಚುನಾವಣೆಗೆ ಆದೇಶವನ್ನು ನೀಡಬಹುದು.

ಮಾನ್ಯರೆ, ಪ್ರಖ್ಯಾತವಾದ ಈ ಕಂಡಿಕೆಯಲ್ಲಿ ಕೆಳಗೆ ಹೇಳಿಲಾಗಿರುವ ಪ್ರದೇಶಗಳನ್ನು ಸೇರಿಸಲಾಗಿದೆ:

(೧) ಈಗ ಭಾರತದ ವ್ಯಾಪ್ತಿಯಿಂದ ಹೊರಗೆ ಇರುವ ಸಿಲ್ಹೆಟ್;

(೨) ಈಗ ಭಾರತದ ವ್ಯಾಪ್ತಿಯಲ್ಲಿಯೇ ಇರುವ ಪಶ್ಚಿಮಬಂಗಾಳ;

(೩) ಭಾರತದ ವ್ಯಾಪ್ತಿಯಿಂದ ಹೊರಗೆ ಇರುವ ಪೂರ್ವಬಂಗಾಳ;

(೪) ಭಾರತದ ವ್ಯಾಪ್ತಿಯಿಂದ ಹೊರಗೆ ಇರುವ ಪಶ್ಚಿಮಪಂಜಾಬ್; ಮತ್ತು

(೫) ಭಾರತದ ವ್ಯಾಪ್ತಿಯಲ್ಲಿಯೇ ಇರುವ ಪೂರ್ವಪಂಜಾಬ್.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : *[ಮಾನ್ಯಗೆ, ಮಹಾಪ್ರಭುಗಳ ಹೇಳಿಕೆಯ ಮೇಲೆ ಇಡಿಯಾಗಿ ಚರ್ಚೆಯನ್ನು ಗೌರವಾನ್ವಿತ ಸದಸ್ಯರು ಪ್ರಾರಂಭಿಸಿರುವುದು ಕ್ರಮಬದ್ಧವಾಗಿದೆಯೆ ಎಂದು ನಾನು ತಿಳಿದುಕೊಳ್ಳಬಯಸುತ್ತೇನೆ. ಮಾನ್ಯ ಸದಸ್ಯರು ಇಡಿಯಾಗಿ ಆ ಹೇಳಿಕೆಯ ಮೇಲೆ ಹಾಗೂ ಕೆಲವು ಅಂಶಗಳ ಮೇಲೆ ವಿವರವಾಗಿ ಮಾತನಾಡುತ್ತಿದ್ದಾರೆ, ಆದರೆ, ಆ ಭಾಗಗಳಿಗೂ ಸದನದ ಮುಂದೆ ಪ್ರಕೃತ ಇರುವ ಪ್ರಸ್ತಾವಕ್ಕೂ ಯಾವುದೇ ಸಂಬಂಧವೂ ಇಲ್ಲ.]*

**ಮಾನ್ಯ ಸಭಾಧ್ಯಕ್ಷರು :** ಅವರು ಹೇಳಿಕೆಯ ೧೪ನೆಯ ಕಂಡಿಕೆಯ ಮೇಲೆ ಮಾತನಾಡುತ್ತಿದ್ದಾರೆಂದು ನನ್ನ ಭಾವನೆ, ಏಕೆಂದರೆ, ಪರಿಗಣನೆಯಲ್ಲಿರುವ ಈ ಪ್ರಸ್ತಾವದಲ್ಲಿ ಈ ಕಂಡಿಕೆಯ ಉಲ್ಲೇಖವಿದೆ. ಅದರ ಮೇಲೆ ಅವರು ತಮ್ಮ ವಾದವನ್ನು ಕಟ್ಟುತ್ತಿದ್ದಾರೆ. ಅವರು ಹೇಳುತ್ತಿರುವುದು ಕ್ರಮಬದ್ಧವಾಗಿಯೇ ಇದೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ತಾವು ಸರಿಯಾಗಿಯೇ ಹೇಳಿದ್ದೀರಿ. ಈಗ ನಾವು ಪರಿಗಣಿಸುತ್ತಿರುವ ನಿಲುವಳಿಯ ಮೇಲೆ ಪರೋಕ್ಷವಾಗಿ ಅದರ ಪ್ರಭಾವವಿದೆ. ನಾನು ೧೪ನೆಯ ಕಂಡಿಕೆಯಲ್ಲಿ ಹೇಳಲಾಗಿರುವ ಪ್ರದೇಶಗಳನ್ನು ಕುರಿತು ಮಾತನಾಡುತ್ತಿದ್ದೆ.

ಆ ಸದಸ್ಯರ ಚುನಾವಣೆ ಹಾಗೂ ಉದ್ದೇಶಿತ ಚುನಾವಣೆಯ ಪರಿಣಾಮವಾಗಿ, ಈ ಮೊದಲ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರು ಆ ದಿನದಿಂದ ತಮ್ಮ ಸ್ಥಾನವನ್ನು ತ್ಯಜಿಸಿದ್ದಾರೆಂದು ತಿಳಿಯಬೇಕಾಗುತ್ತದೆ. ಅವರೆಲ್ಲರೂ ರಾಜೀನಾಮೆಯನ್ನು ನೀಡಿದ್ದಾರೆಂಬುದು ನನಗೆ ತಿಳಿದಿದ್ದರೂ, ಮೊದಲ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರು, ಉದ್ದೇಶಿತ ಚುನಾವಣೆಯು ನಡೆಯುವವರೆಗೂ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿರುತ್ತಾರೆಂದು ಹೇಳಬಹುದು. ಮತ್ತೆ, ಉದ್ದೇಶಿತ ಚುನಾವಣೆಯಲ್ಲಿ ಆಯ್ಕೆಯಾಗಿ ಬರುವ ಸದಸ್ಯರು – ಹಾಗೂ ಇನ್ನು ಮುಂದೆ ಚುನಾಯಿತರಾಗುವವರು ಕೂಡ – ಚುನಾಯಿತರಾಗಿಯೇ ಬಂದಿದ್ದಾರೆ ಎಂಬುದನ್ನು ಹೇಳುವ ಪ್ರಯತ್ನವಾಗುತ್ತಿದೆ. ಆದರೆ ಇಲ್ಲಿ ಅಸಮಂಜಸವೆಂದು ತೋರುತ್ತಿರುವುದೇನೆಂದರೆ, ಈ ಹೊಸ ಸದಸ್ಯರು ತಮ್ಮ ಸದಸ್ಯತ್ವವನ್ನು ಪೂರ್ವಾನ್ವಯವಾಗಿ, ಅಂದರೆ, ಜೂನ್ ೩ರಿಂದಲೇ ಪಡೆಯುತ್ತಾರೆ. ಮೂರು ಚುನಾವಣೆಗಳನ್ನು ಇಲ್ಲಿ ಗಮನಿಸಬೇಕು ಎಂದು ನಾನು ಹೇಳುತ್ತೇನೆ. ನಮ್ಮಲ್ಲಿ ಹಲವರು ಆಯ್ಕೆಯಾಗಿರುವ ಎರಡನೆಯ ಚುನಾವಣೆಯನ್ನು ಈ ನಿಲುವಳಿಯು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಎರಡನೆಯ ಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರು ತಮ್ಮ ಸ್ಥಾನವನ್ನು ಹೊಸ ಸದಸ್ಯರು ಆಕ್ರಮಿಸಿಕೊಂಡದ್ದರಿಂದ ಕಳೆದುಕೊಳ್ಳುತ್ತಾರೆ. ಹಾಗಾಗಿ, ನಾವು ಇಲ್ಲಿ ಮಾಡಿರುವ ಕಾರ್ಯವೆಲ್ಲವನ್ನೂ ಮತ್ತು ನಾವು ಆಡಿರುವ ಮಾತುಗಳನ್ನೆಲ್ಲವನ್ನೂ ಕಡತದಿಂದ ತೆಗೆದುಹಾಕಬೇಕಾಗುತ್ತದೆ. ಈಗ ಮೂರನೆಯ ಚುನಾವಣೆಯು ನಡೆಯಬಹುದಾದ ಸಮಯವನ್ನು ನಾವು ಗಮನಿಸೋಣ. ಎರಡನೆಯ ಚುನಾವಣೆಯು ಜೂನ್ ೩ರ ಹೇಳಿಕೆಯು ಬಂದ ಒಂದು ತಿಂಗಳಿನ ಒಳಗೆ, ಅಂದರೆ ಜುಲೈ ಮೊದಲ ವಾರದಲ್ಲಿ, ನಡೆಯಿತು. ಮೂರನೆಯ ಚುನಾವಣೆಯು, ಅದರ ಮುಂದಿನ ಒಂದು ತಿಂಗಳಿನಲ್ಲಿ, ಅಂದರೆ ಆಗಸ್ಟ್ ೨೫ರ ಒಳಗೆ ನಡೆಯಬಹುದು. ಹಾಗಿದ್ದರೆ, ಗಂಭೀರವಾದ ಸಮಸ್ಯೆಗಳು ಉದ್ಭವವಾಗುತ್ತವೆ. ಚುನಾವಣೆಯು ಈಗ ಭಾರತದ ವ್ಯಾಪ್ತಿಯಿಂದ ಹೊರಗೆ ಇರುವ ಪ್ರದೇಶಗಳನ್ನೂ ಸೇರಿಸಿಕೊಂಡಂತೆ, ಎಲ್ಲ ಪ್ರದೇಶಗಳಲ್ಲಿಯೂ ನಡೆಯುತ್ತದೆ ಎಂದು ಈ ನಿರ್ಣಯವು ಹೇಳುತ್ತದೆ. ಆಗಸ್ಟ್ ೧೫ರ ಒಳಗೆ, ಈ ದೇಶದಲ್ಲಿ ಹೊಸ

ಪರಿವರ್ತನೆಯಾಗಲಿದೆ. ಎರಡು ಆಡಳಿತ ಪ್ರದೇಶಗಳು ಅಸ್ತಿತ್ವಕ್ಕೆ ಬರಲಿವೆ, ಮತ್ತು ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಅವರು ತಮ್ಮ ಅಧೀನದಲ್ಲಿ ಇರದ ಪ್ರದೇಶಗಳಲ್ಲಿಯೂ ಚುನಾವಣೆ ನಡೆಯಲಿದೆ ಎಂಬ ಆದೇಶವನ್ನು ನೀಡುವುದು ಗಂಭೀರವಾದ ಪ್ರಸ್ತಾವವಾಗುತ್ತದೆ. ಇಂತಹ ಸಂದರ್ಭದಲ್ಲಿ, ಈ ನಿರ್ಣಯವು ಕಾರ್ಯಸಾಧ್ಯವಾದುದಲ್ಲವೆಂಬುದನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಅದು ಗಂಭೀರವಾದ ವ್ಯತಿಕ್ರಮಗಳಿಗೆ ಕಾರಣವಾಗುತ್ತದೆ. ಭಾಷಣಕಾರರು ಹೇಳಿದಂತೆ, ಈ ನಿರ್ಣಯವು ಹಿಂದೆ ಸಂಭವಿಸಿದುದನ್ನು ಸರಿಪಡಿಸುವ ಉದ್ದೇಶವನ್ನು ಹೊಂದಿದೆ, ಸದನದ ಗೌರವವನ್ನು ಎತ್ತಿ ಹಿಡಿಯಲು ಪ್ರಯತ್ನಿಸುತ್ತಿದೆ. ಎರಡನೆಯ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರೇ ಮೂರನೆಯ ಚುನಾವಣೆಯಲ್ಲಿಯೂ, ಅದು ನಡೆದರೆ, ಆಯ್ಕೆಯಾಗುತ್ತಾರೆ ಎಂದು ಗೌರವಾನ್ವಿತ ಸದಸ್ಯರು ಊಹಿಸಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಕೆಲವರು ಮರಳಿ ಚುನಾಯಿತರಾಗಿ ಬರುವ ಸಂಭವವಿಲ್ಲವೆಂದು ನಾನು ನಿವೇದಿಸಬಯಸುತ್ತೇನೆ. ಹೊಸ ಸದಸ್ಯರೇ ಇಲ್ಲಿ ಇರುತ್ತಾರೆಂದು ಹೇಳಬಹುದು. ಸಂದರ್ಭವು ಹಾಗಿದ್ದರೆ, ನಮ್ಮಂತಹ ಸದಸ್ಯರ ಸದಸ್ಯತ್ವವನ್ನು ಸಕ್ರಮಗೊಳಿಸುವ ಪ್ರಸ್ತಾವದ ಪ್ರಶ್ನೆಯು ಏಳುವುದೇ ಇಲ್ಲ. ಇಲ್ಲಿಗೆ ಭಾರತದ ನಿಷ್ಠಾವಂತ ಹಾಗೂ ಕಾನೂನಿಗೆ ಬದ್ಧರಾಗಿರುವ ಪ್ರಜೆಗಳು ಎಂಬಂತೆ ಬಂದಿರುವ ನಮ್ಮ ಸಮರ್ಥನೆಯ ಗತಿ ಏನಾಗುತ್ತದೆ? ನಾವು ಸದಸ್ಯತ್ವದಿಂದ ಹೊರ ನಡೆದರೆ, ಆ ಸಮರ್ಥನೆಯು ಉಳಿದಿರುತ್ತದೆಯೇ ಅಥವಾ ಅದೂ ಅಳಿಸಿಹೋಗುತ್ತದೆಯೋ ಎಂದು ನಾನು ಕೇಳುತ್ತೇನೆ. ಲೀಗ್‌ನ ಪರವಾಗಿ ರಾಷ್ಟ್ರೀಯ ಧ್ವಜವನ್ನು ಒಪ್ಪಿಕೊಂಡಿರುವ ಚೌಧರಿ ಖಲಿಖುಜ್ಜಮಾನ್ ಸಾಹೇಬ್ ಅವರ ಒಪ್ಪಿಗೆಯ ಗತಿ ಏನಾಗುತ್ತದೆ? 'ಗ್ರೇಟ್ ಬುಕ್'ನಲ್ಲಿ ನಾವು ಮಾಡಿರುವ ಸಹಿಯ ಪರಿಣಾಮವು ಮುಂದುವರಿಯುತ್ತದೆಯೇ ಅಥವಾ ಅದು ಚರಿತ್ರೆಯನ್ನು ಸೇರುತ್ತದೆಯೆ? ಅವುಗಳನ್ನು ಅಳಿಸಿಹಾಕಲಾಗುತ್ತದೆಯೇ? ನಾವು ಇಲ್ಲಿಯವರೆಗೆ ಪಡೆದಿರುವ ಪ್ರಯಾಣಭತ್ಯೆ ಹಾಗೂ ದಿನಭತ್ಯೆಗಳ ಬಗೆಗಿನ ವಿಚಾರವೇನು? ನಾವು ಆ ಹಣವನ್ನು ಹಿಂದಿರುಗಿಸಬೇಕೇ ಅಥವಾ, ಅದನ್ನು ಕಾನೂನಿನ ಪ್ರಕಾರ ನಮ್ಮ ಉತ್ತರಾಧಿಕಾರಿಗಳಾಗಿ ಹಾಗೂ ಪ್ರತಿನಿಧಿಗಳಾಗಿ ಬರುವ ಹೊಸ ಸದಸ್ಯರ ಖಾತೆಗೆ ವರ್ಗಾಯಿಸಲಾಗುವುದೇ? ಈ ನಿರ್ಣಯವನ್ನು ಅಂಗೀಕರಿಸಿದರೆ, ಇಂತಹ ಹಲವು ಗಂಭೀರವಾದ ಪ್ರಶ್ನೆಗಳು ಏಳುತ್ತವೆ. ನಾನೀಗಾಗಲೇ ಹೇಳಿದಂತೆ ಈ ನಿರ್ಣಯದ ಹಿಂದೆ ಇರುವ ಉದ್ದೇಶಕ್ಕೆ ನನ್ನ ಅನುಕಂಪವಿದೆ. ಆದ್ದರಿಂದ ಈ ನಿರ್ಣಯದ ಅವ್ಯಾವಹಾರಿಕವಾಗಿದೆ. ಈ ನಿರ್ಣಯದಿಂದ ಸದನದ ಗೌರವವು ಎತ್ತಿಹಿಡಿಯಲ್ಪಡುತ್ತದೆ ಎಂದು ಅವರು ಹೇಳುತ್ತಾರೆ. ಆದರೆ ಇದರಿಂದ ಅಧ್ಯಕ್ಷರ ಗೌರವವು ಎತ್ತಿಹಿಡಿಯಲ್ಪಡುವುದಿರಲಿ ಅದಕ್ಕೆ ಇನ್ನೂ ಹೆಚ್ಚಿನ ಮಸಿ ಬಳಿಯುವ ಹಾಗಿದೆ. ಮಾನ್ಯ ಸಭಾಧ್ಯಕ್ಷರು ತಮ್ಮ ವಿವೇಚನೆಯ ಪ್ರಕಾರ ನಮಗೆ ಸದನದ ಕಾರ್ಯದಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಈ ನಿರ್ಣಯವನ್ನು ಅಂಗೀಕರಿಸಿದರೆ, ಅದು ಮಾನ್ಯ ಸಭಾಧ್ಯಕ್ಷರ ಕಾರ್ಯನೀತಿಗೆ ಅಗೌರವವನ್ನು ತರುತ್ತದೆ. ಸದನದ ಗೌರವವನ್ನು ಕಾಪಾಡುವುದು ಗೌರವಾನ್ವಿತ ಸದಸ್ಯರ ಇಚ್ಛೆಯಾಗಿದ್ದರೆ, ನಾವು ಎರಡನೆಯ ಚುನಾವಣೆಯನ್ನು ನೇರವಾಗಿ ಒಪ್ಪಿಕೊಳ್ಳುವ ಮೂಲಕ ಇದನ್ನು ಮಾಡಬಹುದಾಗಿದ್ದಿತು ಎಂದು ನಾನು ನಿವೇದಿಸುತ್ತೇನೆ. ಹೀಗೆ ಮಾಡಿದರೆ, ಎರಡನೆಯ ಚುನಾವಣೆಯನ್ನು ಗೌರವಯುತವಾದ ರೀತಿಯಲ್ಲಿ ಕ್ರಮಬದ್ಧಗೊಳಿಸಿದ ಹಾಗಾಗುತ್ತದೆ, ಅಕ್ರಮಗಳೇನಾದರೂ ಆಗಿದ್ದರೆ ಅದನ್ನೂ ಅದು ಸಕ್ರಮಗೊಳಿಸುತ್ತದೆ ಮತ್ತು ಸದನದ ಗೌರವವನ್ನು ರಕ್ಷಿಸುತ್ತದೆ. ಗೌರವಾನ್ವಿತ ಸದಸ್ಯರ ಉದ್ದೇಶವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ ಎಂದು ಮತ್ತೆ ಹೇಳುತ್ತೇನೆ. ಆದರೆ, ಇದರಲ್ಲಿ ಕೆಲವು ವ್ಯಾವಹಾರಿಕವಾದ ಸಮಸ್ಯೆಗಳು ಇವೆ ಮತ್ತು ಉತ್ತಮವಾದ ಪರಿಹಾರವೆಂದರೆ ಎರಡನೆಯ ಚುನಾವಣೆಯನ್ನು ಈ ಸದನವು ಸಾಧುವೆಂದು ಅಂಗೀಕರಿಸಬೇಕು. ಈ ಮಾತುಗಳೊಂದಿಗೆ, ಈ ನಿರ್ಣಯದ ಕಾರ್ಯಸಾಧುತ್ವವನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ಎಂದು ಹೇಳಿ ನಾನು ಅದನ್ನು ಗೌರವ ಪೂರ್ವಕವಾಗಿ ವಿರೋಧಿಸುತ್ತೇನೆ.]*

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಕ್ ಸೇಟ್** (ಮದ್ರಾಸು : ಮುಸ್ಲಿಮ್) : ನಾನು ನಿರ್ಣಯದ

ಕೊನೆಯ ಖಂಡದತ್ತ ಗೌರವಾನ್ವಿತ ಸದಸ್ಯರ ಗಮನವನ್ನು ಸೆಳೆಯಬಹುದೇ? ಈ ನಿಯಮವು ೧೯೪೭ರ ಜೂನ್ ೩ರಿಂದ ಅಂದರೆ, ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆ ಎಂದು ಅದು ಹೇಳುತ್ತದೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಅದು ಸಮಸ್ಯೆಯನ್ನು ಬಗೆಹರಿಸುವುದೇ ಇಲ್ಲ. ಇಲ್ಲಿರುವ ಅಂಶವೆಂದರೆ, ಚುನಾವಣೆಯಲ್ಲಿ ಚುನಾಯಿತರಾಗಿ ಬಂದಿರುವ ಗೌರವಾನ್ವಿತ ಸದಸ್ಯರೆಲ್ಲರೂ ಮೂರನೆಯ ಚುನಾವಣೆಯಲ್ಲಿ ಆಯ್ಕೆಯಾಗಿ ಬರುತ್ತಾರೆಯೇ ಎಂಬುದು. ಯಾರಾದರೂ ಅಂತಹ ಭರವಸೆಯನ್ನು ನೀಡಬಲ್ಲರೇ? ಈ ಸದಸ್ಯರೇ ಮತ್ತೆ ಆಯ್ಕೆಯಾಗಿ ಬಂದರೆ, ಪೂರ್ವಾನ್ವಯವಾಗಿ ಜಾರಿಗೆ ಬರುವ ಈ ಖಂಡಕ್ಕೆ ಸ್ವಲ್ಪ ಅರ್ಥವಾದರೂ ಇದ್ದೀತು. ನನ್ನ ಅಲ್ಪಮತಿಗೆ ತಿಳಿದಿರುವ ಪ್ರಕಾರ, ಮೂರನೆಯ ಚುನಾವಣೆಯಲ್ಲಿ ಪ್ರಥಮಬಾರಿಗೆ ಆಯ್ಕೆಯಾಗುವ ಸದಸ್ಯರ ಪಾಲಿಗೆ ಈ ಖಂಡವು ಯಾವುದೇ ರೀತಿಯಲ್ಲಿಯೂ ಸಂಗತವಾಗಿರುವುದಿಲ್ಲ. ಇಷ್ಟಾದಮೇಲೂ, ಅಲ್ಲಿ ಎರಡು ವರ್ಗದ ಸದಸ್ಯರು ಇರುತ್ತಾರೆ, ಮೊದಲನೆಯ ಪಂಗಡದವರು ಮತ್ತು ಎರಡನೆಯ ಪಂಗಡದವರು. ಈ ನಿಲುವಳಿಯ ಪ್ರಕಾರ ಇವೆರಡೂ ಪಂಗಡದವರ ಸದಸ್ಯತ್ವದ ಅವಧಿ ಒಂದೇ ಆಗಿರುತ್ತದೆ. ಇಷ್ಟು ಹೇಳಿ, ನಾನು ಈ ನಿರ್ಣಯವನ್ನು ಅಂಗೀಕರಿಸುವುದನ್ನು ವಿರೋಧಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಮಧ್ಯಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಈ ನಿರ್ಣಯವನ್ನು ಮಂಡಿಸಿದವರ ಉದ್ದೇಶವನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಅದೇ ಸಮಯದಲ್ಲಿ, ನನಗೆ ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತಿದೆ. ಈ ನಿರ್ಣಯವು ಮಹಾಪ್ರಭುಗಳ ಸರ್ಕಾರದ ಜೂನ್ ೩ರ ಹೇಳಿಕೆಯ ಅನ್ವಯ ಗವರ್ನರ್ ಜನರಲ್ ಅವರಿಗೆ ಮುಂದೆಯೂ ಇದನ್ನೋ ಅಥವಾ ಅದನ್ನೋ ಮಾಡಲು ಅಧಿಕಾರವನ್ನು ನೀಡುತ್ತದೆ ಅಥವಾ ನೀಡಲು ಬಯಸುತ್ತದೆ. ನಮ್ಮ ನಿಯಮಗಳ ಮಧ್ಯೆ ಗವರ್ನರ್ ಜನರಲ್ ಅವರನ್ನು ಏಕೆ ಎಳೆದು ತರಬೇಕೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ಆಗಿಹೋಗಿರುವುದನ್ನು ಸಕ್ರಮಗೊಳಿಸುವುದು ಶ್ರೀ ಶ್ರೀಪ್ರಕಾಶ ಅವರ ಉದ್ದೇಶ ಮತ್ತು ಅವರ ಪ್ರಕಾರ ಆಗಬಾರದಾಗಿದ್ದು ಆಗಿದೆ. ಅದು ಔಚಿತ್ಯದ ನಡೆಯಾಗಿರಲಿಲ್ಲವೆಂಬುದನ್ನು ನಾನೂ ಒಪ್ಪುತ್ತೇನೆ. ಅದನ್ನು ಈಗ ಅಧಿಕೃತಗೊಳಿಸಬೇಕೆಂಬುದನ್ನೂ ಒಪ್ಪುತ್ತೇನೆ. ಆದರೆ, ಇದನ್ನು ಮಾಡುವುದಕ್ಕೆ ನಮ್ಮ ನಿಯಮಗಳಲ್ಲಿ ಮೂಲಭೂತವಾದ ಬದಲಾವಣೆಯನ್ನು ಮಾಡುವ ಮೂಲಕ, ಗವರ್ನರ್ ಜನರಲ್ ಅವರಿಗೆ ಅಧಿಕಾರವನ್ನು ನೀಡುವ ಮೂಲಕ, ಮಾಡಬೇಕಾಗಿಲ್ಲ. ಮಾನ್ಯರೆ, ಆದ್ದರಿಂದ, ಈ ನಿರ್ಣಯವನ್ನು ಅದು ಈಗಿರುವ ರೀತಿಯಲ್ಲಿಯೇ ಚರ್ಚೆಗೆ ಒಳಪಡಿಸುವುದರ ಬದಲು, ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಇದನ್ನು ಒಪ್ಪಿಸಿ ಅದನ್ನು ಸುಬದ್ಧಗೊಳಿಸುವಂತೆ ಮಾಡುವುದು ಉತ್ತಮವೆಂದು ನಾನು ಸೂಚಿಸಬಯಸುತ್ತೇನೆ. ಆ ಸಮಿತಿಯು ಶ್ರೀ ಶ್ರೀಪ್ರಕಾಶ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀ ಬಿ.ಎಲ್. ಮಿಟ್ಟರ್ ಅವರನ್ನು ಒಳಗೊಂಡಿರಬೇಕೆಂಬ ಸಲಹೆಯನ್ನೂ ನಾನು ನೀಡುತ್ತಿದ್ದೇನೆ.

ಈ ವಿಷಯವು ಕಾನೂನಿಗೆ ಸಂಬಂಧಪಟ್ಟಿರುವುದರಿಂದ, ಶ್ರೀ ಶ್ರೀಪ್ರಕಾಶ ಅವರು ವೃತ್ತಿಪರರಾಗಿ ಕಾನೂನಿನ ವೃತ್ತಿಯನ್ನು ಕೈಗೆತ್ತಿಕೊಂಡಿಲ್ಲದಿದ್ದರೂ, ಅವರನ್ನೂ ಒಳಗೊಂಡ ಈ ಮೂವರು ವಕೀಲರು ಸಮಿತಿಯಲ್ಲಿರಬೇಕೆಂದು ನಾನು ಸೂಚಿಸಿದ್ದೇನೆ. ಇದನ್ನು ಪರಿಶೀಲಿಸಿ, ಒಂದು ನಿರ್ಣಯದ ರೂಪದಲ್ಲಿ (ನಿಯಮಗಳಿಗೆ ತಿದ್ದುಪಡಿಯಲ್ಲ) ಕರಡನ್ನು ಸಿದ್ಧಪಡಿಸುವುದಕ್ಕೆ ಹೆಚ್ಚಿನ ಸಮಯವೇನೂ ಹಿಡಿಯುವುದಿಲ್ಲ ಎಂಬುದು ನನ್ನ ತಿಳಿವಳಿಕೆ.

**ಶ್ರೀ ಶ್ರೀಪ್ರಕಾಶ :** ನನ್ನ ಸ್ನೇಹಿತ ಪಂಡಿತ್ ಜವಾಹರಲಾಲ್ ನೆಹರು ಅವರು ಈಗ ತಾನೇ ಹೇಳಿದುದಕ್ಕೆ ನನ್ನ ಸಮ್ಮತಿಯಿದೆ. ವಾಸ್ತವವಾಗಿ, ನಾನು ಈ ನಿರ್ಣಯವನ್ನು ಈ ಅಧಿವೇಶನದ ಪ್ರಾರಂಭದಲ್ಲಿಯೇ ಮಂಡಿಸಿದ್ದೆ. ಆದರೆ, ಆಗ ವಾಯವ್ಯ ಗಡಿಪ್ರದೇಶಗಳ ಪ್ರಾಂತ್ಯದಲ್ಲಿ ಜನಾಭಿಪ್ರಾಯ ಸಂಗ್ರಹಣೆ ಪ್ರಾರಂಭವಾಗುವುದರಲ್ಲಿತ್ತು, ಅಲ್ಲದೆ, ಇನ್ನು ಮೂವರು ಸದಸ್ಯರನ್ನು ವಜಾಗೊಳಿಸುವ ಸನ್ನಿವೇಶವೂ ಇತ್ತು.

ಅನಂತರ, ಅವರು ವಜಾಗೊಂಡರು ಕೂಡ. ಈ ಕಾರಣದಿಂದಾಗಿಯೇ ನಾನು ಗವರ್ನರ್ ಜನರಲ್ ಅವರಿಗೆ ಈ ಅಧಿಕಾರವನ್ನು ನೀಡುವ ಪ್ರಸ್ತಾವವನ್ನು ಇದರಲ್ಲಿ ಸೇರಿಸಿದ್ದೆ. ಈಗ ಇವೆಲ್ಲವೂ ಮುಗಿದುಹೋಗಿದೆ ಮತ್ತು ಮಹಾಪ್ರಭುಗಳ ಸರ್ಕಾರದ ಜೂನ್ ಮೂರರ ಹೇಳಿಕೆಗೆ ಸಂಬಂಧಿಸಿದಂತೆ ಗವರ್ನರ್ ಜನರಲ್ ಅವರು ಮಾಡಬೇಕಾದುದು ಏನೂ ಇಲ್ಲವೆಂಬುದು ನನ್ನ ಅರಿವಿಗೆ ಬಂದಿದೆ. ಪಂಡಿತ್ ನೆಹರು ಅವರು ಸಲಹೆಯನ್ನು ಮಾಡಿದಂತೆ ಇದನ್ನು ಒಂದು ನಿರ್ಣಯದ ರೂಪದಲ್ಲಿ ತರಬಹುದು ಮತ್ತು ಇದಕ್ಕಾಗಿ ನೇಮಿಸಿದ ಸಮಿತಿಯು ಅದನ್ನು ಸುಬದ್ಧಗೊಳಿಸುವ ಕಾರ್ಯವನ್ನು ನೆರವೇರಿಸುವುದಕ್ಕೂ ನನ್ನ ಸಮ್ಮತಿಯಿದೆ. ಈಗ ನಾನು ನನ್ನ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಲು ಸದನದ ಅನುಮತಿಯನ್ನು ಬೇಡುತ್ತೇನೆ.

ಸದನದ ಅನುಮತಿಯ ಮೇರೆಗೆ ಪ್ರಸ್ತಾವವನ್ನು ಹಿಂಪಡೆಯಲಾಯಿತು

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** (ಬಿಹಾರ : ಮುಸ್ಲಿಮ್) : ಅಸ್ಸಾಮಿನ ವಿಷಯವೇನು? ಅಲ್ಲಿ ಚುನಾವಣೆಗಳು ಇನ್ನೂ ಪ್ರಾರಂಭವಾಗಬೇಕಾಗಿದೆ.

**ಶ್ರೀ ಶ್ರೀಪ್ರಕಾಶ** : ಸಮಿತಿಯು ಅಸ್ಸಾಮನ್ನು ಕುರಿತು ಪರಿಶೀಲಿಸಬೇಕು.

**ಮಾನ್ಯ ಸಭಾಧ್ಯಕ್ಷರು** : ಈ ನಿರ್ಣಯವು ಈ ಲೋಪವನ್ನು ಹೊಂದಿದೆ ಎಂಬುದರ ಬಗೆಗೆ ನಾನೂ ಹೇಳುವವನಿದ್ದೆ. ಅದು ಸಿಲ್ಹೆಟ್‌ನ್ನು ಹೊರತುಪಡಿಸಿ, ಅಸ್ಸಾಮಿನ ಸದಸ್ಯರನ್ನು ಕುರಿತು ಏನನ್ನೂ ಹೇಳುವುದಿಲ್ಲ. ಈಗ ನಾವು ಅನುಸರಿಸಬಹುದಾದ ಉತ್ತಮ ಮಾರ್ಗವೆಂದರೆ, ಪಂಡಿತ್ ಜವಾಹರಲಾಲ್ ನೆಹರು ಅವರು ಸಲಹೆ ಮಾಡಿದಂತೆ, ಇದನ್ನು ಒಂದು ಉಪಸಮಿತಿಗೆ ಒಪ್ಪಿಸುವುದು ಮತ್ತು ಆ ಉಪಸಮಿತಿಯು ಇದರ ಕರಡನ್ನು ತಿದ್ದತಕ್ಕದ್ದು, ಏಕೆಂದರೆ ಇದರ ಉದ್ದೇಶವನ್ನು ಕುರಿತು ಯಾರೂ ವಿರೋಧವನ್ನು ಹೊಂದಿಲ್ಲ. ಆದುದರಿಂದ, ಈ ನಿರ್ಣಯವನ್ನು ತಿದ್ದುವ ಕಾರ್ಯವನ್ನು ಶ್ರೀ ಶ್ರೀಪ್ರಕಾಶ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಶ್ರೀ ಬಿ.ಎಲ್. ಮಿಟ್ಟರ್ ಅವರುಗಳನ್ನೊಳಗೊಂಡ ಉಪಸಮಿತಿಗೆ ವಹಿಸಲು ಸದನವು ಒಪ್ಪಿದೆಯೆಂದು ನಾನು ಭಾವಿಸಬಹುದೇ?

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಒಕ್ಕೂಟದ ಸಂವಿಧಾನ ಸಮಿತಿಯ ವರದಿ

**ಮಾನ್ಯ ಸಭಾಧ್ಯಕ್ಷರು** : ನಾವೀಗ ಒಕ್ಕೂಟ ಸಂವಿಧಾನ ಸಮಿತಿಯ ವರದಿಯ ಪರಿಶೀಲನೆಯನ್ನು ಕೈಗೆತ್ತಿಕೊಳ್ಳೋಣ. ಮೊದಲಿಗೆ ನಾಲ್ಕನೆಯ ಭಾಗದ ೬ನೆಯ ಖಂಡವನ್ನು ಪರಿಶೀಲಿಸೋಣ.

### ೬ನೆಯ ಖಂಡ

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಉಪರಾಷ್ಟ್ರಪತಿಯವರ ಹುದ್ದೆಗೆ ಸಂಬಂಧಿಸಿದ ಈ ೬ನೆಯ ಖಂಡವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ:

"(೧) ರಾಷ್ಟ್ರಪತಿಯ ಗೈರುಹಾಜರಿ, ಸಾವು, ರಾಜೀನಾಮೆ, ಹುದ್ದೆಯಿಂದ ವಜಾ, ಅಥವಾ ಅಸಾಮರ್ಥ್ಯ ಅಥವಾ ಕರ್ತವ್ಯಚ್ಯುತಿ – ಯಾವುದೇ ಕಾರಣದಿಂದ ತಮ್ಮ ಅಧಿಕಾರವನ್ನು ಚಲಾಯಿಸಲು ಮತ್ತು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಅಥವಾ ರಾಷ್ಟ್ರಪತಿಯವರ ಸ್ಥಾನವು ಖಾಲಿಯಾಗಿದ್ದರೆ, ಅವರು ಪುನಃ ತಮ್ಮ ಕರ್ತವ್ಯವನ್ನು ವಹಿಸಿಕೊಳ್ಳುವವರೆಗೆ ಅಥವಾ ಹೊಸ ರಾಷ್ಟ್ರಪತಿ ಚುನಾಯಿತರಾಗಿ ಅಧಿಕಾರವನ್ನು ವಹಿಸಿಕೊಳ್ಳುವವರೆಗೆ, ಉಪರಾಷ್ಟ್ರಪತಿ, ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(೨) ಒಕ್ಕೂಟದ ಸದನದ ಎರಡೂ ಸದನಗಳು ಒಟ್ಟಿಗೆ ಸಭೆ ಸೇರಿ ಅವುಗಳ ಸದಸ್ಯರು ಗುಪ್ತಮತದಾನದ ಪ್ರಕಾರ ಅನುಪಾತೀಯ ಮೌಲ್ಯವಿರುವ, ವರ್ಗಾಯಿಸಬಲ್ಲ ಏಕಮಾತ್ರ ಮತದ ಮೂಲಕ ಉಪರಾಷ್ಟ್ರಪತಿಯನ್ನು ಆಯ್ಕೆಮಾಡತಕ್ಕದ್ದು ಮತ್ತು ಉಪರಾಷ್ಟ್ರಪತಿ ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ.

(೩) ಉಪರಾಷ್ಟ್ರಪತಿಯ ಅಧಿಕಾರಾವಧಿಯು ಐದು ವರ್ಷಗಳಾಗಿರುತ್ತವೆ."

ಮಾನ್ಯರೆ, ಈ ನಿರ್ಣಯವನ್ನು ಮಂಡಿಸಿದಾಗ ಬರುವ ಕೆಲವು ತಿದ್ದುಪಡಿಗಳನ್ನು ಒಪ್ಪಿಕೊಳ್ಳುತ್ತೇನೆ ಎಂಬುದನ್ನು ಇಲ್ಲಿ ತಿಳಿಸಬಯಸುತ್ತೇನೆ. ಈ ತಿದ್ದುಪಡಿಗಳು ಈ ಖಂಡದಲ್ಲಿ ಬಳಸಿರುವ ಪದಗಳಿಗೆ ಹಾಗೂ ಇದರಲ್ಲಿ ಇರಬಹುದಾದ ಕೊರತೆಗಳಿಗೆ ಸಂಬಂಧಪಟ್ಟವಾಗಿರಬೇಕು. ರಾಷ್ಟ್ರಪತಿಗೆ ನಿಗದಿಪಡಿಸಿರುವ ೩೫ ವರ್ಷಗಳನ್ನೇ ಉಪರಾಷ್ಟ್ರಪತಿಯ ವಯೋಮಿತಿಯನ್ನಾಗಿ ನಿಗದಿಪಡಿಸಬೇಕೆಂಬುದು ಈ ಸದನದ ಅಪೇಕ್ಷೆಯಾಗಿದೆ. ಅದನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ.

(ಶ್ರೀ ಎ.ಕೆ. ಘೋಷ್ ಅವರು ೧೬೫ನೆಯ ಕ್ರಮಾಂಕದ ತಿದ್ದುಪಡಿಯನ್ನು ಮಂಡಿಸಲಿಲ್ಲ)

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ೬ನೆಯ ಖಂಡದ ಮೊದಲನೆಯ ಉಪಖಂಡಕ್ಕೆ ಈ ಮುಂದಿನದನ್ನು ಬದಲಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ:

"(೧) ಒಕ್ಕೂಟದಲ್ಲಿ ರಾಷ್ಟ್ರಪತಿಯವರು ಅನುಪಸ್ಥಿತರಾಗಿದ್ದಾಗ ಅಥವಾ ಅವರ ಮರಣ, ರಾಜೀನಾಮೆ, ಹುದ್ದೆಯಿಂದ ವಜಾ ಇವುಗಳ ಕಾರಣದಿಂದ ಅವರ ಹುದ್ದೆ ತೆರವಾಗಿದ್ದಾಗ ಅಥವಾ ರಾಷ್ಟ್ರಪತಿಗೆ ತಮ್ಮ ಅಸ್ವಸ್ಥತೆಯಿಂದ ಅಥವಾ ಇನ್ನಾವುದೇ ಕಾರಣದಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗದೆ ಇದ್ದಾಗ, ಅವರ ಗೈರುಹಾಜರಿಯಲ್ಲಿ, ಅವರ ಸ್ಥಾನವು ತುಂಬಲ್ಪಡದೆ ಇದ್ದ ಪರಿಸ್ಥಿತಿಯಲ್ಲಿ ಅಥವಾ ಅವರ ಅಸಾಮರ್ಥ್ಯದ ಸಂದರ್ಭದಲ್ಲಿ, ಅವರ ಕರ್ತವ್ಯಗಳನ್ನು ಉಪರಾಷ್ಟ್ರಪತಿ ನಿರ್ವಹಿಸತಕ್ಕದ್ದು."

ಮಾನ್ಯರೆ, ಮೂಲ ಖಂಡದಲ್ಲಿ ಕೆಲವು ಎಡೆಗಳಲ್ಲಿ ಪದವಿನ್ಯಾಸವು ನನ್ನ ಅಲ್ಪಮತಿಗೆ ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತಿದೆ. ಈ ಸದನವು ಅಥವಾ ಕರಡು ರಚನಾಸಮಿತಿಯು ಕಷ್ಟವನ್ನು ಅರಿತುಕೊಂಡು ನನ್ನ ಸಲಹೆಯನ್ನು ಪರಿಗಣಿಸಲಿ ಎಂದು ಇದನ್ನು ಮಂಡಿಸುತ್ತಿದ್ದೇನೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಉಪರಾಷ್ಟ್ರಪತಿ, ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸಲು ಈ ಖಂಡವು ಅವಕಾಶವನ್ನು ಮಾಡಿಕೊಡುತ್ತದೆ. ಇದರಲ್ಲಿ, ಗೈರುಹಾಜರಿ ಎಲ್ಲಿಂದ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಪ್ರಾಂತ್ಯಗಳ ಸಚಿವರು, ತಮ್ಮ ಕಚೇರಿಯಲ್ಲಿ ಇಲ್ಲದಿದ್ದಾಗಲೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ ಎಂಬುದನ್ನು ನಾವು ಬಲ್ಲೆವು. ಈ ಖಂಡದಲ್ಲಿ ಗೈರುಹಾಜರಾಗುವುದು ಎಂದರೆ 'ಒಕ್ಕೂಟದಿಂದ ಗೈರುಹಾಜರಾಗಿರುವುದು' ಎಂಬ ಉದ್ದೇಶವಿರಬೇಕು. ಇದನ್ನೇ ನಾನು ನನ್ನ ತಿದ್ದುಪಡಿಯಲ್ಲಿ ಅಳವಡಿಸಲು ಪ್ರಯತ್ನಿಸಿದ್ದೇನೆ. ರಾಷ್ಟ್ರಪತಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾಗಿದ್ದಾರೆ ಎಂಬುದನ್ನು ದೃಢೀಕರಿಸಿದ ಅನಂತರವೇ ಉಪರಾಷ್ಟ್ರಪತಿ ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸಬಹುದು. ಅಸಮರ್ಥತೆ ಎಂದರೆ ಏನು ಮತ್ತು ಅದು ಏನನ್ನು ಸೂಚಿಸುತ್ತದೆ ಎಂಬುದನ್ನು ನಿರ್ಧರಿಸುವುದು ಬಹಳ ಕಷ್ಟಕರವಾದುದು. ರಾಷ್ಟ್ರಪತಿ ಒಂದು ನಿರ್ದಿಷ್ಟ ರೀತಿಯಲ್ಲಿ ವರ್ತಿಸಬಹುದು. ಬೇರೆಯವರು ಅದನ್ನು ರಾಷ್ಟ್ರಪತಿಯ ಅಸಮರ್ಥತೆ ಎಂದು ಹೇಳಬಹುದು. ಆದರೆ, ರಾಷ್ಟ್ರಪತಿ ಈ ವ್ಯಕ್ತಿಗಳು ತಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಹುದು ಮತ್ತು ಹಲವರು ರಾಷ್ಟ್ರಪತಿಯ ಈ ದೃಷ್ಟಿಯನ್ನು ಸಮರ್ಥಿಸಲೂಬಹುದು. 'ಅಸಮರ್ಥತೆ'ಯನ್ನು ಯಾವ ನ್ಯಾಯಾಲಯವೂ, ಅಥವಾ ನ್ಯಾಯಮಂಡಲಿಯೂ ಅರ್ಥೈಸಿ ತೀರ್ಪನ್ನು ನೀಡಲಾರದು. ಅನಂತರ ಎದುರಾಗುವ ಪ್ರಶ್ನೆ: 'ರಾಷ್ಟ್ರಪತಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾಗಿದ್ದಾರೆಯೇ?' ಈ ಅನಿರ್ದಿಷ್ಟತೆಯನ್ನು ನಾವು ನಿವಾರಿಸಬೇಕು. 'ಅಸಮರ್ಥತೆ' ಎನ್ನುವ ಶಬ್ದದಲ್ಲಿ ನಿರ್ದಿಷ್ಟತೆಯಿಲ್ಲದಿರುವುದರಿಂದ ಅದು ಗಂಭೀರವಾದ ಸಮಸ್ಯೆಗಳಿಗೆ ಮತ್ತು ಕಚ್ಚಾಟಗಳಿಗೆ ಕಾರಣವಾಗಬಹುದು.

'ತಮ್ಮ ಅಧಿಕಾರವನ್ನು ಚಲಾಯಿಸಲು ಮತ್ತು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾಗಿದ್ದರೆ' ಎಂಬ ಉಕ್ತಿ ಕೂಡ ನಿರ್ದಿಷ್ಟತೆಯನ್ನು ಹೊಂದಿಲ್ಲ. 'ತಮ್ಮ ಅಧಿಕಾರವನ್ನು ಚಲಾಯಿಸಲು ಮತ್ತು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾಗಿದ್ದರೆ' ಎಂದರೆ ಏನೆಂಬುದು ಸ್ಪಷ್ಟವಾಗಿಲ್ಲ ಮತ್ತು ಇಲ್ಲಿಯೂ 'ಅಸಮರ್ಥತೆ'ಯನ್ನು ವಿವರಿಸಲು ಎದುರಾಗಿದ್ದ ವಾದಗಳು, ಆಕ್ಷೇಪಣೆಗಳು ಮೇಲೇಳುತ್ತವೆ. ಆದುದರಿಂದ, ನಾನು ಸಲಹೆಮಾಡಿರುವ ಈ ಉಪಖಂಡದಲ್ಲಿ ಅದನ್ನು ಸದನವು ಪರಿಗಣಿಸುವುದಾದರೆ ಈ ಮೂಲಭೂತ ಸಮಸ್ಯೆಯನ್ನು ಹಾಗೂ ಆಕ್ಷೇಪಣೀಯವೆನ್ನಬಹುದಾದ ಲಕ್ಷಣಗಳನ್ನು ನಿವಾರಿಸುವ ಪ್ರಯತ್ನವನ್ನು ಮಾಡಿದ್ದೇನೆ. ಇಷ್ಟಲ್ಲದೆ, ಈ ಉಪಖಂಡದಲ್ಲಿ ಹೊಸದು ಎನ್ನಬಹುದಾದುದು ಯಾವುದೂ ಇಲ್ಲ. ಗಂಭೀರ ಸ್ವರೂಪದ ಈ ಸಮಸ್ಯೆಗಳನ್ನು ಪರಿಗಣಿಸಬೇಕು ಮತ್ತು ನಾನು ಮಂಡಿಸಿರುವ ಉಪಖಂಡವನ್ನು ಅಂಗೀಕರಿಸಬೇಕು ಎಂದು ನಿವೇದಿಸಿಕೊಳ್ಳುತ್ತೇನೆ. ನಾವು ಈಗ ಮೂಲ ಕರಡನ್ನು ಪರಿಗಣಿಸುತ್ತಿಲ್ಲ, ಕೆಲವೊಂದು ಸಮಸ್ಯೆಗಳನ್ನು ಮತ್ತು ಕೆಲವೊಂದು ಆಕ್ಷೇಪಣೀಯ ಲಕ್ಷಣಗಳನ್ನು ನಿವಾರಿಸಲು ಈ ಉಪಖಂಡವನ್ನು ಪರಿಶೀಲಿಸಬೇಕಾಗಿದೆ. ಇಷ್ಟು ಹೇಳಿ, ನಾನು, ಮೂಲ ನಿರ್ಣಯವನ್ನು ಮಂಡಿಸಿರುವ ಗೌರವಾನ್ವಿತ ಸದಸ್ಯರನ್ನು, ನನ್ನ ತಿದ್ದುಪಡಿಯನ್ನು ಪರಿಶೀಲಿಸಿ, ಅದನ್ನು ಅವರ ನಿರ್ಣಯವನ್ನು ಅಡಕವಾಗಿರುವ ನೀತಿಯೊಂದಿಗೆ ಸಮನ್ವಯಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ನಿಮ್ಮ ತಿದ್ದುಪಡಿಯಲ್ಲಿ 'ಖಾಲಿಯಾಗಿರುವ' ಎಂಬ ಪದವನ್ನು .......ಅಥವಾ ಒಕ್ಕೂಟದಲ್ಲಿ ರಾಷ್ಟ್ರಪತಿ ಅನುಪಸ್ಥಿತರಾಗಿದ್ದಾಗ ಅಥವಾ ಅವರ ಮರಣ, ರಾಜೀನಾಮೆ, ಹುದ್ದೆಯಿಂದ ವಜಾ ಇವುಗಳ ಕಾರಣದಿಂದ' ಎಂಬ ಪದಗಳ ಅನಂತರ ಸೇರಿಸಬೇಕೆಂದು ಭಾವಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಸರಿ, ಮಾನ್ಯರೆ. 'ಖಾಲಿಯಾಗಿರುವ' ಎಂಬ ಪದವನ್ನು ಅಲ್ಲಿ ಸೇರಿಸಬೇಕು. ಆತುರದಿಂದ ನಾನು ಇದನ್ನು ಸಿದ್ಧಪಡಿಸಿದುದರಿಂದ ಅದು ನನ್ನ ಕಣ್ಣನ್ನು ತಪ್ಪಿಸಿದೆ. ಇದನ್ನು ತೋರಿಸಿದುದಕ್ಕಾಗಿ ನಾನು ತಮಗೆ ಕೃತಜ್ಞನಾಗಿದ್ದೇನೆ. 'ಖಾಲಿಯಾಗಿರುವ' ಎಂಬ ಪದವನ್ನು ಅದರ ಸಂದರ್ಭದಲ್ಲಿ ಸೇರಿಸಬೇಕು.

(ಶ್ರೀ ಜದುಬನ್ಸ್ ಸಹಾಯ್ ಅವರು ೧೬೭ನೇ ಕ್ರಮಾಂಕದ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ.)

**ಶ್ರೀ ಬಿ. ಪಾಕರ್ ಸಾಹಿಬ್ ಬಹದೂರ್** (ಮದ್ರಾಸು : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

"೬ನೆಯ ಖಂಡದ ೧ನೆಯ ಉಪಖಂಡದಲ್ಲಿರುವ 'ಅಥವಾ ಯಾವುದೇ ಕಾರಣದಿಂದ ತಮ್ಮ ಅಧಿಕಾರವನ್ನು ಚಲಾಯಿಸಲು ಮತ್ತು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗದ' ಎಂಬ ಪದಗಳನ್ನು ಕೈಬಿಡತಕ್ಕದ್ದು."

ವಾಸ್ತವವಾಗಿ, ಈ ತಿದ್ದುಪಡಿಯ ಹಿಂದಿರುವ ಕಾರಣಗಳನ್ನು ನನಗಿಂತ ಮೊದಲು ಮಾತನಾಡಿದ ಗೌರವಾನ್ವಿತ ಸದಸ್ಯರು ವಿವರಿಸಿದ್ದಾರೆ. ಈ ಉಕ್ತಿಗಳು ಅಸ್ಪಷ್ಟವಾಗಿರುವುದಷ್ಟೇ ಅಲ್ಲದೆ, ಪ್ರಕರಣದ ಇತರ ಭಾಗಗಳ ಮೂಲಕ ಇಂತಹ ಸನ್ನಿವೇಶಗಳನ್ನು ನಿಭಾಯಿಸಬಹುದಾದುದರಿಂದ ಇವು ಅನಗತ್ಯವಾದುವಾಗಿವೆ. ರಾಷ್ಟ್ರಪತಿಯ ಅಸಮರ್ಥತೆ ಅಥವಾ ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ಯಾರು ನಿರ್ಣಯಿಸುತ್ತಾರೆ ಮತ್ತು ಹಾಗೆ ಹೇಳಲು ಇರುವ ಮಾನದಂಡಗಳಾವುವು? ಇವು ವಾಸ್ತವದಲ್ಲಿ ಸ್ಪಷ್ಟವಾಗಿರುವುದಿಲ್ಲವಾದ್ದರಿಂದ ಈ ಖಂಡದ ಅಗತ್ಯವೇ ಇಲ್ಲ. ಏಕೆಂದರೆ, ಒಬ್ಬ ವ್ಯಕ್ತಿಯು ತನ್ನ ಕರ್ತವ್ಯಗಳನ್ನು ಮಾಡುವುದರಲ್ಲಿ ಅಸಮರ್ಥನಾಗಿದ್ದರೆ ಅಥವಾ ವಿಫಲನಾಗಿದ್ದರೆ, ಅಂತಹ ವ್ಯಕ್ತಿಯನ್ನು ಅವರ ಸ್ಥಾನದಿಂದ ತೆಗೆದುಹಾಕುವುದು ಸಮಸ್ಯೆಗೆ ಪರಿಹಾರವಾಗುತ್ತದೆ. ಆದ್ದರಿಂದ, ಮಾನ್ಯರೆ, ಇಂತಹ ಒಂದು ಅಸ್ಪಷ್ಟವಾದ ಖಂಡವನ್ನು ಯಾವುದೇ ಕಾನೂನಿನಲ್ಲಿ ಅಳವಡಿಸುವುದು ಅನಾವಶ್ಯಕವಾಗಿರುತ್ತದೆ ಮತ್ತು ಅದು ಉಚಿತವೂ ಅಲ್ಲ. ಆದ್ದರಿಂದ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಗುಪ್ತೆ ಅವರೆ, ನಿಮ್ಮ ತಿದ್ದುಪಡಿಯು, ಈಗ ತಾನೆ ಮಂಡಿಸಿರುವ ತಿದ್ದುಪಡಿಯ ಹಾಗೆಯೇ ಇದೆ.

ಶ್ರೀ ಸುಬ್ರಮಣಿಯಮ್, ಶ್ರೀ ದಿವಾಕರ್, ಶ್ರೀ ನಜಿರುದ್ದೀನ್ ಅಹ್ಮದ್ ಅವರೇ ನಿಮ್ಮ ತಿದ್ದುಪಡಿಗಳು ಕೂಡ ಈಗ ತಾನೆ ಮಂಡಿಸಿರುವ ತಿದ್ದುಪಡಿಯ ಹಾಗೆಯೇ ಇವೆ.

(೧೯೯, ೧೭೦, ೧೭೧ ಮತ್ತು ೧೭೨ನೆಯ ಕ್ರಮಾಂಕದ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

(ಶ್ರೀಯುತರಾದ ರಾಜ್‌ಕೃಷ್ಣ ಬೋಸ್ ಮತ್ತು ಪ್ರೊ. ಶಿಬನ್‌ಲಾಲ್ ಸಕ್ಸೇನ ಅವರು ತಮ್ಮ ೧೭೩ರಿಂದ ೧೭೬ರವರೆಗಿನ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ:

"೬ನೆಯ ಖಂಡದ (೨)ನೆಯ ಉಪಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸಬೇಕು:

'(೨) ಉಪರಾಷ್ಟ್ರಪತಿ ಅದೇ ಮತದಾರ ವರ್ಗದವರಿಂದ ಆರಿಸಲ್ಪಡುತ್ತಾರೆ.'"

**ಶ್ರೀ ಕೆ ಸಂತಾನಮ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ೬ನೆಯ ಖಂಡದ (೨)ನೆಯ ಉಪ-ಖಂಡಕ್ಕೆ ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿಯು ಪೂರಕ ಪಟ್ಟಿಯಲ್ಲಿದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಪೂರಕ ಪಟ್ಟಿಯಲ್ಲಿರುವ ತಿದ್ದುಪಡಿಗಳನ್ನೂ ಪರಿಗಣಿಸುತ್ತೇನೆ.

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ :** ಮಾನ್ಯ ಸಭಾಧ್ಯಕ್ಷರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ:

"೬ನೆಯ ಖಂಡದ (೨)ನೆಯ ಉಪಖಂಡದ ಬದಲಿಗೆ ಈ ಮುಂದಿನದನ್ನು ಬದಲಿಸಬೇಕು.

'(೨) ಉಪರಾಷ್ಟ್ರಪತಿ, ರಾಷ್ಟ್ರಪತಿಯವರನ್ನು ಆರಿಸುವ ಮತದಾರ ವರ್ಗದವರಿಂದಲೇ ಆರಿಸಲ್ಪಡುತ್ತಾರೆ ಮತ್ತು ಅವರು ರಾಜ್ಯಸಭೆಯ ಪದನಿಮಿತ್ತ ಸಭಾಪತಿಗಳಾಗಿರುತ್ತಾರೆ '."

ಒಕ್ಕೂಟದ ಸಂವಿಧಾನದ ಅಡಿಯಲ್ಲಿ, ರಾಷ್ಟ್ರಪತಿ ಒಕ್ಕೂಟದ ಸಂಸತ್ತಿನ ಎರಡೂ ಸದನಗಳ ಸದಸ್ಯರಿಂದ ಹಾಗೂ ರಾಜ್ಯ/ಪ್ರಾಂತ್ಯಗಳ ಶಾಸನಸಭೆಯ ಸದಸ್ಯರಿಂದ ಕೂಡಿದ ಮತದಾರ ವರ್ಗದಿಂದ ಆಯ್ಕೆಯಾಗಬೇಕೆಂದು ಹೇಳಲಾಗಿದೆ. ಆದರೆ, ಉಪರಾಷ್ಟ್ರಪತಿ ಒಕ್ಕೂಟದ ಸಂಸತ್ತಿನ ಎರಡು ಸದನಗಳ ಸದಸ್ಯರಿಂದ ಮಾತ್ರವೇ ಚುನಾಯಿತರಾಗುತ್ತಾರೆ. ಇದರ ಅರ್ಥ, ಉಪರಾಷ್ಟ್ರಪತಿಯ ಚುನಾವಣೆಯಲ್ಲಿ ರಾಜ್ಯ/ಪ್ರಾಂತ್ಯಗಳ ಶಾಸನಸಭೆಯ ಸದಸ್ಯರ ಪಾತ್ರ ಏನೇನೂ ಇರುವುದಿಲ್ಲ. ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಚುನಾವಣಾ ಕ್ರಮದಲ್ಲಿ ಈ ವ್ಯತ್ಯಾಸವನ್ನು ಏಕೆ ಮಾಡಲಾಯಿತು ಎಂಬುದಕ್ಕೆ ಕಾರಣವು ನನಗೆ ತಿಳಿಯುತ್ತಿಲ್ಲ. ಉಪರಾಷ್ಟ್ರಪತಿಯವರು ರಾಷ್ಟ್ರಪತಿಯಷ್ಟೇ ಪ್ರಮುಖವಾದ ಸ್ಥಾನವನ್ನು ಒಕ್ಕೂಟದಲ್ಲಿ ಹೊಂದಿದ್ದಾರೆ. ತಮಗೆ ತಿಳಿದಿರುವಂತೆ, ಅವರು ರಾಷ್ಟ್ರಪತಿಯ ಗೈರುಹಾಜರಿನಲ್ಲಿ ಅವರ ಕರ್ತವ್ಯಗಳನ್ನೂ ನಿರ್ವಹಿಸುತ್ತಾರೆ ಮತ್ತು ಅತ್ಯಂತ ಪ್ರಮುಖವಾದ ಸಭೆಯ – ಅಂದರೆ ರಾಜ್ಯಸಭೆಯ – ಸಭಾಪತಿಯೂ ಆಗಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ, ರಾಷ್ಟ್ರಪತಿಯನ್ನು ಚುನಾಯಿಸುವ ಮತದಾರವರ್ಗವನ್ನೇ ಯಾವ ಸಮಸ್ಯೆಯೂ ಇಲ್ಲದೆ, ಉಪರಾಷ್ಟ್ರಪತಿಯನ್ನು ಚುನಾಯಿಸಲೂ ಬಳಸಿಕೊಳ್ಳಬಹುದು. ಈ ರೀತಿಯ ವ್ಯವಸ್ಥೆಯು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಜಾರಿಯಲ್ಲಿದೆ. ಅದೇ ಪದ್ಧತಿಯನ್ನು ನಾವೂ ಇಲ್ಲಿ ಅನುಸರಿಸಬಹುದು. ಆದುದರಿಂದ ನನ್ನ ಈ ತಿದ್ದುಪಡಿಯು ಬಹಳ ನ್ಯಾಯಯುತವಾಗಿದೆ ಎಂದು ಒತ್ತಿ ಹೇಳುತ್ತ ಸದನವು ಅದನ್ನು ಅಂಗೀಕರಿಸುತ್ತದೆ ಎಂಬ ವಿಶ್ವಾಸವನ್ನು ನಾನು ಹೊಂದಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಸಂತಾನಮ್, ಈ ಹಂತದಲ್ಲಿಯೇ ನೀವು ನಿಮ್ಮ ತಿದ್ದುಪಡಿಯನ್ನು ಮಂಡಿಸುವುದು ಸೂಕ್ತವೆಂದು ನನಗೆ ಎನಿಸುತ್ತದೆ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"೬ನೆಯ ಖಂಡದ ೧ನೆಯ ಉಪಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸಿಕೊಳ್ಳಬೇಕು :

'ರಾಷ್ಟ್ರಪತಿಯ ಹುದ್ದೆಯು ಖಾಲಿಯಾದ ದಿನ ಮತ್ತು ಅವರನ್ನು ಚುನಾಯಿಸಿ ಅವರು ಅಧಿಕಾರವನ್ನು ಸ್ವೀಕರಿಸುವ ದಿನಗಳ ನಡುವಿನ ಅವಧಿಯಲ್ಲಿ ಮತ್ತು ಗೈರುಹಾಜರಿ, ಅಸ್ವಸ್ಥತೆ ಅಥವಾ ಇನ್ನಾವ ಕಾರಣದಿಂದ ರಾಷ್ಟ್ರಪತಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲಾಗದಿದ್ದರೆ, ಅಂತಹ ಸಂದರ್ಭಗಳಲ್ಲಿ ಉಪರಾಷ್ಟ್ರಪತಿ ರಾಷ್ಟ್ರಪತಿಯವರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು'."

ಇದು ಕರಡನ್ನು ತಿದ್ದಲು ಮಂಡಿಸಿರುವ ತಿದ್ದುಪಡಿ ಮತ್ತು ಇತರ ಹಲವು ಸದಸ್ಯರು ಈ ಮೂಲ ಖಂಡದಲ್ಲಿ ಬದಲಾವಣೆ ಏಕೆ ಬೇಕು ಎಂಬುದನ್ನು ಕುರಿತು ಮಾತನಾಡಿದ್ದಾರೆ. ನಾನು ಈ ತಿದ್ದುಪಡಿಯನ್ನು ಆದಷ್ಟು ಸರಳವಾಗಿ ಹಾಗೂ ಸಂಕ್ಷೇಪವಾಗಿ ರೂಪಿಸಿದ್ದೇನೆ.

(ಶ್ರೀಯುತರಾದ ರಾಜ್‌ಕೃಷ್ಣ ಬೋಸ್, ಎ.ಕೆ. ಘೋಷ್, ಎಚ್.ವಿ. ಪಾಟಸ್ಕರ್, ಬ್ರಜೇಶ್ವರ ಪ್ರಸಾದ್, ಎಚ್.ಜೆ. ಖಾಂಡೇಕರ್ ಮತ್ತು ಎಸ್.ವಿ. ಕೃಷ್ಣಮೂರ್ತಿ ರಾವ್ ಅವರು ೧೭೮ರಿಂದ ೧೮೩ನೆಯ ಕ್ರಮಾಂಕದ ವರೆಗಿನ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಬಿ.ಎಂ. ಗುಪ್ತೆ** (ಬಾಂಬೆ : ಸಾಮಾನ್ಯ) : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ:

"೬ನೆಯ ಖಂಡಕ್ಕೆ, ಮುಂದಿನದನ್ನು ಹೊಸ ೩ನೆಯ ಉಪಖಂಡವನ್ನಾಗಿ ಸೇರಿಸತಕ್ಕದ್ದು, ಮತ್ತು ಈಗ ಇರುವ ೩ನೆಯ ಉಪಖಂಡಕ್ಕೆ ೪ನೆಯ ಉಪಖಂಡವೆಂಬ ಸಂಖ್ಯೆಯನ್ನು ನೀಡತಕ್ಕದ್ದು:"

'ಉಪರಾಷ್ಟ್ರಪತಿ ರಾಷ್ಟ್ರಪತಿಯ ಕಾರ್ಯವನ್ನು ನಿರ್ವಹಿಸುತ್ತಿರುವ ಅವಧಿಯಲ್ಲಿ, ರಾಜ್ಯಸಭೆಯು ತಾತ್ಕಾಲಿಕ ಸಭಾಪತಿಯೊಬ್ಬರನ್ನು ಚುನಾಯಿಸತಕ್ಕದ್ದು'."

ಮಾನ್ಯರೆ, ಉಪರಾಷ್ಟ್ರಪತಿ ರಾಜ್ಯಸಭೆಯ ಪದನಿಮಿತ್ತ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಿರುವಾಗ, ಅವರಿಗೆ ರಾಜ್ಯಸಭೆಯಲ್ಲಿ ಸಭಾಪತಿಯ ಕಾರ್ಯವನ್ನು ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ ಈ ಅವಧಿಯಲ್ಲಿ ತಾತ್ಕಾಲಿಕ ಸಭಾಪತಿಯೊಬ್ಬರನ್ನು ಚುನಾಯಿಸಲು ಅವಕಾಶವಿರಬೇಕು. ಅದನ್ನು ನನ್ನ ಈ ತಿದ್ದುಪಡಿಯು ಮಾಡುತ್ತಿದೆ.

(ಶ್ರೀಯುತರಾದ ರಾಜ್‌ಕೃಷ್ಣ ಬೋಸ್, ಎಚ್.ವಿ. ಪಾಟಸ್ಕರ್ ಮತ್ತು ಪ್ರೊ. ಶಿಬನ್‌ಲಾಲ್ ಸಕ್ಸೇನ ಅವರು ೧೮೫ರಿಂದ ೧೮೭ರ ವರೆಗಿನ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ :** ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿ ಇರುವ ತಿದ್ದುಪಡಿಯು ಈ ರೀತಿ ಇದೆ:

"೬ನೆಯ ಖಂಡದ (೩)ನೆಯ ಉಪಖಂಡದಲ್ಲಿರುವ '೫ ವರ್ಷಗಳು' ಎಂಬ ಸಂಖ್ಯೆ ಮತ್ತು ಪದಗಳ ಮುಂದೆ ಕೆಳಕಂಡ ಸಂಖ್ಯೆ ಮತ್ತು ಪದಗಳನ್ನು ಸೇರಿಸಬೇಕು:

'೪ ವರ್ಷಗಳು ಅಥವಾ ಹೊಸ ಉಪರಾಷ್ಟ್ರಪತಿಯವರ ಸ್ಥಾನಕ್ಕೆ ಚುನಾವಣೆಯು ನಡೆಯುವವರೆಗೆ, ಇವೆರಡರಲ್ಲಿ ಯಾವುದು ಕಾಲಾನುಕ್ರಮದಲ್ಲಿ ಅನಂತರ ಬರುವುದೋ ಅಲ್ಲಿಯವರೆಗೆ'."

ರಾಷ್ಟ್ರಪತಿಯವರ ಅಧಿಕಾರಾವಧಿಯನ್ನು ಐದು ವರ್ಷಗಳು ಎಂದು ನಿಗದಿಪಡಿಸಲಾಗಿದೆ ಮತ್ತು ಉಪರಾಷ್ಟ್ರಪತಿಯವರ ಅಧಿಕಾರಾವಧಿಯನ್ನು ಕೂಡ ಐದು ವರ್ಷಗಳು ಎಂದು ನಿಗದಿಪಡಿಸಲು ಉದ್ದೇಶಿಸಲಾಗಿದೆ. ಇವರಿಬ್ಬರ ಅಧಿಕಾರಾವಧಿಯು ಏಕೆ ಒಂದೇ ಸಮನಾಗಿರಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ.

ರಾಷ್ಟ್ರಪತಿಯ ಅಧಿಕಾರಾವಧಿಯು ಸಾಕಷ್ಟು ದೀರ್ಘವಾಗಿರಬೇಕು, ಏಕೆಂದರೆ ಅವರ ಸ್ಥಾನದಲ್ಲಿ

ಹೊಸಬರನ್ನು ಆಯ್ಕೆಮಾಡಬೇಕಾಗುತ್ತದೆ. ಆದರೆ ಅಂತಹ ಕಾರಣಗಳನ್ನು ಉಪರಾಷ್ಟ್ರಪತಿಯವರ ವಿಷಯದಲ್ಲಿ ಅನ್ವಯ ಮಾಡಲಾಗುವುದಿಲ್ಲ. ಅವರ ಈ ಅವಧಿಯನ್ನು ರಾಜ್ಯಸಭೆಯ ಅವಧಿಯೊಂದಿಗೆ ಹೊಂದಿಸುವಂತೆ ಮಾಡುವುದು ವಿಚಾರಪೂರ್ಣವಾಗಿರುತ್ತದೆ ಮತ್ತು ಅನುಕೂಲಕರವೂ ಆಗಿರುತ್ತದೆ. ನಾನು ನಿನ್ನೆಯ ದಿನ ವಿವರಿಸಿದ ಹಾಗೆ, ಈ ವ್ಯವಸ್ಥೆಯಲ್ಲಿ, ರಾಜ್ಯಸಭೆಯು ಎರಡನೆಯ ಅವಧಿಯಿಂದ ಐದನೆಯ ಅವಧಿಯತ್ತ ಹೋಗುತ್ತಿರುವಂತೆ, ಕೆಳಮನೆಯಿಂದ ಉಪರಾಷ್ಟ್ರಪತಿಯವರು ಹೆಚ್ಚು ಹೆಚ್ಚು ದೂರ ಸರಿಯುತ್ತಿರುತ್ತಾರೆ. ಇಂತಹ ಪರಿಸ್ಥಿತಿಯು ಅಷ್ಟು ಸಂತೋಷಕರವಾದುದಲ್ಲ.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಅಧ್ಯಕ್ಷರ ಜೊತೆಗೇ ಉಪಾಧ್ಯಕ್ಷರನ್ನೂ ನಾಲ್ಕು ವರ್ಷಗಳ ಅವಧಿಗಾಗಿ ಚುನಾಯಿಸಲಾಗುತ್ತದೆ ಮತ್ತು ಉಪರಾಷ್ಟ್ರಪತಿಯನ್ನು ಹೊಂದಿರುವ ಆಲೋಚನೆಯು ಬಹುಶಃ ಅಮೆರಿಕದ ಸಂವಿಧಾನದ ಅನುಕರಣೆಯಿಂದಲೇ ನಮ್ಮ ಒಕ್ಕೂಟದ ಸಂವಿಧಾನದಲ್ಲಿ ಬಂದಿರಬಹುದು. ಅದು ಹಾಗಿದ್ದರೆ, ನಾವು ಅಲ್ಲಿರುವ ಪದ್ಧತಿಯನ್ನೇ ಅನುಸರಿಸಬೇಕು. ಅಮೆರಿಕದ ಸಂವಿಧಾನವು ೧೫೦ ವರ್ಷಕ್ಕೂ ಹಳೆಯದು ಮತ್ತು ಅದನ್ನು ಕಾರ್ಯಗತಗೊಳಿಸುವಲ್ಲಿ ಸಾಕಷ್ಟು ಅನುಭವವು ಅಮೆರಿಕನ್ನರಿಗೆ ದೊರೆತಿದೆ. ನಾವೇ ಹೊಸ ಹೊಸ ಪ್ರಯೋಗಗಳನ್ನು ಮಾಡುವುದಕ್ಕಿಂತ, ಬೇರೆಯವರ ಅನುಭವವನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಳ್ಳುವುದರಿಂದ ಹೆಚ್ಚಿನ ಅನುಕೂಲಗಳು ಇರುತ್ತವೆ. ಇದರಿಂದ ನಾವು ನಮ್ಮ ಸಂವಿಧಾನವನ್ನು ಪರಿಪೂರ್ಣಗೊಳಿಸಬಹುದು ಮತ್ತು ಕಾರ್ಯಸಾಧ್ಯವನ್ನಾಗಿಸಬಹುದು. ಮಾನ್ಯರೆ, ದೇಶದ ಹಿತದೃಷ್ಟಿಯಿಂದ ಉಪರಾಷ್ಟ್ರಪತಿಯ ಅಧಿಕಾರಾವಧಿಯನ್ನು ನಾಲ್ಕು ವರ್ಷಕ್ಕೆ ನಿಗದಿಗೊಳಿಸುವುದು ಉತ್ತಮವಾಗದ್ದು ಮತ್ತು ಈ ಕ್ರಮವು ತರ್ಕಸಮ್ಮತವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ.

ಉಪರಾಷ್ಟ್ರಪತಿಯ ಅಧಿಕಾರಾವಧಿಯು ನಾಲ್ಕು ವರ್ಷವಿರಬೇಕೆಂಬ ಸಾಮಾನ್ಯವಾದ ಸಲಹೆಯನ್ನು ನಾನು ಮಾಡಿದ್ದೇನೆ. ಆದರೂ, ಅವರು ಅದರ ಅನಂತರವೂ, ತಿದ್ದುಪಡಿಯಲ್ಲಿ ಸೂಚಿಸಿರುವ ಹಾಗೆ, ಹೊಸ ಕಾನೂನು ಜಾರಿಗೆ ಬರುವವರೆಗೆ ಮತ್ತು ಹೊಸ ಉಪರಾಷ್ಟ್ರಪತಿ ಚುನಾಯಿತರಾಗಿ ಅಧಿಕಾರವನ್ನು ವಹಿಸಿಕೊಳ್ಳುವವರೆಗೆ, ಅವರೆ ತಮ್ಮ ಸ್ಥಾನದಲ್ಲಿ ಮುಂದುವರಿಯಬಹುದು. ಈ ಕ್ರಮವು ಉಪರಾಷ್ಟ್ರಪತಿಯ ಸ್ಥಾನವು ಎಂದೂ ಖಾಲಿಯಾಗದಿರುವಂತೆ ನೋಡಿಕೊಳ್ಳುತ್ತದೆ. ಆದುದರಿಂದ ಈ ತಿದ್ದುಪಡಿಯನ್ನು ಪರಿಶೀಲನೆಗೆ ಮತ್ತು ಅಂಗೀಕಾರಕ್ಕಾಗಿ ಸದನದ ಮುಂದಿಡುತ್ತಿದ್ದೇನೆ.

(೧೮೯ನೆಯ ಕ್ರಮಾಂಕದ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನಾನು ಈ ತಿದ್ದುಪಡಿಯನ್ನು ಮಂಡಿಸಲು ಅನುಮತಿಯನ್ನು ಬೇಡುತ್ತಿದ್ದೇನೆ:

"೬ನೆಯ ಖಂಡಕ್ಕೆ ಈ ಮುಂದಿನ (೪)ನೆಯ ಹೊಸ ಉಪಖಂಡವನ್ನು ಸೇರಿಸತಕ್ಕದ್ದು:

'(೪) ಮೇಲಿನ ೪ನೆಯ ಖಂಡದ ಉಪಬಂಧಗಳು ಅಗತ್ಯ ಬದಲಾವಣೆಗಳೊಂದಿಗೆ ಉಪರಾಷ್ಟ್ರಪತಿಗೂ ಅನ್ವಯವಾಗುತ್ತವೆ'."

೪ನೆಯ ಖಂಡದಲ್ಲಿ ರಾಷ್ಟ್ರಪತಿಯ ಅಧಿಕಾರಕ್ಕೆ ಸಂಬಂಧಿಸಿದ ಕೆಲವು ನಿಬಂಧನೆಗಳು ಇವೆ. ಅವುಗಳನ್ನೇ ಸಾಧ್ಯವಾದಮಟ್ಟಿಗೂ ಉಪರಾಷ್ಟ್ರಪತಿಯ ಅಧಿಕಾರಕ್ಕೂ ಅನ್ವಯಿಸುವುದು ತರ್ಕಬದ್ಧವಾಗಿರುತ್ತದೆ. ಇದು ಕೇವಲ ಕರಡು ರಚನೆಗೆ ಸಂಬಂಧಿಸಿದ ತಿದ್ದುಪಡಿ.

**ಪಂಡಿತ್ ಠಾಕುರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲಿರುವ ತಿದ್ದುಪಡಿಯು ಹೀಗಿದೆ:

"(೩)ನೆಯ ಉಪಖಂಡದ ಅನಂತರ ಮುಂದಿನದನ್ನು ಸೇರಿಸಿಕೊಳ್ಳತಕ್ಕದ್ದು:

'(೪) ೩೫ ವರ್ಷ ವಯಸ್ಸಾಗದ ಯಾರನ್ನೂ ಉಪರಾಷ್ಟ್ರಪತಿಯನ್ನಾಗಿ ಚುನಾಯಿಸತಕ್ಕದ್ದಲ್ಲ'."

ಈ ತಿದ್ದುಪಡಿಗೆ ಕಾರಣಗಳನ್ನು ನೀಡಬೇಕಾದ ಅಗತ್ಯವಿದೆಯೆಂದು ನನಗೆ ಎನಿಸುತ್ತಿಲ್ಲ. (೩)ನೆಯ ಖಂಡವನ್ನು ಅಂಗೀಕರಿಸುವ ಮೂಲಕ ಈ ಸದನವು ೩೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಯಾರೂ ರಾಷ್ಟ್ರಪತಿಯಾಗಲು ಸಾಧ್ಯವಿಲ್ಲವೆಂದು ಒಪ್ಪಿಕೊಂಡಿದೆ ಮತ್ತು ಅದಕ್ಕೆ ಬದ್ಧವಾಗಿದೆ. ಉಪರಾಷ್ಟ್ರಪತಿ ರಾಷ್ಟ್ರಪತಿಯ ಕಾರ್ಯಗಳನ್ನು ನಿರ್ವಹಿಸಬೇಕಾದ ಸನ್ನಿವೇಶಗಳು ಇರುವುದರಿಂದ, ಸಹಜವಾಗಿಯೇ, ಅವರು ಕೂಡ ೩೫ ವರ್ಷಕ್ಕಿಂತ ಕಡಮೆ ವಯಸ್ಸಿನವರಾಗಿರಲು ಸಾಧ್ಯವಿಲ್ಲ. ಇದಲ್ಲದೆ, ಈ ನಿಲುವಳಿಯನ್ನು ಮಂಡಿಸಿದ ಗೌರವಾನ್ವಿತ ಸದಸ್ಯರು ಇಂತಹ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ತಾವು ಸಿದ್ಧವಿರುವುದಾಗಿ ಹೇಳಿದ್ದಾರೆ. ಆದುದರಿಂದ ಈ ತಿದ್ದುಪಡಿಯನ್ನು ಅಂಗೀಕರಿಸಲು ಬೇರೆ ಬೇರೆಯ ಕಾರಣಗಳನ್ನು ಇದಕ್ಕೆ ನೀಡುತ್ತ ಸದನದ ಮೌಲ್ಯಯುತವಾದ ಸಮಯವನ್ನು ನಾನು ವ್ಯರ್ಥಮಾಡುವುದನ್ನು ಬಯಸುವುದಿಲ್ಲ.]*

(ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರು ಒಂದನೆಯ ಪೂರಕ ಪಟ್ಟಿಯಲ್ಲಿದ್ದ ೩ನೆಯ ಕ್ರಮಾಂಕದ ತಿದ್ದುಪಡಿಯನ್ನು ಮಂಡಿಸಲಿಲ್ಲ).

**ಮಾನ್ಯ ಸಭಾಧ್ಯಕ್ಷರು** : ನನಗೆ ಇಷ್ಟು ತಿದ್ದುಪಡಿಗಳಿಗೆ ಮಾತ್ರ ಸೂಚನೆಯು ಬಂದಿತ್ತು ಎಂದು ಎನಿಸುತ್ತದೆ. ಬೇರೆ ಯಾವ ಸದಸ್ಯರೂ ತಿದ್ದುಪಡಿಯ ಸೂಚನೆಯನ್ನು ನೀಡಿರಲಿಲ್ಲವೆಂದುಕೊಳ್ಳುತ್ತೇನೆ. ಈಗ, ಮೂಲ ಖಂಡ ಮತ್ತು ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ.

**ಶ್ರೀ ತಾಜಮುಲ್ ಹುಸೇನ್** (ಬಿಹಾರ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ರಾಷ್ಟ್ರಪತಿ ತಮ್ಮ ಅಸಮರ್ಥತೆಯಿಂದ ಅಥವಾ ಇನ್ನಾವುದೇ ಕಾರಣದಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರಾಗಿರುವ ಸಂದರ್ಭಗಳಲ್ಲಿ ಉಪರಾಷ್ಟ್ರಪತಿ ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಎಂದು ೭ನೆಯ ಖಂಡದ (೧)ನೆಯ ಉಪಖಂಡವು ವಿಧಿಸುತ್ತದೆ. ಬೇರೆಯ ರೀತಿಯಲ್ಲಿ ಹೇಳಬಹುದಾದರೆ, ರಾಷ್ಟ್ರಪತಿ ತಮ್ಮ ಕಾರ್ಯಗಳನ್ನು ನಿಭಾಯಿಸಲು ಅಸಮರ್ಥರಾದರೆ, ಅವರ ಕಾರ್ಯಗಳನ್ನು ಉಪರಾಷ್ಟ್ರಪತಿ ರಾಷ್ಟ್ರಪತಿಯ ಪರವಾಗಿ ಮಾಡತಕ್ಕದ್ದು. ಇದಕ್ಕೆ ಇರುವ ತಿದ್ದುಪಡಿಯು ಹೀಗಿದೆ:

> " 'ಅಥವಾ, ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿನ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥರಾದರೆ ಅಥವಾ ವಿಫಲರಾದರೆ' ಎಂಬ ಪದಗಳನ್ನು ಕೈಬಿಡತಕ್ಕದ್ದು."

ಇದರ ಅರ್ಥ, ರಾಷ್ಟ್ರಪತಿ ಅಸಮರ್ಥರಾಗಿದ್ದರೆ ಅಥವಾ ತಮ್ಮ ಕರ್ತವ್ಯವನ್ನು ನಿರ್ವಹಿಸಲು ವಿಫಲರಾದರೆ, ಅವರ ಪರವಾಗಿ ಕರ್ತವ್ಯವನ್ನು ಉಪರಾಷ್ಟ್ರಪತಿ ನಿರ್ವಹಿಸುವಾಗ, ಉಪರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸಲು ಯಾರೂ ಇರುವುದಿಲ್ಲ. ರಾಷ್ಟ್ರಪತಿ ಅಸಮರ್ಥರಾಗಿರುವಾಗ ಅಥವಾ ತಮ್ಮ ಕರ್ತವ್ಯಗಳನ್ನು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದಾಗ ಉಪರಾಷ್ಟ್ರಪತಿಯ ಪರವಾಗಿ ಅವರ ಕಾರ್ಯಗಳನ್ನು ಮಾಡುವವರು ಯಾರು ಎಂಬ ಪ್ರಶ್ನೆಯು ಏಳುತ್ತದೆ. ಅವರು ಇದ್ದಕ್ಕಿದ್ದ ಹಾಗೆ ಅಸ್ವಸ್ಥರಾದರೆ, ರಾಷ್ಟ್ರಪತಿಯವರ ಕರ್ತವ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಬೇರೊಬ್ಬರು ಇರಬೇಕಾಗುತ್ತದೆ. ಈ ತಿದ್ದುಪಡಿಯನ್ನು ಮಂಡಿಸಿದವರ ಬಗೆಗೆ ಗೌರವವನ್ನಿಟ್ಟುಕೊಂಡೇ ಹೇಳಬೇಕೆಂದರೆ, ಇದನ್ನು ವಿರೋಧಿಸದೆ ಬೇರೆ ಗತ್ಯಂತರವೇ ನನಗೆ ಇಲ್ಲ. ಇಲ್ಲಿ ದೇಶದ ಇಬ್ಬರು ಅಧಿಕಾರಿಗಳು ಇದ್ದಾರೆ, ದೇಶದ ವರಿಷ್ಠ ಅಧಿಕಾರಿಗಳು – ಒಬ್ಬರು ರಾಷ್ಟ್ರಪತಿ, ಮತ್ತೊಬ್ಬರು ಉಪರಾಷ್ಟ್ರಪತಿ. ರಾಷ್ಟ್ರಪತಿಗೆ ಅಸಂದರ್ಭವಾದಾಗ ಅವರ ಕಾರ್ಯಗಳನ್ನು ಉಪರಾಷ್ಟ್ರಪತಿ ನಿರ್ವಹಿಸುತ್ತಾರೆ. ಆದರೆ, ಉಪರಾಷ್ಟ್ರಪತಿ, ರಾಷ್ಟ್ರಪತಿಯವರ ಕರ್ತವ್ಯಗಳನ್ನು ತಾತ್ಕಾಲಿಕವಾಗಿ ನಿಭಾಯಿಸುತ್ತಿರುವಾಗ ಅಸ್ವಸ್ಥರಾದರೆ, ಅವರ ಕಾರ್ಯಗಳನ್ನು ಯಾರು ನಿರ್ವಹಿಸುತ್ತಾರೆ ಎಂಬುದಕ್ಕೆ ಯಾವ ಉಪಬಂಧವೂ ಇಲ್ಲ.

**ಶ್ರೀ ಆರ್.ಕೆ. ಸಿಧ್ವಾ** (ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ : ಸಾಮಾನ್ಯ) : ಆ ಮೂರನೆಯ ವ್ಯಕ್ತಿಯೂ ಅಸ್ವಸ್ಥನಾದರೆ?

**ಶ್ರೀ ತಾಜಮಲ್ ಹುಸೇನ್ :** ಉಪರಾಷ್ಟ್ರಪತಿ ರಾಷ್ಟ್ರಪತಿಯ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ, ಉಪರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸಲು ಮೂರನೆಯ ವ್ಯಕ್ತಿಯೊಬ್ಬರು ಇರಬೇಕು. ರಾಷ್ಟ್ರಪತಿಯ ಕರ್ತವ್ಯಗಳನ್ನು ಉಪರಾಷ್ಟ್ರಪತಿಯು ಕೈಗೆತ್ತಿಕೊಂಡ ಕೂಡಲೇ, ಉಪರಾಷ್ಟ್ರಪತಿಯವರ ಕರ್ತವ್ಯಗಳನ್ನು ನಿರ್ವಹಿಸಲು ಒಬ್ಬರನ್ನು ತಾತ್ಕಾಲಿಕ ಸಭಾಪತಿಯನ್ನಾಗಿ ಆಯ್ಕೆಮಾಡಬೇಕು ಎಂದು ಶ್ರೀ ಗುಪ್ತೆಯವರ ತಿದ್ದುಪಡಿಯು ಹೇಳುತ್ತದೆ. ಈಗ, ಸಿಂಧ್‌ನ ನನ್ನ ಗೌರವಾನ್ವಿತ ಮಿತ್ರ ಶ್ರೀ ಸಿಧ್ವಾ ಅವರು ನನಗೆ ಅಡಚಣೆಯನ್ನು ಉಂಟುಮಾಡುತ್ತಿದ್ದಾರೆ. 'ಮೂರನೆಯ ವ್ಯಕ್ತಿಯೂ ಅಸ್ವಸ್ಥನಾದರೆ?' ಎಂಬ ಪ್ರಶ್ನೆಯನ್ನು ಅವರು ಕೇಳುತ್ತಿದ್ದಾರೆ. ಅವರ ಮಾತಿಗೆ ಒಪ್ಪಿಗೆಯನ್ನು ಸೂಚಿಸಬೇಕಾದರೆ, ನಾನು ನಾಲ್ಕನೆಯ ವ್ಯಕ್ತಿಯನ್ನು ಕೂಡ ಆಯ್ದುಕೊಳ್ಳಿ ಎಂದು ಹೇಳಬೇಕಾಗುತ್ತದೆ. ನಮ್ಮ ಮುಂದಿರುವ ತಿದ್ದುಪಡಿ ರಾಜ್ಯಸಭೆಗೆ ಒಬ್ಬರು ಸಭಾಪತಿ ಇರತಕ್ಕದ್ದು ಎಂಬುದಷ್ಟಕ್ಕೇ ಸೀಮಿತ. ಅದನ್ನು ನಾನು ಬೆಂಬಲಿಸುತ್ತೇನೆ.

ನಮ್ಮ ಜನತಂತ್ರದ ರಾಷ್ಟ್ರಪತಿಗೆ ಕನಿಷ್ಠ ವಯೋಮಿತಿಯಿರುವುದರಿಂದ ಅಂತಹುದೇ ಮಿತಿಯು ಉಪರಾಷ್ಟ್ರಪತಿಗೂ ಇರತಕ್ಕದ್ದು ಎಂಬ ಒಂದು ತಿದ್ದುಪಡಿಯನ್ನು ಶ್ರೀ ಭಾರ್ಗವ ಅವರು ಈಗ ತಾನೇ ಮಂಡಿಸಿದ್ದಾರೆ. ಮಾನ್ಯರೆ, ನನ್ನ ಅಭಿಪ್ರಾಯದಲ್ಲಿ, ಈ ತಿದ್ದುಪಡಿಯು ತರ್ಕಬದ್ಧವಾಗಿದೆ, ಏಕೆಂದರೆ, ರಾಷ್ಟ್ರಪತಿಯ ಅಕಾಲಿಕ ಮರಣದ ಸಂದರ್ಭದಲ್ಲಿ ಉಪರಾಷ್ಟ್ರಪತಿಯವರು ಸಹಜವಾಗಿಯೇ ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ರಾಷ್ಟ್ರಪತಿಯ ಕನಿಷ್ಠ ವಯೋಮಿತಿ ೩೫ ವರ್ಷಗಳಿದ್ದಾಗ, ಅವರ ಸ್ಥಾನದಲ್ಲಿ ಕಾರ್ಯನಿರ್ವಹಿಸುವ ಉಪರಾಷ್ಟ್ರಪತಿಯ ವಯಸ್ಸು ೨೨ ಅಥವಾ ೨೧ ಆಗಿದ್ದರೆ, ಅದು ಅಸಮಂಜಸವಾಗಿರುತ್ತದೆ. ಆದ್ದರಿಂದ ನಾನು ಈ ತಿದ್ದುಪಡಿಗೆ ನನ್ನ ಬೆಂಬಲವನ್ನು ನೀಡುತ್ತಿದ್ದೇನೆ.

ಇದರೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಮಹಮ್ಮದ್ ಷರೀಫ** (ಮೈಸೂರು ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ನನ್ನ ಅಭಿಪ್ರಾಯದಲ್ಲಿ, 'ಅಥವಾ ಅಸಮರ್ಥತೆ ಅಥವಾ ತಮ್ಮ ಕರ್ತವ್ಯಗಳನ್ನು, ಕಾರ್ಯಗಳನ್ನು ನಿರ್ವಹಿಸುವ ವೈಫಲ್ಯ' ಎಂಬ ಪದಗಳನ್ನು (೨)ನೆಯ ಖಂಡದಿಂದ ತೆಗೆದುಹಾಕಬೇಕು. ಈ ಪದಗಳನ್ನು ಉಳಿಸಿಕೊಂಡದ್ದೇ ಆದರೆ, ಹಲವಾರು ಸಮಸ್ಯೆಗಳು ಉದ್ಭವವಾಗುತ್ತವೆ ಮತ್ತು ನಾವು ಹಲವು ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ರಾಷ್ಟ್ರಪತಿ ತಮ್ಮ ಅಧಿಕಾರವನ್ನು ಬಳಸಿಕೊಂಡು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ವಿಫಲರಾದಲ್ಲಿ, ಅವರನ್ನು ಅವರ ಸ್ಥಾನದಿಂದ ತೆಗೆದುಹಾಕತಕ್ಕದ್ದು ಎಂಬುದು ೬ನೆಯ ಖಂಡದ ಉದ್ದೇಶವಾಗಿದೆ. ರಾಷ್ಟ್ರಪತಿಯ ಕರ್ತವ್ಯಗಳು ಎಂದು ಹೇಳುವ ಉಕ್ತಿಯು ಸಾಪೇಕ್ಷವಾಗಿದೆ. ನೀವು ಅವರ ಕರ್ತವ್ಯಗಳು ಎಂದು ಯಾವುದನ್ನು ಹೇಳುತ್ತೀರೋ ಅದು ನನಗೆ ಅಲ್ಲವೆಂದು ತೋರಬಹುದು ಮತ್ತು ನಾನು ಸರಿಯಲ್ಲವೆಂದು ಹೇಳುವ ಕೆಲವು ಕರ್ತವ್ಯಗಳು ಇತರರಿಗೆ ಸರಿಯೆಂದು ತೋರಬಹುದು. ಆದುದರಿಂದ ನಾನು ಹೇಳಿದ ಹಾಗೆ ಇದು ಸಾಪೇಕ್ಷವಾಗಿರುತ್ತದೆ. ಈ ಕಾರಣದಿಂದಾಗಿ, ಈ ಪದಗಳನ್ನು ಕೈಬಿಡಬೇಕು ಮತ್ತು ಉಳಿದ ಪದಗಳನ್ನು ಅವು ಇರುವ ಹಾಗೆಯೇ ಉಳಿಸಿಕೊಳ್ಳಬೇಕು. ನನ್ನ ಇನ್ನೊಂದು ಕೋರಿಕೆಯೆಂದರೆ, ಉಪರಾಷ್ಟ್ರಪತಿಯ ಚುನಾವಣೆಯು ವಯಸ್ಕಮತದಾನದ ಆಧಾರದ ಮೇಲೆ ನಡೆಯಬೇಕು. ರಾಷ್ಟ್ರಪತಿಯ ಚುನಾವಣೆಯನ್ನು ಕುರಿತು ಮಾತನಾಡುವಾಗ, ನಾನು ದೃಷ್ಟಿಯಲ್ಲಿಟ್ಟುಕೊಂಡಿದ್ದ ಅಂಶವೆಂದರೆ, ರಾಷ್ಟ್ರಪತಿಯ ಹಾಗೂ ಉಪರಾಷ್ಟ್ರಪತಿಯ ಆಯ್ಕೆಯು ನೇರ ಚುನಾವಣೆಯ ಮೂಲಕ ಆಗಬೇಕು ಎಂಬುದು. ಪಂಡಿತ್ ನೆಹರು ಅವರು ಈ ನೀತಿಯ ವಿರುದ್ಧ ಹಲವು ವಿಷಯಗಳನ್ನು ಹೇಳಿದ್ದರೂ, ಪ್ರಜಾತಂತ್ರದ ತತ್ತ್ವಗಳ ಬೆಂಬಲಿಗನಾಗಿ ನಾನು ಉಪರಾಷ್ಟ್ರಪತಿಯವರ ಚುನಾವಣೆಯು ವಯಸ್ಕಮತದಾನದ ಪ್ರಕಾರ ನಡೆಯಬೇಕೆಂದು ವಾದಿಸುತ್ತೇನೆ. ಇಷ್ಟು ಹೇಳಿ ನನ್ನ ಗೌರವಾನ್ವಿತ ಮಿತ್ರರು ಮಂಡಿಸಿರುವ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** ಪಂಡಿತ್ ಜವಾಹರಲಾಲ್ ನೆಹರು ಅವರು ಕೆಲವು ತಿದ್ದುಪಡಿಗಳಿಗೆ

ಸಮ್ಮತಿಸುತ್ತಾರೆಂದು ನಾನು ತಿಳಿದಿದ್ದೇನೆ. ಅವರು ಈ ಹಂತದಲ್ಲಿ ತಮಗೆ ಪರಿತೋರಿದ ಕೆಲವು ತಿದ್ದುಪಡಿಗಳನ್ನು ಒಪ್ಪಿಕೊಂಡರೆ, ಅಷ್ಟರಮಟ್ಟಿಗೆ ನಾವು ಚರ್ಚೆಯನ್ನು ಕಡಿಮೆ ಮಾಡಬಹುದು.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್ :** ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಕ್ರಿಯಾಲೋಪವನ್ನು ಕುರಿತು ನಾನು ತಮ್ಮಲ್ಲಿ ಒಂದು ನಿವೇದನೆಯನ್ನು ಮಾಡಿಕೊಳ್ಳಬೇಕು. ಈಗ ತಾನೇ ಮಾತನಾಡಿದ ಗೌರವಾನ್ವಿತ ಸದಸ್ಯರು ಕೆಲವು ತಿದ್ದುಪಡಿಗಳ ಬಗ್ಗೆ ಪ್ರಸ್ತಾವಿಸಿದರು. ಅವುಗಳಲ್ಲಿ ನನ್ನ ತಿದ್ದುಪಡಿಯೂ ಒಂದು. ಅವರು ನನ್ನ ತಿದ್ದುಪಡಿಯನ್ನು ಬೆಂಬಲಿಸಿದರೋ ಅಥವಾ ವಿರೋಧಿಸಿದರೋ ಎಂಬುದು ನನಗೆ ವಿಶದವಾಗಲಿಲ್ಲ. ಈ ತಿದ್ದುಪಡಿಯ ವಿಷಯದಲ್ಲಿ ಅವರ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳುವುದು ನ್ಯಾಯಯುತವಾದ ಮಾರ್ಗವೆಂದು ನನಗೆ ಎನಿಸುತ್ತಿದೆ. ಆದ್ದರಿಂದ, ಮಾನ್ಯ ಸಭಾಧ್ಯಕ್ಷರೆ, ಈ ಸದಸ್ಯರ ಅಭಿಪ್ರಾಯದ ಸಾರಾಂಶವನ್ನು ದಯವಿಟ್ಟು ಇಂಗ್ಲಿಷ್‌ನಲ್ಲಿ ನೀಡಬೇಕೆಂದು ಅವರಿಗೆ ತಾವು ತಿಳಿಸಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಯಾವುದೇ ಸದಸ್ಯರನ್ನೂ ಇಂತಹುದೇ ಭಾಷೆಯಲ್ಲಿ ಮಾತನಾಡಬೇಕೆಂದು ಬಲವಂತ ಮಾಡುವುದಿಲ್ಲವೆಂದು ನಾನು ಈ ಹಿಂದೆಯೇ ನನ್ನ ನೀತಿಯನ್ನು ತಿಳಿಸಿದ್ದೆ. ಇದರಿಂದ ಒಬ್ಬ ಸದಸ್ಯರಿಗೆ ಇನ್ನೊಬ್ಬ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಳ್ಳಲು ತೊಂದರೆಯಾಗಿದ್ದರೆ, ಅವರಿಬ್ಬರೂ ಮಾತನಾಡಿಕೊಂಡು ಅಭಿಪ್ರಾಯ ವಿನಿಮಯ ಮಾಡಿಕೊಳ್ಳಬಹುದು. (ನಗು).

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು :** ಮಾನ್ಯರೆ, ಮಂಡಿಸಲ್ಪಟ್ಟ ಹಲವು ತಿದ್ದುಪಡಿಗಳು ಎರಡು ಅಥವಾ ಮೂರು ವರ್ಗಗಳಲ್ಲಿ ಬರುತ್ತವೆ. ಮುದ್ರಿತವಾಗಿರುವ ಪ್ರತಿಯಲ್ಲಿ ೬ನೆಯ ಖಂಡದ ಪದಸರಣಿಗಳು ಅಷ್ಟು ತೃಪ್ತಿದಾಯಕವಾಗಿಲ್ಲವೆಂಬುದು ನಿಜ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೊದಲನೆಯದಾಗಿ, ಅದರಲ್ಲಿ 'ಅಸಮರ್ಥತೆ' ಎಂಬ ಪದವನ್ನು ದುರದೃಷ್ಟವಶಾತ್ ಬಳಸಲಾಗಿದೆ. ಮಂಡಿಸಲಾಗಿರುವ ಎಲ್ಲ ತಿದ್ದುಪಡಿಗಳಲ್ಲಿ ಸಂಕ್ಷಿಪ್ತವಾಗಿರುವಂತಹುದು ಮತ್ತು ಸ್ಪಷ್ಟವಾಗಿರುವಂತಹುದು ಎಂದರೆ ಶ್ರೀ ಸಂತಾನಮ್ ಅವರ ತಿದ್ದುಪಡಿ. ಅದು ಇತರರು ಎತ್ತಿ ತೋರಿಸಿರುವ ಹೆಚ್ಚು ಕಡಿಮೆ ಎಲ್ಲ ಲೋಪಗಳನ್ನೂ ಸರಿಪಡಿಸುತ್ತದೆ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

ನಾನು ಶ್ರೀ ಗುಪ್ತೆಯವರ ತಿದ್ದುಪಡಿಯನ್ನೂ ಒಪ್ಪಿಕೊಳ್ಳುತ್ತೇನೆ:

"೬ನೆಯ ಖಂಡಕ್ಕೆ, ಮುಂದಿನದನ್ನು ಹೊಸ ೩ನೆಯ ಉಪಖಂಡವನ್ನಾಗಿ ಸೇರಿಸತಕ್ಕದ್ದು, ಮತ್ತು ಈಗ ಇರುವ ೩ನೆಯ ಉಪಖಂಡಕ್ಕೆ ೪ನೆಯ ಉಪಖಂಡವೆಂಬ ಸಂಖ್ಯೆಯನ್ನು ನೀಡತಕ್ಕದ್ದು:

'ಉಪರಾಷ್ಟ್ರಪತಿ ರಾಷ್ಟ್ರಪತಿಯ ಕಾರ್ಯವನ್ನು ನಿರ್ವಹಿಸುತ್ತಿರುವ ಅವಧಿಯಲ್ಲಿ, ರಾಜ್ಯಸಭೆಯು ತಾತ್ಕಾಲಿಕ ಸಭಾಧ್ಯಕ್ಷರೊಬ್ಬರನ್ನು ಚುನಾಯಿಸತಕ್ಕದ್ದು'."

ಕೊನೆಯಲ್ಲಿ, ನಾನು ಪಂಡಿತ್ ಠಾಕುರ್ ದಾಸ್ ಭಾರ್ಗವ ಅವರ ತಿದ್ದುಪಡಿಯನ್ನೂ ಒಪ್ಪಿಕೊಳ್ಳುತ್ತೇನೆ:

"(೩)ನೆಯ ಉಪಖಂಡದ ಅನಂತರ ಈ ಮುಂದಿನದನ್ನು ಸೇರಿಸಿಕೊಳ್ಳತಕ್ಕದ್ದು:

'(೪) ೩೫ ವರ್ಷ ವಯಸ್ಸಾಗದ ಯಾರನ್ನೂ ಉಪರಾಷ್ಟ್ರಪತಿನ್ನಾಗಿ ನೇಮಿಸತಕ್ಕದ್ದಲ್ಲ'."

ಇತರ ಯಾವ ತಿದ್ದುಪಡಿಯನ್ನೂ ನಾನು ಒಪ್ಪಿಕೊಳ್ಳಬಹುದೆಂದು ನನಗೆ ತೋರುತ್ತಿಲ್ಲ.

**ಶ್ರೀ ಜಗತ್ ನಾರಾಯಣ್ ಲಾಲ್** (ಬಿಹಾರ್ : ಸಾಮಾನ್ಯ) : ನಾನು ಇಲ್ಲಿ ಸ್ವಲ್ಪ ಸ್ಪಷ್ಟತೆಯನ್ನು ಬಯಸುತ್ತೇನೆ. ಚುನಾವಣೆಯ ವಿಧಾನವನ್ನು ಕುರಿತು (೨)ನೆಯ ಉಪಖಂಡವು ಹೀಗೆ ಹೇಳುತ್ತದೆ:

"(೨) ಒಕ್ಕೂಟದ ಸದನದ ಎರಡೂ ಸದನಗಳು ಒಟ್ಟಿಗೆ ಸಭೆ ಸೇರಿ ಅವುಗಳ ಸದಸ್ಯರು ಗುಪ್ತಮತದಾನದ ಪ್ರಕಾರ ಅನುಪಾತೀಯ ಮೌಲ್ಯವಿರುವ ವರ್ಗಾಯಿಸಬಲ್ಲ ಏಕಮಾತ್ರ ಮತದ ಮೂಲಕ ಉಪರಾಷ್ಟ್ರಪತಿಯನ್ನು ಆಯ್ಕೆಮಾಡತಕ್ಕದ್ದು ಮತ್ತು ಉಪರಾಷ್ಟ್ರಪತಿ ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿರುತ್ತಾರೆ."

ಒಬ್ಬರೇ ಉಪರಾಷ್ಟ್ರಪತಿಯನ್ನು ಆಯ್ಕೆಮಾಡಬೇಕಾದ ಸಂದರ್ಭದಲ್ಲಿ ಚುನಾವಣೆಯು ಅನುಪಾತೀಯ ಮೌಲ್ಯವಿರುವ ಮತದ ಮೂಲಕ ನಡೆಯಬೇಕು ಎನ್ನುವುದರ ಅರ್ಥವೇನು? ನಮ್ಮ ಸಂವಿಧಾನ ರಚನಾ ಸಭೆಯ ನಿಯಮಗಳಲ್ಲಿ, ೬ನೆಯ ನಿಯಮದ (೬)ನೆಯ ಉಪಖಂಡದಲ್ಲಿ, ನಾವು ಸ್ಪರ್ಧೆಯಿಂದ ಕ್ರಮಕ್ರಮವಾಗಿ ಹೊರಗಿಡುವ ವಿಧಾನವನ್ನು ಹೊಂದಿದ್ದೇವೆ. ಒಬ್ಬರೇ ಉಪರಾಷ್ಟ್ರಪತಿಯವರು ಇರಬೇಕಾದ ಸಂದರ್ಭದಲ್ಲಿ ಅನುಪಾತೀಯ ಮೌಲ್ಯವಿರುವ ಮತದ ಆಧಾರದ ಮೇಲೆ ಚುನಾವಣೆಯನ್ನು ನಡೆಸುವುದು ಆವಶ್ಯಕವೇ ಎಂಬುದನ್ನು ಕುರಿತು ನನಗೆ ಸ್ಪಷ್ಟತೆಯನ್ನು ನೀಡಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಒಂದೇ ವ್ಯಕ್ತಿಯನ್ನು ಆಯ್ಕೆಮಾಡಬೇಕಾದಾಗಲೂ, ಈ ಅನುಪಾತೀಯ ಮೌಲ್ಯದ ಮತದ ಆಧಾರದ ಮೇಲೆ ಚುನಾವಣೆಯನ್ನು ನಡೆಸಬಹುದು ಎಂದು ಕಾನೂನನ್ನು ತಿಳಿದವರು ನನಗೆ ತಿಳಿಸಿದ್ದಾರೆ.

**ಶ್ರೀ ಜಗತ್ ನಾರಾಯಣ್ ಲಾಲ್ :** ಮಾನ್ಯರೆ, ರಾಷ್ಟ್ರಪತಿಯನ್ನು ಚುನಾಯಿಸುವಾಗಲೂ ನಾವು ಈ ಅನುಪಾತೀಯ ಮೌಲ್ಯದ ಮತದ ಆಧಾರದ ಮೇಲೆಯೇ ಚುನಾವಣೆಯನ್ನು ನಡೆಸುತ್ತೇವೆ ಮತ್ತು ಅದನ್ನು ನಾವು ಒಪ್ಪಿಕೊಂಡೂ ಇದ್ದೇವೆ ಎಂಬುದು ನನಗೆ ತಿಳಿದಿದೆ. ಆದರೂ, ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ನಾವು ಹೊಂದಿರುವ 'ಒಬ್ಬನೇ ವ್ಯಕ್ತಿಯನ್ನು ಚುನಾಯಿಸುವಾಗ ಸ್ಪರ್ಧೆಯಿಂದ ಕ್ರಮಕ್ರಮವಾಗಿ ಸ್ಪರ್ಧಿಗಳನ್ನು ಹೊರಗಿಡುವ' ವಿಧಾನವು ಉತ್ತಮವಾದುದು ಎಂಬುದು ನನ್ನ ಭಾವನೆ. ಈಗ ಪ್ರಸ್ತಾವಿಸಿರುವ ವಿಧಾನಕ್ಕೆ ಬದಲಾಗಿ ನಾನು ಸೂಚಿಸಿರುವ ವಿಧಾನವನ್ನು ಈ ಹಂತದಲ್ಲಿಯಾದರೂ ಅಂಗೀಕರಿಸಿ, ಕರಡನ್ನು ತಿದ್ದುವುದು ಸರಿಯಾದ ಕ್ರಮವೆಂದು ನಾನು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಆಗಲೇ ತಿಳಿಸಿದಂತೆ, ಕಾನೂನನ್ನು ತಿಳಿದವರು ಒಂದೇ ವ್ಯಕ್ತಿಯನ್ನು ಆಯ್ಕೆಮಾಡಬೇಕಾದಾಗಲೂ, ಈ ಅನುಪಾತೀಯ ಮೌಲ್ಯದ ಮತದ ಆಧಾರದ ಮೇಲೆ ಚುನಾವಣೆಯನ್ನು ನಡೆಸಬಹುದು ಎಂದು ನನಗೆ ತಿಳಿಸಿದ್ದಾರೆ. ಇಷ್ಟಾದರೂ, ಗೌರವಾನ್ವಿತ ಸದಸ್ಯರು ಇನ್ನೂ ಸಂಶಯವನ್ನು ಹೊಂದಿದ್ದರೆ, ಈ ವಿಷಯವನ್ನು ವಿವರಿಸುವಂತೆ ನಾನು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರನ್ನು ವಿನಂತಿಸಿಕೊಳ್ಳುತ್ತೇನೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ಅನುಪಾತೀಯ ಪ್ರಾತಿನಿಧ್ಯದ ವಿಧಾನದ ಹಿಂದಿರುವ ನೀತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸ್ವಲ್ಪ ಗೊಂದಲವಿದೆ. ಒಂದೇ ಸ್ಥಾನವನ್ನು ಭರ್ತಿ ಮಾಡಬೇಕಾದ ಸಂದರ್ಭದಲ್ಲಿ ಅದನ್ನು ಖಂಡಿತವಾಗಿಯೂ ಅನ್ವಯಿಸಬಹುದು. ಈ ವಿಧಾನವನ್ನು ಅನುಸರಿಸಿದರೆ, ಅದರಿಂದ ಯಶಸ್ವಿ ಅಭ್ಯರ್ಥಿಯು ಸಂಪೂರ್ಣ ಬಹುಮತದಿಂದ ಆಯ್ಕೆಯಾಗುತ್ತಾನೆ ಎಂಬುದು ಖಾತ್ರಿಯಾಗಿರುತ್ತದೆ. ಇಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿದ್ದರೆ, ನೀವು ಸರಳ ಬಹುಮತದ ನಿಯಮವನ್ನು ಅನ್ವಯಿಸಿದರೆ, ಚಲಾಯಿಸಲ್ಪಟ್ಟ ಮತಗಳಲ್ಲಿ ಶೇ. ೫೧ರಷ್ಟನ್ನು ಪಡೆದ ಅಭ್ಯರ್ಥಿಯನ್ನು ಚುನಾಯಿತನಾಗಿದ್ದಾನೆಂದು ಘೋಷಿಸಬಹುದು; ಆದರೆ, ನೀವು 'ಅನುಪಾತೀಯ ಪ್ರಾತಿನಿಧ್ಯದ ನೀತಿಯನ್ನು ಅನ್ವಯಿಸಿದರೆ, ಮತವನ್ನು ವರ್ಗಾವಣೆಮಾಡಬಹುದಾದ ಮತದಾನದ ಮೂಲಕ, ಸಂಪೂರ್ಣ ಬಹುಮತವನ್ನು ಪಡೆದ ಅಭ್ಯರ್ಥಿಯನ್ನು ಯಶಸ್ವೀ ಅಭ್ಯರ್ಥಿಯೆಂದು ಪರಿಗಣಿಸಬಹುದು. ಆದ್ದರಿಂದಲೇ, ಒಂದೇ ಸ್ಥಾನವನ್ನು ಭರ್ತಿಮಾಡಬೇಕಾದ ಸಂದರ್ಭದಲ್ಲಿಯೂ, ಅದನ್ನು ಅನುಪಾತೀಯ ಪ್ರಾತಿನಿಧ್ಯದ ವರ್ಗಾಯಿಸಬಹುದಾದ ಏಕಮಾತ್ರ ಮತದ ಆಧಾರದ ಮೇಲೆ ಚುನಾವಣೆಯನ್ನು ನಡೆಸಬೇಕೆಂಬ ಅವಕಾಶವನ್ನು ನಾವು ಕಲ್ಪಿಸಿದ್ದೇವೆ.

**ಶ್ರೀ ಜಗತ್ ನಾರಾಯಣ್ ಲಾಲ್ :** ಈ ವಿಷಯದ ಮೇಲೆ ಚರ್ಚೆಯನ್ನು ಲಂಬಿಸಲು ಇಷ್ಟಪಡುವುದಿಲ್ಲ. ನನ್ನ ಉದ್ದೇಶವು ಈ ಅಂಶದತ್ತ ಸದನದ ಗಮನವನ್ನು ಸೆಳೆಯುವುದಾಗಿತ್ತು. ನಾನು ಸಂವಿಧಾನ ರಚನಾ ಸಭೆಯ ನಿಯಮಗಳಲ್ಲಿನ ೬ನೆಯ ಖಂಡದ (೫)ನೆಯ ಉಪಖಂಡವನ್ನು ಓದಿ ಅದರತ್ತ

ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಗಮನವನ್ನು ಸೆಳೆಯಬಯಸುತ್ತೇನೆ. (೫)ನೆಯ ಉಪಖಂಡವು ಹೀಗೆ ಹೇಳುತ್ತದೆ:

"ಚುನಾವಣೆಯಲ್ಲಿ ಕೇವಲ ಇಬ್ಬರೇ ಅಭ್ಯರ್ಥಿಗಳು ಇದ್ದಾಗ, ಚಲಾವಣೆಯಾದ ಮತಗಳಲ್ಲಿ ಹೆಚ್ಚಿನ ಮತವನ್ನು ಪಡೆದ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಲಾಗುತ್ತದೆ. ಅವರಿಬ್ಬರು ಪಡೆದ ಮತಗಳ ಪ್ರಮಾಣವು ಒಂದೇ ಆಗಿದ್ದರೆ, ಚೀಟಿ ಎತ್ತುವ ಮೂಲಕ ಯಶಸ್ವೀ ಅಭ್ಯರ್ಥಿಯನ್ನು ಆಯ್ಕೆಮಾಡಲಾಗುತ್ತದೆ."

(೬)ನೆಯ ಉಪಖಂಡವು ಹೀಗೆ ಹೇಳುತ್ತದೆ:

"ಚುನಾವಣೆಯಲ್ಲಿ ಇಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿ ಇದ್ದಾಗ, ಯಾವ ಅಭ್ಯರ್ಥಿಯು ಇತರ ಎಲ್ಲ ಅಭ್ಯರ್ಥಿಗಳು ಪಡೆದ ಒಟ್ಟು ಮತಗಳಿಗಿಂತ ಹೆಚ್ಚು ಮತವನ್ನು ಪಡೆಯದೇ ಇದ್ದರೆ ಅತಿ ಕಡಮೆ ಮತವನ್ನು ಪಡೆದ ಅಭ್ಯರ್ಥಿಯನ್ನು ಚುನಾವಣಾ ಕಣದಿಂದ ಹೊರಗಿಡಲಾಗುತ್ತದೆ ಮತ್ತು ಮತದಾನವು ಮುಂದುವರಿಯುತ್ತದೆ. ಒಬ್ಬ ಅಭ್ಯರ್ಥಿಯು ಇತರ ಎಲ್ಲ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತಗಳಿಗಿಂತ ಹೆಚ್ಚು ಮತವನ್ನು ಪಡೆಯುವವರೆಗೂ ಪ್ರತಿ ಬಾರಿಯೂ ಅತಿ ಕಡಿಮೆ ಮತವನ್ನು ಪಡೆದ ಅಭ್ಯರ್ಥಿಯನ್ನು ಹೊರಹಾಕಲಾಗುತ್ತದೆ. ಕೊನೆಗೆ ಆ ಅಭ್ಯರ್ಥಿಯನ್ನು ವಿಜಯೀ ಅಭ್ಯರ್ಥಿಯೆಂದು ಘೋಷಿಸಲಾಗುತ್ತದೆ."

ಮಾನ್ಯರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಈ ವಿಧಾನವನ್ನು ಉಲ್ಲೇಖಿಸುತ್ತಿದ್ದರು ಎಂದು ತಿಳಿಯುತ್ತೇನೆ. ಆದರೆ, ಇದು ಮತ್ತು ಅನುಪಾತೀಯ ಪ್ರಾತಿನಿಧ್ಯದ ಪದ್ಧತಿ ಎರಡೂ ಒಂದೇ ಎಂಬುದು ನನಗೆ ತಿಳಿದಿಲ್ಲ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ಮಾನ್ಯ ಸಭಾಧ್ಯಕ್ಷರೆ, ನಾವು ಇದನ್ನು ವಿವರಿಸಬಹುದೇ?

**ಮಾನ್ಯ ಸಭಾಧ್ಯಕ್ಷರು** : ಸರಿ, ವಿವರಿಸಿ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ಅನುಪಾತೀಯ ಪ್ರಾತಿನಿಧ್ಯದ ಮೂಲ ತತ್ತ್ವವೆಂದರೆ ಕೋಟಾವನ್ನು ನಿಗದಿಗೊಳಿಸುವುದು. ಖಾಲಿಯಿರುವ ಸ್ಥಾನಗಳಿಗೆ ಒಂದನ್ನು ಸೇರಿಸಿ ಅದರಿಂದ ಒಟ್ಟು ಮತಗಳನ್ನು ಭಾಗಿಸಿ ಭಾಗಲಬ್ಧಕ್ಕೆ ಒಂದನ್ನು ಸೇರಿಸಿ ಕೋಟಾವನ್ನು ನಿಗದಿಪಡಿಸಲಾಗುವುದು. ಉದಾಹರಣೆಗೆ: ೧೦೦ ಮತದಾರರಿದ್ದಾರೆ ಮತ್ತು ಭರ್ತಿಮಾಡಬೇಕಾದ ಸ್ಥಾನವು ಒಂದು ಎಂದು ಊಹಿಸಿಕೊಳ್ಳಿ. ಆಗ ೧೦೦ನ್ನು ಎರಡರಿಂದ ಭಾಗಿಸಲಾಗುವುದು ಮತ್ತು ಅದರ ಭಾಗಲಬ್ಧವು ೫೦+೧ ಆಗುತ್ತದೆ. ೫೧ ಮತಗಳನ್ನು ಪಡೆಯದ ವ್ಯಕ್ತಿಯು ಚುನಾಯಿತನಾಗಲಾರ. ಯಾರೂ ೫೧ ಮತಗಳನ್ನು ಪಡೆಯದೇ ಇದ್ದರೆ, ಕೋಟಾವನ್ನು ತುಂಬಲಾಗುವುದಿಲ್ಲ. ಅತಿ ಕಡಿಮೆ ಮತಗಳನ್ನು ಗಳಿಸಿದ ಅಭ್ಯರ್ಥಿಯನ್ನು ಸ್ಪರ್ಧೆಯಿಂದ ಹೊರಹಾಕಲಾಗುವುದು. ಈ ಪ್ರಕ್ರಿಯೆಯಲ್ಲಿ ಯಾವ ಅಭ್ಯರ್ಥಿಯು ೫೧ ಮತಗಳನ್ನು ಪಡೆಯುತ್ತಾನೆಯೋ ಆತನನ್ನು ಯಶಸ್ವೀ ಅಭ್ಯರ್ಥಿಯೆಂದು ಘೋಷಿಸಲಾಗುವುದು.

ಇದು ಈ ಪದ್ಧತಿಯನ್ನು ಸಂಕ್ಷೇಪವಾಗಿ ವಿವರಿಸುವ ವಿಧಾನ. ಅಧ್ಯಕ್ಷರು ಸಂಪೂರ್ಣ ಬಹುಮತವನ್ನು ಪಡೆಯಬೇಕು ಎಂಬ ನಿಯಮವಿರುವ ಫ್ರಾನ್ಸಿನಲ್ಲಿ ಇದೇ ಪದ್ಧತಿಯನ್ನು ಅನುಸರಿಸುತ್ತಾರೆ. ಅಲ್ಲಿ ಮತದಾನವು ಮತ್ತೆ ಮತ್ತೆ ನಡೆಯುತ್ತದೆ. ಆದರೆ ವರ್ಗಾಯಿಸಲಾಗುವಂತಹ ಏಕಮಾತ್ರ ಮತದ ಪದ್ಧತಿಯನ್ನು ಅನುಸರಿಸುವ ಮೂಲಕ ನಮ್ಮ ಪದ್ಧತಿಯನ್ನು ರೂಪಿಸಿದವರು ಈ ಪ್ರಕ್ರಿಯೆಯನ್ನು ಕಡಿಮೆಮಾಡಿದ್ದಾರೆ. ಫ್ರಾನ್ಸಿನಲ್ಲಿರುವ ಪದ್ಧತಿಯನ್ನೇ ಅನುಸರಿಸಿದರೂ, ಇದು ಅದಕ್ಕಿಂತ ಸರಳವೂ, ನೇರವೂ ಆಗಿದೆ.

**ಮಾನ್ಯ ಸಭಾಧ್ಯಕ್ಷರು** : ನಾವು ಈ ವಿಷಯವನ್ನು ಇಲ್ಲಿಗೇ ನಿಲ್ಲಿಸೋಣ. ಬೇರೆ ಯಾರಾದರೂ ಮೂಲ ಖಂಡ ಮತ್ತು ತಿದ್ದುಪಡಿಗಳ ಮೇಲೆ ಮಾತನಾಡುತ್ತಾರೆಯೇ?

**ಶ್ರೀ ತಾಜಮಲ್ ಹುಸೇನ್** : ಮಾನ್ಯರೆ, ಮಾತನಾಡಿದುದೆಲ್ಲವೂ ಮುಗಿದಿದೆ. ಪಂಡಿತ್ ಜವಾಹರಲಾಲ್ ನೆಹರು ಅವರು ಅದಕ್ಕೆ ಉತ್ತರಿಸಿಯೂ ಆಗಿದೆ.

**ಶ್ರೀ ಸಭಾಧ್ಯಕ್ಷರು :** ಇಲ್ಲ, ಅವರಿನ್ನೂ ಉತ್ತರಿಸಿಲ್ಲ. ಅವರು ತಾವು ಸಮ್ಮತಿಸುವ ತಿದ್ದುಪಡಿಗಳನ್ನು ಕುರಿತಷ್ಟೇ ಮಾತನಾಡಿದರು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ಈಗ ಇರುವ ಹಾಗೆಯೇ ಬಿಡುವುದರಿಂದ ಈ ಖಂಡದಲ್ಲಿ ಇರುವ ಕೆಲವು ಗೊಂದಲಗಳನ್ನು ಕರಡು ರಚನಾಸಮಿತಿಯ ಸದಸ್ಯರು ಗಮನಿಸಬೇಕೆಂದು ನಾನು ಬಯಸುತ್ತೇನೆ. ಈ ಹಂತದಲ್ಲಿ ಯಾವುದೇ ತಿದ್ದುಪಡಿಯ ಅಗತ್ಯವಿಲ್ಲ. ಉಪರಾಷ್ಟ್ರಪತಿಗಳು ಲೋಕಸಭೆಯ ಅಥವಾ ರಾಜ್ಯಸಭೆಯ ಸದಸ್ಯರಾಗಿರದೆ ಹೊರಗಿನವರಾಗಿರಬಹುದು. ಪ್ರಸ್ತುತ ಇರುವ ಕಾನೂನಿನ ಅಡಿಯಲ್ಲಿ, ರಾಜ್ಯಸಭೆಯಲ್ಲಿ ಸಭಾಪತಿ ಮತ್ತು ಉಪಸಭಾಪತಿ ಇಬ್ಬರೂ ಸದನದ ಸದಸ್ಯರಾಗಿರಬೇಕು. ಹೊಸ ಸಂವಿಧಾನದ ಅಡಿಯಲ್ಲಿ ಉಪರಾಷ್ಟ್ರಪತಿಗಳು ಹೊರಗಿನವರಾಗಿದ್ದು, ಭಿನ್ನಮತದ ಸಮಯದಲ್ಲಿ ತಮ್ಮ ಮತವನ್ನು ಅವರು ಚಲಾಯಿಸಬಹುದಾಗಿದೆ. ಆದ್ದರಿಂದ ಈ ವಿಷಯವನ್ನು ಸ್ವಲ್ಪ ಪರಿಶೀಲಿಸಬೇಕು. ಮೇಲ್ಮನೆಯ ಹತ್ತು ನಾಮನಿರ್ದೇಶಿತ ಸದಸ್ಯರನ್ನು ಹೊರತುಪಡಿಸಿ, ಎರಡೂ ಸದನದ ಉಳಿದ ಎಲ್ಲ ಸದಸ್ಯರು ಚುನಾಯಿತರಾಗಬೇಕು ಎಂದು ನಾವು ನಿರೀಕ್ಷಿಸುತ್ತೇವೆಯಾದ್ದರಿಂದ ಈ ವಿಷಯವನ್ನು ಪರಿಶೀಲಿಸುವ ಅಗತ್ಯವಿದೆ. ಈಗಾಗಲೇ ಇರುವ ಸ್ಥಾನಗಳಿಗೆ ಇನ್ನೊಂದನ್ನು ಸೇರಿಸದೆ, ನಾಮನಿರ್ದೇಶಿತ ಸ್ಥಾನಗಳಲ್ಲಿ ಒಂದರಲ್ಲಿ ಅವರು (ಉಪರಾಷ್ಟ್ರಪತಿ) ಆಯ್ಕೆಯಾಗಬಹುದು.

ಎರಡನೆಯದಾಗಿ, ಅವರು ಕೆಳಮನೆಯ ಸದಸ್ಯರಾಗಿರಬಹುದು. ಹಾಗಾದರೆ, ಅವರು ಒಕ್ಕೂಟದ ಉಪರಾಷ್ಟ್ರಪತಿಯಾಗಿ ಮತ್ತು ಪದನಿಮಿತ್ತ ಮೇಲ್ಮನೆಯ ಸಭಾಪತಿಯಾಗಿ ಆಯ್ಕೆಯಾದ ತತ್‌ಕ್ಷಣ ಅವರು ತಮ್ಮ ಕೆಳಮನೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಬೇಕು. ಪ್ರಸಕ್ತ ಇರುವ ನಿಯಮದ ಅಡಿಯಲ್ಲಿ, ಮೇಲ್ಮನೆಗೆ ಸಭಾಧ್ಯಕ್ಷ ಮತ್ತು ಉಪಸಭಾಧ್ಯಕ್ಷರ ಆವಶ್ಯಕತೆಯಿದೆ. ಪಂಡಿತ್ ನೆಹರು ಅವರು ಮೇಲ್ಮನೆಯ ಸಭಾಪತಿಯಾದ ಉಪರಾಷ್ಟ್ರಪತಿ ರಾಷ್ಟ್ರಪತಿಯ ಕರ್ತವ್ಯವನ್ನು ನಿರ್ವಹಿಸುವ ಅವಧಿಯಲ್ಲಿ, ಮೇಲ್ಮನೆಗೆ ತಾತ್ಕಾಲಿಕವಾಗಿ ಒಬ್ಬ ಸಭಾಪತಿಯನ್ನು ಆಯ್ಕೆಮಾಡಬೇಕೆನ್ನುವ ಪಂಡಿತ್ ಠಾಕುರ್ ದಾಸ್ ಭಾರ್ಗವ ಅವರ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದಾರೆ. ಅದರ ಬದಲಿಗೆ, ಉಪರಾಷ್ಟ್ರಪತಿ ಆಯ್ಕೆಯಾದ ಸಮಯದಲ್ಲಿಯೇ, ಮೇಲ್ಮನೆಗೆ ಒಬ್ಬರು ಉಪಸಭಾಪತಿಯನ್ನು ನೇಮಕಮಾಡಬೇಕು. ಅವರು ಉಪರಾಷ್ಟ್ರಪತಿಯ ಅನುಪಸ್ಥಿತಿಯಲ್ಲಿ ಸಭಾಪತಿಯ ಕಾರ್ಯವನ್ನು ನಿರ್ವಹಿಸುವಂತಿರಬೇಕು ಮಾನ್ಯರೆ, ನಿಮಗೆ ತಿಳಿದಿರುವಂತೆ, ಲೋಕಸಭೆಯಲ್ಲಿ ಒಬ್ಬರು ಸಭಾಧ್ಯಕ್ಷ ಹಾಗೂ ಒಬ್ಬರು ಉಪಸಭಾಧ್ಯಕ್ಷ ಇರುತ್ತಾರೆ. ಸಭಾಧ್ಯಕ್ಷರು ಇಡೀ ದಿನ ಅವರ ಪೀಠದಲ್ಲಿ ಕುಳಿತಿರುವುದು ಸಾಧ್ಯವಿಲ್ಲವಾದ್ದರಿಂದ, ಅವರು ಪೀಠದಲ್ಲಿ ಅನುಪಸ್ಥಿತರಾದಾಗ, ಉಪಸಭಾಧ್ಯಕ್ಷರು ಅವರ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಇದೇ ರೀತಿಯಲ್ಲಿಯೇ, ಭಾರತ ಸರ್ಕಾರದ ಅಧಿನಿಯಮದಲ್ಲಿ ರಾಜ್ಯಸಭೆಗೂ ಸಭಾಪತಿ ಹಾಗೂ ಉಪಸಭಾಪತಿ ಸ್ಥಾನಕ್ಕೆ ಅವಕಾಶವನ್ನು ಮಾಡಿಕೊಡಲಾಗಿತ್ತು. ರಾಜ್ಯಸಭೆಯು ನಡೆಯುತ್ತಿರುವಾಗ ಅದರ ಸಭಾಪತಿಯ ಅನುಪಸ್ಥಿತಿಯಲ್ಲಿ ಉಪಾಸಭಾಪತಿ ಅವರ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶವಿತ್ತು. ಆದ್ದರಿಂದ, ಮೇಲ್ಮನೆಯಲ್ಲಿ ತಾತ್ಕಾಲಿಕ ಸಭಾಪತಿಯನ್ನು ಹೊಂದಿರುವುದರ ಬದಲಾಗಿ, ಸಭಾಪತಿಯ ಅನುಪಸ್ಥಿತಿಯಲ್ಲಿ ಅವರ ಸ್ಥಾನದಲ್ಲಿ ಕುಳಿತು ಅವರ ಕರ್ತವ್ಯಗಳನ್ನು ನಡೆಸಿಕೊಡಲು ಆ ಸದನದ ಸದಸ್ಯರಲ್ಲಿ ಒಬ್ಬರನ್ನು ಖಾಯಂ ಉಪಸಭಾಪತಿಯನ್ನಾಗಿ ಆಯ್ಕೆಮಾಡಬಹುದು.

ಮೂರನೆಯದಾಗಿ, ಅವರು ಯಾವುದೇ ಸದನದ ಅಥವಾ ಬೇರೆ ಯಾವುದೇ ಶಾಸನಸಭೆಯ ಸದಸ್ಯರಾಗಿರಬಹುದು. ಇಂತಹ ಸಂದರ್ಭದಲ್ಲಿ, ಅವರು ಪ್ರಕೃತ ಇರುವ ಸದನದ ಸದಸ್ಯತ್ವವನ್ನು ಬಿಟ್ಟುಕೊಡಬೇಕು ಎಂಬುದಕ್ಕಾಗಿ ಒಂದು ಉಪಬಂಧವನ್ನು ರೂಪಿಸಬೇಕಾಗುತ್ತದೆ.

ಇವೆಲ್ಲವನ್ನೂ ಕರಡು ರಚನಾಸಮಿತಿಯು ವಿವರವಾದ ಮಸೂದೆಯನ್ನು ಸದನದ ಮುಂದಿಡುವ

ಮೊದಲು ತನ್ನ ಗಮನಕ್ಕೆ ತಂದುಕೊಂಡಿರಬೇಕು ಎಂದು ನಾನು ಬಯಸುತ್ತೇನೆ.

ಐದು ವರ್ಷಗಳಿಂದ ನಾಲ್ಕು ವರ್ಷಗಳಿಗೆ ಉಪರಾಷ್ಟ್ರಪತಿಯ ಅಧಿಕಾರಾವಧಿಯನ್ನು ಇಳಿಸುವುದನ್ನು ಕುರಿತು ಇದ್ದ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಮಂಜಸವಾದ ಯಾವುದೇ ತರ್ಕವೂ ಇಲ್ಲ. ರಾಜ್ಯಸಭಾ ಸದಸ್ಯರ ಸದಸ್ಯತ್ವದ ಅವಧಿಯು ಆರು ವರ್ಷಗಳಾಗಿರುವುದರಿಂದ ಉಪರಾಷ್ಟ್ರಪತಿಯ ಅಧಿಕಾರಾವಧಿಯು ಐದು ವರ್ಷಗಳಿರಲಿ ಅಥವಾ ನಾಲ್ಕು ವರ್ಷಗಳಿರಲಿ, ಅದರಿಂದ ಯಾವುದೇ ಬಾಧಕವೂ ಇಲ್ಲ.

ಈ ತಿದ್ದುಪಡಿಗೆ ಯಾವುದೇ ಕಾರಣವೂ ಇಲ್ಲ, ಆದುದರಿಂದ ಇದನ್ನು ಅಂಗೀಕರಿಸಲಾಗದು.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತಿದ್ದೇನೆ. ಈಗ ೬ನೆಯ ಖಂಡದ (೧)ನೆಯ ಉಪಖಂಡಕ್ಕೆ ಆದೇಶಿಸುವ ಎರಡು ತಿದ್ದುಪಡಿಗಳು ನನ್ನ ಬಳಿ ಇವೆ. ಒಂದು, ಶ್ರೀ ಸಂತಾನಮ್ ಅವರದು. ಮತ್ತೊಂದು ಶ್ರೀ ನಜಿರುದ್ದೀನ್ ಅಹ್ಮದ್ ಅವರದು. ಮೊದಲು ನಾನು ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತಿದ್ದೇನೆ.

ಮುಂದಿಟ್ಟಿರುವ ವಿಷಯ :

"೬ನೆಯ ಖಂಡದ ೧ನೆಯ ಉಪಖಂಡಕ್ಕೆ ಬದಲಾಗಿ ಮುಂದಿನದನ್ನು ಸೇರಿಸಿಕೊಳ್ಳಬೇಕು :

'ರಾಷ್ಟ್ರಪತಿಯ ಹುದ್ದೆಯು ಖಾಲಿಯಾದ ದಿನ ಮತ್ತು ಅವರನ್ನು ಚುನಾಯಿಸಿ ಅವರು ಅಧಿಕಾರವನ್ನು ಸ್ವೀಕರಿಸುವ ದಿನಗಳ ನಡುವಿನ ಅವಧಿಯಲ್ಲಿ ಮತ್ತು ಗೈರುಹಾಜರಿ, ಅಸ್ವಸ್ಥತೆ ಅಥವಾ ಇನ್ನಾವ ಕಾರಣದಿಂದ ರಾಷ್ಟ್ರಪತಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲಾಗದಿದ್ದರೆ, ಅಂತಹ ಸಂದರ್ಭಗಳಲ್ಲಿ ಉಪರಾಷ್ಟ್ರಪತಿ ರಾಷ್ಟ್ರಪತಿಯ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು',"

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ನಜಿರುದ್ದೀನ್ ಅಹ್ಮದ್ ಮತ್ತು ಶ್ರೀ ಪಾಕರ್ ಸಾಹಿಬ್ ಅವರ ತಿದ್ದುಪಡಿಗಳನ್ನು ಮತಕ್ಕೆ ಹಾಕುವ ಅಗತ್ಯ ಈಗ ಇಲ್ಲ.

ಮುಂದಿಟ್ಟಿರುವ ವಿಷಯ :

"೬ನೆಯ ಖಂಡದ (೨)ನೆಯ ಉಪಖಂಡದ ಬದಲಿಗೆ ಈ ಮುಂದಿನದನ್ನು ಬದಲಿಸತಕ್ಕದ್ದು:

'(೨) ಉಪರಾಷ್ಟ್ರಪತಿಯವರು, ರಾಷ್ಟ್ರಪತಿಯವರನ್ನು ಆರಿಸುವ ಮತದಾರ ವರ್ಗದವರಿಂದಲೇ ಆರಿಸಲ್ಪಡುತ್ತಾರೆ ಮತ್ತು ಅವರು ರಾಜ್ಯಸಭೆಯ ಪದನಿಮಿತ್ತ ಸಭಾಪತಿಗಳಾಗಿರುತ್ತಾರೆ '."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"೬ನೆಯ ಖಂಡದಲ್ಲಿ ಹೊಸ (೩)ನೆಯ ಉಪಖಂಡವಾಗಿ ಈ ಮುಂದಿನದನ್ನು ಸೇರಿಸಿಕೊಳ್ಳತಕ್ಕದ್ದು, ಮತ್ತು ಈಗ ಇರುವ (೩)ನೆಯ ಉಪಖಂಡದ ಕ್ರಮಾಂಕವನ್ನು (೪) ಎಂದು ಬದಲಾಯಿಸತಕ್ಕದ್ದು:

'(೩) ಉಪರಾಷ್ಟ್ರಪತಿ, ರಾಷ್ಟ್ರಪತಿಯ ಕಾರ್ಯವನ್ನು ನಿರ್ವಹಿಸುತ್ತಿರುವ ಅವಧಿಯಲ್ಲಿ, ರಾಜ್ಯಸಭೆಯು, ಅಗತ್ಯವಿದ್ದಲ್ಲಿ, ಒಬ್ಬರು ತಾತ್ಕಾಲಿಕ ಸಭಾಪತಿಯನ್ನು ಆಯ್ದುಕೊಳ್ಳಬಹುದು.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"೬ನೆಯ ಖಂಡದ (೩)ನೆಯ ಉಪಖಂಡದಲ್ಲಿರುವ '೫ ವರ್ಷಗಳು' ಎಂಬ ಪದಗಳಿಗೆ ಬದಲಾಗಿ ಮುಂದಿನ ಪದಗಳನ್ನು ಬದಲಿಸಿಕೊಳ್ಳತಕ್ಕದ್ದು.

'೪ ವರ್ಷಗಳು ಅಥವಾ ಹೊಸ ಉಪರಾಷ್ಟ್ರಪತಿಯ ಸ್ಥಾನಕ್ಕೆ ಚುನಾವಣೆಯು ನಡೆಯುವವರೆಗೆ, ಇವೆರಡರಲ್ಲಿ ಯಾವುದು ಕಾಲಾನುಕ್ರಮದಲ್ಲಿ ಅನಂತರ ಬರುವುದೋ ಅಲ್ಲಿಯವರೆಗೆ'."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"೭ನೆಯ ಖಂಡಕ್ಕೆ ಈ ಮುಂದಿನ ಹೊಸ (೪)ನೆಯ ಉಪಖಂಡವನ್ನು ಸೇರಿಸತಕ್ಕದ್ದು:

'(೪) ಮೇಲಿನ ೪ನೆಯ ಖಂಡದ ಉಪಬಂಧಗಳು ಅಗತ್ಯ ಬದಲಾವಣೆಗಳೊಂದಿಗೆ ಉಪರಾಷ್ಟ್ರಪತಿಗೂ ಅನ್ವಯವಾಗುತ್ತವೆ'."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"(೩)ನೆಯ ಉಪಖಂಡದ ಅನಂತರ ಈ ಮುಂದಿನ ಉಪಖಂಡವನ್ನು ಸೇರಿಸಿಕೊಳ್ಳತಕ್ಕದ್ದು:

'(೪) ೩೫ ವರ್ಷ ವಯಸ್ಸಾಗದ ಯಾರನ್ನೂ ಉಪರಾಷ್ಟ್ರಪತಿಯನ್ನಾಗಿ ನೇಮಿಸತಕ್ಕದ್ದಲ್ಲ'."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಇದರ ಉಪಖಂಡಗಳಿಗೆ ಕ್ರಮಾಂಕವನ್ನು ಬದಲಿಸಬೇಕಾಗಿದೆಯೆಂದು ತೋರುತ್ತದೆ, ಸದನವು ಈ ಉಪಖಂಡಗಳ ಕ್ರಮಾಂಕವನ್ನು ಬದಲಾಯಿಸಲು ಕರಡು ರಚನಾಸಮಿತಿಗೆ ಅನುಮತಿಯನ್ನು ನೀಡಿದೆ. ನಾನು ತಿದ್ದುಪಡಿಮಾಡಲ್ಪಟ್ಟ ಖಂಡವನ್ನು ಈಗ ಮತಕ್ಕೆ ಹಾಕುತ್ತಿದ್ದೇನೆ.

ಮುಂದಿಟ್ಟಿರುವ ವಿಷಯ :

"ತಿದ್ದುಪಡಿಮಾಡಲ್ಪಟ್ಟ ಈ ಖಂಡವನ್ನು ಅಂಗೀಕರಿಸತಕ್ಕದ್ದು."

ತಿದ್ದುಪಡಿ ಮಾಡಲಾದ ೭ನೆಯ ಖಂಡವನ್ನು ಅಂಗೀಕರಿಸಲಾಯಿತು.

## ೭ನೆಯ ಖಂಡ

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ೭ನೆಯ ಖಂಡವನ್ನು ಸದನದ ಅಂಗೀಕಾರಕ್ಕಾಗಿ ಸದನದ ಮುಂದಿಡಲು ತಮ್ಮ ಅನುಮತಿಯನ್ನು ಬೇಡುತ್ತಿದ್ದೇನೆ. ಈ ಸಂಬಂಧ ನಾನು ಹೇಳಬೇಕಾಗಿರುವುದು ಅತ್ಯಲ್ಪ. ಯಾವುದೇ ರಾಜ್ಯದಲ್ಲಿಯ ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರವನ್ನು ದೇಶದ ಅತ್ಯುನ್ನತ ಅಧಿಕಾರ ರಾಷ್ಟ್ರಪತಿಯ ಕೈಯಲ್ಲಿರಬೇಕು. ದೇಶದ ರಕ್ಷಣಾ ವಿಭಾಗದ ಪರಮಾಧಿಕಾರವೂ ರಾಷ್ಟ್ರಪತಿಯ ಕೈಯಲ್ಲಿಯೇ ಇರತಕ್ಕದ್ದು. ಇದನ್ನು (೨)(ಎ) ಉಪಖಂಡವು ವಿವರಿಸುತ್ತದೆ.

ವಾಸ್ತವವಾಗಿ, ಸೂಚನೆಯನ್ನು ನೀಡಿರುವ ಎಲ್ಲ ತಿದ್ದುಪಡಿಗಳೂ (೨)(ಬಿ) ಉಪಖಂಡಕ್ಕೇ ಸಂಬಂಧಿಸಿದವು. ಈ ವಿಷಯಕ್ಕೆ ಸಂಬಂಧಿಸಿದ ಹಾಗೆ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ನಮ್ಮ ಗಮನಕ್ಕೆ ತಂದಿರುವ ಅಂಶಗಳನ್ನು ಪರಿಗಣಿಸುವ ಉದ್ದೇಶದಿಂದ, ಇದರ ಪರಿಶೀಲನೆಯನ್ನು ಮುಂದೂಡುವ ಪ್ರಸ್ತಾವವನ್ನು ಮಂಡಿಸುತ್ತಾರೆಂದುಕೊಂಡಿದ್ದೇನೆ. ಈ ಪರಿಶೀಲನೆಯನ್ನು ಇನ್ನು ಒಂದೆರಡು ದಿನಗಳಲ್ಲಿ ಪೂರ್ಣಗೊಳಿಸಲಿದ್ದಾರೆಂದು ನಾನು ಭಾವಿಸುತ್ತೇನೆ, ಮತ್ತು ನಾವು ಮತ್ತೆ ಮುಂದಿನ ಸೋಮವಾರ ಇಲ್ಲಿ ಸಭೆ ಸೇರಿದಾಗ, ಬಹುಶಃ ಅದನ್ನು ಅದರ ಅರ್ಹತೆಯನ್ನು ಪರಿಗಣಿಸುವ ಸ್ಥಿತಿಯಲ್ಲಿರುತ್ತೇವೆ.

ಮಾನ್ಯರೆ, ನಾನು ಮಂಡಿಸುತ್ತೇನೆ :

"೭. (೧) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಕಾರ್ಯನಿರ್ವಾಹಕ ಅಧಿಕಾರವು ರಾಷ್ಟ್ರಪತಿಯ ಕೈಯಲ್ಲಿ ಇರತಕ್ಕದ್ದು.

(೨) ಹಿಂದೆ ಹೇಳಿದ ಉಪಬಂಧಗಳಿಗೆ ಬಾಧೆಯಿಲ್ಲದಂತೆ:

(ಎ) ದೇಶದ ರಕ್ಷಣಾ ವಿಭಾಗದ ಪರಮಾಧಿಕಾರವು ರಾಷ್ಟ್ರಪತಿಯ ಕೈಯಲ್ಲಿ ಇರತಕ್ಕದ್ದು;

(ಬಿ) ದೇಶದ ಯಾವುದೇ ನ್ಯಾಯಾಲಯದಲ್ಲಿ ದಂಡಸಂಹಿತೆಯ ಅಡಿಯಲ್ಲಿ ನೀಡಲ್ಪಟ್ಟ ಶಿಕ್ಷೆಯನ್ನು ಕಡಿಮೆ ಮಾಡುವ ಅಧಿಕಾರವು ರಾಷ್ಟ್ರಪತಿಯವರಿಗೆ ಇರತಕ್ಕದ್ದು. ಆದರೆ ಇಂತಹ ಅಧಿಕಾರವನ್ನು ಇತರ ಅಧಿಕಾರಿಗಳಿಗೂ ನೀಡಬಹುದಾಗಿರುತ್ತದೆ."

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದರಾಸು : ಸಾಮಾನ್ಯ) : ಮಾನ್ಯರೆ, ನಾನು (೨)ನೆಯ ಉಪಖಂಡದ (ಬಿ)ಯನ್ನು ಕುರಿತ ಚರ್ಚೆಯನ್ನು ಮುಂದಕ್ಕೆ ಹಾಕಬೇಕೆಂದು ಕೋರುತ್ತೇನೆ. ಇದಕ್ಕಾಗಿ ವಿವರವಾದ ಕಾರಣಗಳನ್ನು ನೀಡಬೇಕಾದ ಅಗತ್ಯವಿದೆಯೆಂದು ನನಗೆ ಎನಿಸದು. ಪ್ರಾಂತೀಯ ರಾಜ್ಯಪಾಲರ ಅಧಿಕಾರ ಮತ್ತು ರಾಜ್ಯಗಳ ಪರಿಸ್ಥಿತಿಯನ್ನು ಕುರಿತು ಈ ಉಪಖಂಡವು ಹೆಚ್ಚಿನ ಗಮನವನ್ನು ಬೇಡುತ್ತದೆ ಮತ್ತು ಸದನವು ಒಪ್ಪಿದರೆ ಇದನ್ನು ಮುಂದಿನ ಸೋಮವಾರ ನಾವು ಚರ್ಚೆಗೆ ಎತ್ತಿಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಈ ಖಂಡವನ್ನು ಕುರಿತ ಚರ್ಚೆಯನ್ನು ಮುಂದೂಡತಕ್ಕದ್ದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ಮಾನ್ಯರೆ, ತಿದ್ದುಪಡಿಗಳ ಪರಿಸ್ಥಿತಿ ಏನು? ಈ ಖಂಡದ ಹೊಸ ಆವೃತ್ತಿಯನ್ನು ಮಂಡಿಸಿದಾಗ ತಿದ್ದುಪಡಿಗಳನ್ನು ಮಂಡಿಸಲು ಸದನದ ಸದಸ್ಯರಿಗೆ ಅವಕಾಶವನ್ನು ನೀಡಲಾಗುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು** : ಹೌದು, ಖಂಡಿತವಾಗಿಯೂ. ಕೆಲವೊಂದು ಬದಲಾವಣೆಗಳನ್ನು ಮಾಡಿದ ಮೇಲೆ ಸದಸ್ಯರು ತಿದ್ದುಪಡಿಯ ಸೂಚನೆಗಳನ್ನು ನೀಡಲು ಅವಕಾಶವನ್ನು ನೀಡಲಾಗುತ್ತದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾವು ಅನುಸರಿಸುವ ಕ್ರಮವು ಹೀಗಿದೆ: ಒಮ್ಮೆ ಪರಿಶೀಲನೆಯು ಮುಗಿದ ಅನಂತರ, ಈ ಖಂಡದ ಮೇಲಿನ ತಿದ್ದುಪಡಿಯನ್ನು ಮಂಡಿಸುವುದನ್ನು ಕುರಿತು ಯಾರಾದರೂ ಅದರ ಸೂಚನೆಯನ್ನು ನೀಡಿ, ಎಲ್ಲ ಸದಸ್ಯರಿಗೂ ಅದರ ಪ್ರತಿಗಳನ್ನು ನೀಡಲಾಗುವುದು. ಆ ತಿದ್ದುಪಡಿಗೆ ತಿದ್ದುಪಡಿಗಳನ್ನು ಸೂಚಿಸಲು ಸದಸ್ಯರು ಸ್ವತಂತ್ರರಾಗಿರುತ್ತಾರೆ.

## ೮ನೆಯ ಖಂಡ

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ೮ನೆಯ ಖಂಡವನ್ನು ಮಂಡಿಸಲು ತಮ್ಮ ಅನುಮತಿಯನ್ನು ಬೇಡುತ್ತೇನೆ. ಅದು ಹೀಗಿದೆ:

"೮. ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸಂಸತ್ತು ತನ್ನ ವ್ಯಾಪ್ತಿಯಲ್ಲಿ ಬರುವ ವಿಷಯಗಳ ಮೇಲೆ ಮತ್ತು ಯಾವುದೇ ಒಪ್ಪಂದಕ್ಕೆ ಅನುಸಾರವಾಗಿ ಅಧಿಕಾರವನ್ನು ಪಡೆದಿರುವ ವಿಷಯಗಳ ಮೇಲೆ ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರಿಯು ಈ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಮಾಡುವ ಹಕ್ಕನ್ನು ಉಳ್ಳವರಾಗಿರುತ್ತಾರೆ ಮತ್ತು ಅವರು ಈ ಹಕ್ಕನ್ನು ತಮ್ಮ ಏಜೆನ್ಸಿಯ ಮೂಲಕ ಅಥವಾ ರಾಜ್ಯಗಳ ಮೂಲಕ ಚಲಾಯಿಸಬಹುದು."

ಕಾರ್ಯನಿರ್ವಾಹಕ ಅಧಿಕಾರವು ಶಾಸಕಾಂಗದ ಅಧಿಕಾರದೊಡನೆ ಹಾಸುಹೊಕ್ಕಾಗಿರುತ್ತದೆ ಎಂಬ ಸಾಮಾನ್ಯ ತತ್ತ್ವವನ್ನು ಇದು ತಿಳಿಸುತ್ತದೆ. ಇದಕ್ಕೆ ಇರುವ ಒಂದೇ ಅಪವಾದವೆಂದರೆ, ವಿಶೇಷ ಒಪ್ಪಂದಗಳಿಗೆ ಒಳಪಟ್ಟ ವಿಷಯಗಳು. ಇವುಗಳನ್ನು ಕುರಿತ ವಿವರವು ಈ ಖಂಡದ ಕೊನೆಯಲ್ಲಿ ಬರುತ್ತದೆ.

(೨೦೧ ಮತ್ತು ೨೦೧ಎ ತಿದ್ದುಪಡಿಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯ ಸಭಾಧ್ಯಕ್ಷರೆ, ೮ನೆಯ ಖಂಡವನ್ನು ೮ಎ ಖಂಡವನ್ನಾಗಿ ಮಾಡುವ ತಿದ್ದುಪಡಿಯ ಸೂಚನೆಯನ್ನು ನಾನು ನೀಡಿದ್ದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಮೊದಲು ಸದನದಲ್ಲಿ ೮ನೆಯ ಖಂಡವನ್ನು ಮಂಡಿಸಬಹುದು. ಉದ್ದೇಶಿತ ತಿದ್ದುಪಡಿಯು ಹೊಸ ೮ಎ ಖಂಡವನ್ನು ಸೇರಿಸುವುದಕ್ಕಾಗಿ ಇದೆ.

**ಮಾನ್ಯ ಸಭಾಧ್ಯಕ್ಷರು** : ವಾಸ್ತವವಾಗಿ ನನಗೆ ಹೊಸ ಖಂಡಕ್ಕಾಗಿ ಎರಡು ತಿದ್ದುಪಡಿಗಳ ಸೂಚನೆಗಳು ಬಂದಿವೆ, ಒಂದು, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರಿಂದ, ಇನ್ನೊಂದು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರಿಂದ. ನಾನು ಮೊದಲು ೮ನೆಯ ಖಂಡವನ್ನು ಕೈಗೆತ್ತಿಕೊಳ್ಳುವುದು ಉತ್ತಮ ಎಂದು ಭಾವಿಸುತ್ತೇನೆ.

೮ನೆಯ ಖಂಡವನ್ನು ಕುರಿತು ಯಾರೂ ಮಾತನಾಡಲು ಬಯಸದೆ ಇರುವುದರಿಂದ ನಾನು ಅದನ್ನು ಮತಕ್ಕೆ ಹಾಕುತ್ತೇನೆ.

೮ನೆಯ ಖಂಡವನ್ನು ಅಂಗೀಕರಿಸಲಾಯಿತು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯ ಸಭಾಧ್ಯಕ್ಷರೆ, ನಾನು ೮ನೆಯ ಖಂಡಕ್ಕೆ ಈ ಮುಂದಿನಂತೆ ತಿದ್ದುಪಡಿಯನ್ನು ಮಂಡಿಸಲು ಉದ್ದೇಶಿಸಿದ್ದೇನೆ:

**ಮಾನ್ಯ ಸಭಾಧ್ಯಕ್ಷರು** : ಅದು ೮ನೆಯ ಖಂಡಕ್ಕೆ ಇರುವ ತಿದ್ದುಪಡಿಯಲ್ಲ, ಆದರೆ ೮ಎ ಹೊಸ ಖಂಡವಾಗಿ ಸೇರ್ಪಡೆಯಾದದ್ದು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಹೌದು ಮಾನ್ಯರೆ, ನನ್ನ ಖಂಡದಲ್ಲಿ ಉಲ್ಲೇಖಿಸಿರುವ 'ಒಕ್ಕೂಟ' ಎಂಬ ಪದಕ್ಕೆ ಮಹಾಮಂಡಲಿ (ಫೆಡರೇಷನ್) ಎಂಬ ಪದವನ್ನು ಬದಲಿಸಿದ್ದೆ 'ಒಕ್ಕೂಟ' ಎಂಬುದಕ್ಕೆ ಬದಲು 'ಮಹಾಮಂಡಲಿ' ಎಂಬ ಪದವನ್ನು ಬದಲಿಸಲು ಸದನ ಅನುಮತಿಸುತ್ತದೆ ಎಂಬ ಭರವಸೆ ಹೊಂದಿದ್ದೇನೆ. ಇದೊಂದು ಪ್ರಮಾದ. ನನ್ನ ತಿದ್ದುಪಡಿ ಹೀಗಿದೆ:

"೮ನೆಯ ಖಂಡದ ಅನಂತರ, ಈ ಮುಂದಿನ ಹೊಸ ಖಂಡವನ್ನು ಸೇರಿಸಿಕೊಳ್ಳತಕ್ಕದ್ದು:

'೮ಎ (೧) ಮಹಾಮಂಡಲಿಯ ಸರ್ಕಾರವು, ಯಾವುದಾದರೂ ಭಾರತೀಯ ರಾಜ್ಯದೊಡನೆ ಭಾರತದ ಮಹಾಮಂಡಲಿ ಮತ್ತು ಅದಕ್ಕೆ ಸೇರಲಿರುವ ಭಾರತೀಯ ರಾಜ್ಯಗಳ ನಡುವಿನ ಸಂಬಂಧದ ಬಗೆಗೆ ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ಒಪ್ಪಂದಮಾಡಿಕೊಂಡು, ಆ ರಾಜ್ಯದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ಕೈಗೆತ್ತಿಕೊಳ್ಳಬಹುದು.

(೨) ಮಹಾಮಂಡಲಿಗೆ ಸೇರಲು ಬಯಸದೆ ಇರುವ ರಾಜ್ಯದೊಡನೆ ಮಾಡಿಕೊಂಡ ಒಪ್ಪಂದವು, ಮಹಾಮಂಡಲಿಯ ಸಂಸತ್ತು ತನ್ನ ವ್ಯಾಪ್ತಿಯಲ್ಲಿ ವಿದೇಶಗಳೊಡನೆ ಮಾಡಿಕೊಳ್ಳುವ ಒಪ್ಪಂದಗಳಿಗೆ ಅನ್ವಯವಾಗುವ ಕಾನೂನುಗಳಿಗೆ ಒಳಪಟ್ಟಿರುತ್ತದೆ.

(೩) ಅಂತಹ ಒಪ್ಪಂದವು ಒಂದು ಪ್ರಾಂತ್ಯ ಮತ್ತು ಒಂದು ರಾಜ್ಯಗಳ ನಡುವೆ ೮ನೆಯ ಖಂಡದ ಅಡಿಯಲ್ಲಿ ಮಾಡಿಕೊಂಡಿರುವ ಒಪ್ಪಂದದ ವಿಷಯವನ್ನು ಒಳಗೊಂಡಿದ್ದರೆ, ಪ್ರಾಂತ್ಯ ಮತ್ತು ರಾಜ್ಯಗಳ ನಡುವಿನ ಒಪ್ಪಂದವು ಹಿಂದಕ್ಕೆ ತೆಗೆದುಕೊಂಡ ಹಾಗಾಗುತ್ತದೆ ಮತ್ತು ರದ್ದಾಗುತ್ತದೆ.

(೪) (೧)ನೆಯ ಉಪಖಂಡದ ಪ್ರಕಾರ ಒಂದು ಒಪ್ಪಂದವು ಏರ್ಪಟ್ಟಿದ್ದಾಗ, ಒಪ್ಪಂದದ ಕರಾರುಗಳಿಗೆ ಅನುಗುಣವಾಗಿ, ಮಹಾಮಂಡಲಿಯು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಪ್ರಕ್ರಿಯೆಗಳನ್ನು ಸೂಕ್ತವಾದ ಪ್ರಾಧಿಕಾರಗಳ ಮೂಲಕ ಚಲಾಯಿಸಬಹುದು."

ನಿಮ್ಮ ಅನುಮತಿಯನ್ನು ಪಡೆದು, ಈ ಖಂಡಕ್ಕೆ ಸಮರ್ಥನೆಯಾಗಿ ನಾನು ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಪ್ರಾಂತೀಯ ಕ್ಷೇತ್ರದಲ್ಲಿ, ಪ್ರಾಂತೀಯ ಸಂವಿಧಾನಕ್ಕೆ ಸಂಬಂಧಿಸಿದಂತೆ ಈ ಸದನವು ಅಂಗೀಕರಿಸಿರುವ ಖಂಡಕ್ಕೆ ಅನುಗುಣವಾಗಿರುವಂತೆ ಈ ಖಂಡವನ್ನು ತರುವುದೇ ಇಲ್ಲಿನ ಉದ್ದೇಶವಾಗಿದೆ.

ಇದು ಪ್ರಾಂತೀಯ ಕ್ಷೇತ್ರದಲ್ಲಿ ಮಾಡಿಕೊಂಡ ಒಪ್ಪಂದದ ಪರಿಣಾಮವಾಗಿ ಒಂದು ರಾಜ್ಯವು ಒಂದು ಪ್ರಾಂತ್ಯಕ್ಕೆ ಬಿಟ್ಟುಕೊಟ್ಟಿರುವ ಕೆಲವೊಂದು ಖಾತೆಗಳ ಆಡಳಿತವನ್ನು ನಡೆಸಲು ಪ್ರಾಂತ್ಯಗಳಿಗೆ ಅಧಿಕಾರವನ್ನು ನೀಡುತ್ತದೆ. ಮಹಾಮಂಡಲಿಗೆ ಇವುಗಳನ್ನು ಹೆಚ್ಚಿನ ಅಧಿಕಾರವನ್ನು ನೀಡುವುದು ಈ ಖಂಡದ ಉದ್ದೇಶವಾಗಿದೆ. (೧)ನೆಯ ಖಂಡವು ಮಹಾಮಂಡಲಿಗೆ ಸೇರುತ್ತಿರುವ ರಾಜ್ಯಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ರಾಜ್ಯಗಳು ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ ಮಹಾಮಂಡಲಿಯನ್ನು ಸೇರಬಹುದು. ಉಳಿದ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಡ, ಕೆಲವು ನಿರ್ದಿಷ್ಟ ಅಂಶಗಳಿಗೆ ಸಂಬಂಧಿಸಿದ ಹಾಗೆ ಅಧಿಕಾರ ಚಲಾವಣೆಯನ್ನು ಕುರಿತಂತೆ ಅವು ಭಾರತದ ಮಹಾಮಂಡಲಿಯೊಡನೆ ಒಪ್ಪಂದಗಳನ್ನು ಮಾಡಿಕೊಳ್ಳಲು ಅವು ಇಚ್ಛಿಸುತ್ತಿರಬಹುದು. ಈ ಸೇರುವಿಕೆಯ ಒಪ್ಪಂದದಲ್ಲಿ, ಸೇರಿರದ ಅಂಶಗಳ ವಿಷಯದಲ್ಲಿ ಕೂಡ ಆ ರಾಜ್ಯಗಳು ಮಹಾಮಂಡಲಿಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುವ ಅವಕಾಶವನ್ನು ಈ ಖಂಡವು ನೀಡುತ್ತದೆ.

ಎರಡನೆಯ ಉಪಖಂಡವು ಮಹಾಮಂಡಲಿಗೆ ಸೇರದಿರುವ ಆದರೆ ಭಾರತ ಒಕ್ಕೂಟದೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಯಸುವ ರಾಜ್ಯಗಳಿಗೆ ಅನ್ವಯವಾಗುತ್ತದೆ. ಅಂತಹ ಒಪ್ಪಂದಗಳು, ವಿದೇಶಗಳೊಂದಿಗೆ ಒಪ್ಪಂದಮಾಡಿಕೊಳ್ಳುವ ಸಂಸತ್ತಿನ ಸಂಪೂರ್ಣ ಅಧಿಕಾರದ ಅಡಿಯಲ್ಲಿ ಬರುತ್ತದೆ. ಇದಕ್ಕೆ ಅವಕಾಶವನ್ನು ಈ ಉಪಬಂಧವು ಮಾಡಿಕೊಡುತ್ತದೆ. "ಮಹಾಮಂಡಲಿಗೆ ಸೇರದಿರುವ ರಾಜ್ಯಗಳೊಂದಿಗೆ ಮಾಡಿಕೊಳ್ಳುವ ಅಂತಹ ಒಪ್ಪಂದವು ಸಂಸತ್ತು ವಿದೇಶಾಂಗದ ವ್ಯಾಪ್ತಿಗೆ ಬರುವ ಕಾನೂನುಗಳನ್ನು ಮಾಡುವ ಅಧಿಕಾರದ ಅಡಿಯಲ್ಲಿ ಬರುತ್ತದೆ ಮತ್ತು ಆ ಕಾನೂನುಗಳಿಗೆ ಬದ್ಧವಾಗಿರುತ್ತದೆ."

ಮೂರನೆಯ ಉಪಖಂಡವು ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಹಾಗೂ ಮಹಾಮಂಡಲಿ ಮತ್ತು ರಾಜ್ಯಗಳ ನಡುವೆ ಉದ್ಭವಿಸಬಹುದಾದ ಘರ್ಷಣೆಗಳನ್ನು ತಡೆಯುವ ಉದ್ದೇಶವನ್ನು ಹೊಂದಿದೆ. ಪ್ರಾಂತೀಯ ಸಂವಿಧಾನಗಳಲ್ಲಿಯೂ ಅವುಗಳು ಮಹಾಮಂಡಲಿಯ ಸರ್ಕಾರದ ನಿಯಂತ್ರಣಕ್ಕೆ ಒಳಗಾಗಿರುತ್ತವೆ ಎಂದು ಹೇಳುವ ಉಪಬಂಧಗಳನ್ನು ಮಾಡಿದ್ದೇವೆ. ಈ ಉಪಖಂಡದ ಉದ್ದೇಶವೆಂದರೆ, ಮಹಾಮಂಡಲಿ ಹಾಗೂ ರಾಜ್ಯವೊಂದರ ನಡುವೆ ಒಪ್ಪಂದವಾದರೆ, ಮತ್ತು ಆ ಒಪ್ಪಂದವು ಈಗಾಗಲೇ ಆ ರಾಜ್ಯವು ಪ್ರಾಂತ್ಯವೊಂದರ ನಡುವೆ ಮಾಡಿಕೊಂಡಿರುವ ಒಪ್ಪಂದದ ವಿಷಯವನ್ನು ಒಳಗೊಂಡಿದ್ದರೆ, ಮಹಾಮಂಡಲಿ ಮತ್ತು ಸದರಿ ರಾಜ್ಯದ ನಡುವೆ ಆದ ಒಪ್ಪಂದದ ಪ್ರಾಧಾನ್ಯವು ರಾಜ್ಯ ಮತ್ತು ಪ್ರಾಂತ್ಯದ ನಡುವಿನ ಒಪ್ಪಂದದ ಪ್ರಾಧಾನ್ಯಕ್ಕಿಂತ ಹಿರಿದಾಗಿರುತ್ತದೆ.

೮(೪) ಖಂಡವು ಒಪ್ಪಂದವೊಂದರ ಪರಿಣಾಮವು ಏನು ಎಂಬುದನ್ನು ನಿಖರವಾಗಿ ಹೇಳುತ್ತದೆ: "ಉಪಬಂಧದ (೧)ನೆಯ ಖಂಡದ ಅಡಿಯಲ್ಲಿ ಒಪ್ಪಂದವು ಏರ್ಪಟ್ಟರೆ, ಆ ಒಪ್ಪಂದದ ಕರಾರುಗಳಿಗೆ ಒಳಪಟ್ಟು, ಮಹಾಮಂಡಲಿಯ ಸರ್ಕಾರವು ಸೂಕ್ತ ಪ್ರಾಧಿಕಾರದ ಮೂಲಕ ತನ್ನ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ಅಧಿಕಾರವನ್ನು ಚಲಾಯಿಸುತ್ತದೆ". ಇದು ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಏರ್ಪಡಬಹುದಾದ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಈ ಸದನವು ಈಗಾಗಲೇ ಅಂಗೀಕರಿಸಿರುವ ಉಪಬಂಧಕ್ಕೆ ಹೆಚ್ಚು ಕಡಿಮೆ ಅನುಗುಣವಾಗಿಯೇ ಇದೆ. ಆದುದರಿಂದ ನಾನು ಈ ೮ಎ ಯಲ್ಲಿರುವ ಪ್ರಸ್ತಾವವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಕರ್ನಲ್ ಶ್ರೀ ಮಹಾರಾಜ್ ಹಿಮ್ಮತ್ ಸಿಂಗ್** (ಪಶ್ಚಿಮ ಭಾರತದ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ಈ ತಿದ್ದುಪಡಿಗೆ ಸಂಬಂಧಪಟ್ಟಂತೆ ನಮಗೆ ಸೂಚನೆಯು ದೊರೆತಿಲ್ಲ. ದಯವಿಟ್ಟು ನಮಗೆ ಇದನ್ನು ಪರಿಶೀಲಿಸಲು ಸೋಮವಾರದವರೆಗೆ ಕಾಲಾವಕಾಶವನ್ನು ನೀಡಿ ಮತ್ತು ಅಗತ್ಯವೆನಿಸಿದರೆ, ತಿದ್ದುಪಡಿಗಳ ಸೂಚನೆಯನ್ನು ನೀಡಿ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಯನ್ನು ಎಲ್ಲರಿಗೂ ವಿತರಿಸಲಾಗಿದೆ.

**ಕರ್ನಲ್ ಶ್ರೀ ಮಹಾರಾಜ್ ಹಿಮ್ಮತ್ ಸಿಂಗ್** : ಅದನ್ನು ನಮಗೆ ನೀಡಲಾಗಿದೆ. ಆದರೆ ಹಲವರಿಗೆ ಅದರ ಸೂಚನೆಯು ತಲಪಿಲ್ಲ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ನಿನ್ನೆಯ ಸಂಜೆ ೪ ಗಂಟೆಯ ವೇಳೆಗೆ ಸೂಚನೆಯು ನಮಗೆ ತಲಪಿತು.

**ಮಾನ್ಯ ಸಭಾಧ್ಯಕ್ಷರು** : ಸೂಚನೆಯನ್ನು ನಿನ್ನೆ ೪ ಗಂಟೆಗೆ ಕಳುಹಿಸಲಾಗಿತ್ತು. ಗೌರವಾನ್ವಿತ ಸದಸ್ಯರ ಸಲಹೆಯನ್ನು ಒಪ್ಪಿಕೊಂಡರೆ, ಈ ತಿದ್ದುಪಡಿಯನ್ನು ಪರಿಶೀಲಿಸಿ ಅದಕ್ಕೆ ತಿದ್ದುಪಡಿಗಳನ್ನು ಸಲ್ಲಿಸಲು ಅವಕಾಶಮಾಡಿಕೊಡಲು, ಈ ತಿದ್ದುಪಡಿಯನ್ನು ಸದ್ಯಕ್ಕೆ ಪಕ್ಕಕ್ಕೆ ಇಡಬೇಕು. ಸದಸ್ಯರಿಗೆ ತಿದ್ದುಪಡಿಗಳ ಸೂಚನೆಯನ್ನು ನೀಡಲು ಸಾಕಷ್ಟು ಕಾಲಾವಕಾಶನ್ನು ನಾವು ನೀಡಬೇಕಾದ್ದರಿಂದ ಈ ತಿದ್ದುಪಡಿಯನ್ನು ಮುಂದೂಡುವುದು ಅಪೇಕ್ಷಣೀಯವೆಂದು ನನ್ನ ಭಾವನೆ.

**ಗೌರವಾನ್ವಿತ ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಇದಕ್ಕೆ ನನ್ನ ಆಕ್ಷೇಪಣೆಯೇನೂ ಇಲ್ಲ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ತಿದ್ದುಪಡಿಯ ಸೂಚನೆಗಳನ್ನು ನೀಡಲು ಎಲ್ಲರಿಗೂ ಕಾಲಾವಕಾಶವಿರಬೇಕು.

**ಮಾನ್ಯ ಸಭಾಧ್ಯಕ್ಷರು** : ಮಾರನೆಯ ದಿನ ಪರಿಶೀಲನೆಗೆ ಬರುವ ವಿಷಯಗಳ ಮೇಲೆ ತಿದ್ದುಪಡಿಯ ಸೂಚನೆಗಳನ್ನು ನೀಡಲು ಒಂದು ದಿನದ ಅವಕಾಶವನ್ನು ಕೊಡಬೇಕೆಂದು ನಿನ್ನೆಯ ದಿನ ತೀರ್ಮಾನಿಸಿದ್ದೆವು. ತಿದ್ದುಪಡಿಯ ಮೇಲಿನ ತಿದ್ದುಪಡಿಗಳಿಗೆ ಸಮಯಾವಕಾಶವನ್ನು ನೀಡುತ್ತಾ ಹೋದರೆ, ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂಬುದು ತಿಳಿಯುತ್ತಿಲ್ಲ.

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ಅಂತಹ ಪ್ರಸಂಗಗಳಲ್ಲಿ, ಅವುಗಳಿಗೆ ತುರ್ತು ಆದ್ಯತೆಯನ್ನು ನೀಡಬೇಕೆಂದು ಭಾವಿಸಿದರೆ, ಸಭಾಧ್ಯಕ್ಷರು ವ್ಯವಹಾರದ ನಿಯಮಗಳನ್ನು ಅಮಾನತ್ತಿನಲ್ಲಿಟ್ಟು, ಸದಸ್ಯರಿಗೆ ಅವರ ತಿದ್ದುಪಡಿಗಳನ್ನು ಮಂಡಿಸಲು ಅವಕಾಶವನ್ನು ನೀಡಬೇಕು.

**ಮಾನ್ಯ ಸಭಾಧ್ಯಕ್ಷರು** : ನಾವು ಇದನ್ನು ಮುಂದೂಡುವುದು ಸೂಕ್ತವೆಂದು ನನಗೆ ಎನಿಸುತ್ತಿದೆ. ನಾವು ಇದನ್ನು ಮುಂದೆ ಕೈಗೆತ್ತಿಕೊಳ್ಳಬಹುದು. ಹಾಗೆಯೇ, ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ಹೊಸ ಸೇರ್ಪಡೆಯ ವಿಷಯವನ್ನೂ ನಾವು ಸದ್ಯಕ್ಕೆ ಮುಂದೂಡಬಹುದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ನನಗೆ ಇದರ ಬಗೆಗೆ ಆಕ್ಷೇಪಣೆಯೇನೂ ಇಲ್ಲ.

**ಶ್ರೀ ಟಿ. ಚನ್ನಯ್ಯ** (ಮೈಸೂರು ರಾಜ್ಯ) : ನನ್ನ ಹೆಸರಿನಲ್ಲಿ ಒಂದು ತಿದ್ದುಪಡಿಯು ಇದೆ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡದ ಉಳಿದ ಎಲ್ಲ ತಿದ್ದುಪಡಿಗಳ ಜೊತೆಯಲ್ಲಿ ಅದನ್ನೂ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

## ೯ನೆಯ ಖಂಡ

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ೯ನೆಯ ಖಂಡವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ:

"ಮಹಾಮಂಡಲಿಗೆ ಸೇರಿದ ರಾಜ್ಯವೊಂದು ತನ್ನ ವ್ಯಾಪ್ತಿಯಲ್ಲಿ ಬರುವ ಒಕ್ಕೂಟದ ವಿಷಯಗಳಲ್ಲಿ, ಮಹಾಮಂಡಲಿಯ ಪ್ರಾಧಿಕಾರವು ಬೇರೆಯ ಕ್ರಮದ ಅವಕಾಶವನ್ನು ಕಲ್ಪಿಸುವವರೆಗೆ, ತಾನೇ ಅಧಿಕಾರವನ್ನು ಚಲಾಯಿಸಬಹುದು."

ಪ್ರಸ್ತುತ, ಸಂಯುಕ್ತ ಹಾಗೂ ಘಟಕಗಳ ವಿಷಯಗಳು ಆಯಾ ಭಾರತೀಯ ರಾಜ್ಯದ ವ್ಯಾಪ್ತಿಯ ಒಳಗೇ ಬರುತ್ತಿವೆ. ಮಹಾಮಂಡಲಿಯು ಅಸ್ತಿತ್ವಕ್ಕೆ ಬಂದ ಮೇಲೆ, ಮತ್ತು ಕೆಲವು ವಿಷಯಗಳನ್ನು ಕೇಂದ್ರಕ್ಕೆ ವಹಿಸಿದ ಮೇಲೆ, ಪ್ರಸ್ತುತ ಆಯಾ ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಆ ವಿಷಯಗಳನ್ನು ಕುರಿತ

ಆಡಳಿತವು, ಕೇಂದ್ರದ ಸೂಕ್ತವಾದ ಪ್ರಾಧಿಕಾರವು ಬೇರೆಯ ರೀತಿಯಲ್ಲಿಯೇ ವ್ಯವಸ್ಥೆ ಕಲ್ಪಿಸುವವರೆಗೆ, ಸದರಿ ರಾಜ್ಯಗಳ ಕೈಯಲ್ಲಿಯೇ ಇರಬೇಕು. ಹಿಂದಿನ ಖಂಡದ ಸಂದರ್ಭದಲ್ಲಿ ನಾನು ಹೇಳಿದ ಹಾಗೆ, ಸಾಮಾನ್ಯ ತತ್ತ್ವವೆಂದರೆ, ಒಕ್ಕೂಟದ ಕಾರ್ಯನಿರ್ವಾಹಕ ಅಧಿಕಾರವು ಅದರ ಶಾಸಕಾಂಗದ ಅಧಿಕಾರದ ಜೊತೆಜೊತೆಯಲ್ಲಿಯೇ ಅಸ್ತಿತ್ವದಲ್ಲಿರುತ್ತದೆ. ಅದೇ ತತ್ತ್ವವನ್ನು ಇಲ್ಲಿ ಕೂಡ ಅನುಸರಿಸಲಾಗಿದೆ. ಇಲ್ಲಿ ಅಳವಡಿಸಿರುವ ಒಂದು ಹೆಚ್ಚಿನ ಅಂಶವೆಂದರೆ, ಮಹಾಮಂಡಲಿಯ ಪ್ರಾಧಿಕಾರವು ಬೇರೆಯ ವ್ಯವಸ್ಥೆಯನ್ನು ಮಾಡುವವರೆಗೆ, ಪ್ರಸ್ತುತ ರಾಜ್ಯಗಳು ಒಕ್ಕೂಟದ ವಿಷಯದಲ್ಲಿ ಹೊಂದಿರುವ ಆಡಳಿತದ ಅಧಿಕಾರವು ಆಯಾ ರಾಜ್ಯಗಳ ಕೈಯಲ್ಲಿಯೇ ಇರುತ್ತದೆ. ಒಕ್ಕೂಟದ ಸ್ಥಾಪನೆಯ ಅವಧಿಯಲ್ಲಿ ಉಂಟಾಗಬಹುದಾದ ತೆರವನ್ನು ತುಂಬುವುದು ಈ ವಿಧಾನವನ್ನು ಇಲ್ಲಿ ಅಳವಡಿಸುವುದರ ಹಿಂದಿರುವ ಉದ್ದೇಶ. ಮಾನ್ಯರೆ, ಇದಕ್ಕೆ ಕೆಲವು ತಿದ್ದುಪಡಿಗಳಿವೆ, ಆದರೆ ಅವುಗಳ ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ಅವುಗಳಲ್ಲಿ ಹಲವು ಭಾರತೀಯ ರಾಜ್ಯಗಳ ಮುಖ್ಯಮಂತ್ರಿಗಳು ನೀಡಿರುವ ಒಂದು ತಿದ್ದುಪಡಿ ಇದೆ. ಆ ತಿದ್ದುಪಡಿಯು ಪ್ರಸ್ತುತ ಇರುವ ಭಾರತ ಸರ್ಕಾರದ ಅಧಿನಿಯಮ ೧೨೫ನೆಯ ಪ್ರಕರಣದ ಪಡಿಯಚ್ಚಾಗಿದೆ. ಅದರ ಬದಲಿಗೆ ಎಂದು ನಾನು ತಿದ್ದುಪಡಿಯೊಂದಕ್ಕೆ ಸೂಚನೆಯನ್ನು ನೀಡಿರುವೆನಾದ್ದರಿಂದ, ಅದಕ್ಕೆ ತಿದ್ದುಪಡಿಯಾಗಿ ಸೂಚನೆಯನ್ನು ನೀಡಿರುವ ಮುಖ್ಯಮಂತ್ರಿಗಳು ಅದನ್ನು ಹಿಂತೆಗೆದುಕೊಳ್ಳುವುದಕ್ಕೆ ಒಪ್ಪಿದರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಸರ್ ಗೋಪಾಲಸ್ವಾಮಿ, ಮುಖ್ಯಮಂತ್ರಿಗಳು ಸೂಚನೆಯನ್ನು ನೀಡಿರುವ ತಿದ್ದುಪಡಿಯು ಹೊಸದಾಗಿ ಸೇರಿಸಬೇಕೆಂದಿರುವ ೯ಎ ಖಂಡಕ್ಕೆಂದು ನಾನು ತಿಳಿದಿದ್ದೇನೆ. ಅದು ಇರುವುದರ ಬದಲಿಗೆ ಬೇರೆಯದನ್ನು ಸೇರಿಸುವುದಕ್ಕಾಗಿ ಅಲ್ಲ. ತಾವು ಹೇಳುತ್ತಿರುವದು ಈ ಖಂಡವನ್ನು ಕುರಿತೇ ಅಲ್ಲವೇ?

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ನಾನು ನನ್ನ ತಪ್ಪನ್ನು ತಿದ್ದುಕೊಂಡಿದ್ದೇನೆ. ತಾವು ಹೇಳಿದುದು ಸರಿಯಾಗಿಯೇ ಇದೆ. ಆದರೆ, ಮುಖ್ಯಮಂತ್ರಿಗಳ ತಿದ್ದುಪಡಿಯನ್ನು ಮಂಡಿಸದೇ ಹೋದರೆ, ನಾನು ೯ನೆಯ ಖಂಡಕ್ಕೆ ಒಂದು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ, ಅದು ಅವರಿಗೆ ಸ್ವೀಕಾರಾರ್ಹವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಬಿ.ಎಲ್. ಮಿಟ್ಟರ್** (ಬರೋಡ ರಾಜ್ಯ) : ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಲು ಉದ್ದೇಶಿಸಿರುವುದರಿಂದ ನಾವು ನಮ್ಮ ಹೆಸರಿನಲ್ಲಿರುವ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ೯ನೆಯ ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸಿಕೊಳ್ಳಬೇಕೆಂಬ ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ:

"ಅಗತ್ಯವೆಂದು ಪರಿಗಣಿಸಲಾಗುವ ಪ್ರಸಂಗಗಳಲ್ಲಿ."

ಈ ಪದಗಳಿಗೆ ವಿವರಣೆಯ ಅಗತ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನಾವೀಗ ಉಳಿದ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳೋಣ. ಶ್ರೀ ಚಂದ್ರಶೇಖರಯ್ಯ ಅವರು.

**ಶ್ರೀ ಚಂದ್ರಶೇಖರಯ್ಯ** : ಮಾನ್ಯ ಸಭಾಧ್ಯಕ್ಷರೆ, ೯ನೆಯ ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು.

"ಮಹಾಮಂಡಲಿಗೆ ಸೇರಿದ ರಾಜ್ಯವೊಂದರ ಕಾರ್ಯನಿರ್ವಾಹಕ ಪ್ರಾಧಿಕಾರವು ತನ್ನ ರಾಜ್ಯದ ವ್ಯಾಪ್ತಿಯಲ್ಲಿ ಮಹಾಮಂಡಲಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣಾಧಿಕಾರವನ್ನು, ಮಹಾಮಂಡಲಿತ ಅಧ್ಯಕ್ಷರ ತನಿಖೆ

ಮತ್ತು ಸೂಚನೆಗಳಿಗೆ ಒಳಪಟ್ಟು, ಮುಂದುವರಿಸಿಕೊಂಡು ಹೋಗಲು ಅವಕಾಶವನ್ನು ಮಾಡಿಕೊಡತಕ್ಕದ್ದು."

ಮಾನ್ಯರೆ, ಖಂಡವು ಈಗಿರುವ ಹಾಗೆ, ಮಹಾಮಂಡಲಿಯ ಬೇರೆಯ ವ್ಯವಸ್ಥೆಯನ್ನು ಮಾಡುವವರೆಗೆ, ಮಹಾಮಂಡಲಿಗೆ ಸೇರುವ ರಾಜ್ಯಗಳು ಒಕ್ಕೂಟದ ವಿಷಯಗಳಲ್ಲಿ ತಮ್ಮ ನಿರ್ವಹಣಾಧಿಕಾರವನ್ನು ಮುಂದುವರಿಸಿಕೊಂಡು ಹೋಗುತ್ತವೆ. ಈಗ, ಈ ನಿರ್ವಹಣೆಯು ಮಹಾಮಂಡಲಿಯ ತನಿಖೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿಲ್ಲ. ಒಕ್ಕೂಟದ ವಿಷಯಗಳಿಗೆ ಸಂಬಂಧಿಸಿದ ಅನಿಯಂತ್ರಿತವಾದ ಅಂತಹ ನಿರ್ವಹಣಾಧಿಕಾರವು ಸರಿಯಾದುದಲ್ಲ ಮತ್ತು ಅನುಕೂಲಕರವೂ ಅಲ್ಲ. ಆದ್ದರಿಂದ, ಈ ಅಧಿಕಾರವು ಮಹಾಮಂಡಲಿಯ ಪ್ರಾಧಿಕಾರದ ತನಿಖೆ ಮತ್ತು ನಿರ್ದೇಶನಗಳಿಗೆ ಅನುಸಾರವಾಗಿ ಚಲಾಯಿಸಲ್ಪಡಬೇಕು ಎಂದು ಸೂಚಿಸುವುದಕ್ಕಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ. ಇದು ತಿದ್ದುಪಡಿಯ ಒಂದು ಅಂಶ.

ಇನ್ನೊಂದು ಅಂಶವೆಂದರೆ, ಮಹಾಮಂಡಲಿಯು ಬೇರೆಯ ವ್ಯವಸ್ಥೆಯನ್ನು ಮಾಡುವವರೆಗೆ ಮಹಾಮಂಡಲಿಯ ವಿಷಯಗಳನ್ನು ನಿರ್ವಹಿಸುವುದಕ್ಕೆ ರಾಜ್ಯಗಳನ್ನು ಬಳಸಿಕೊಳ್ಳಲು ಇಲ್ಲಿ ಉದ್ದೇಶಿಸಲಾಗಿದೆ. ರಾಜ್ಯ ಸರ್ಕಾರಗಳನ್ನು ತಾತ್ಕಾಲಿಕವಾಗಿ ಈ ರೀತಿ ಉಪಯೋಗಿಸಿಕೊಳ್ಳಬಹುದಾದರೆ, ಶಾಶ್ವತವಾಗಿ ಅವುಗಳನ್ನು ಈ ವಿಷಯದಲ್ಲಿ ಏಕೆ ಉಪಯೋಗಿಸಿಕೊಳ್ಳಬಾರದು ಎಂಬುದು ನನ್ನ ಪ್ರಶ್ನೆ. ರಾಜ್ಯಗಳ ನಿರ್ವಹಣೆಯನ್ನು ಮಹಾಮಂಡಲಿಯು ನಿಯಂತ್ರಿಸುವುದಾದರೆ ಮತ್ತು ಅದಕ್ಕೆ ನಿರ್ದೇಶನವನ್ನು ನೀಡುವುದಾದರೆ, ರಾಜ್ಯಗಳ ನಿರ್ವಹಣೆಯಲ್ಲಿ ಕಂಡುಬರುವ ಲೋಪದೋಷಗಳನ್ನು, ಕೂಡಲೆ ರಾಜ್ಯಗಳ ಗಮನಕ್ಕೆ ತಂದು ಸರಿಪಡಿಸಬಹುದು. ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅವುಗಳ ಬಳಿ ಇರುವ ಮಹಾಮಂಡಲಿಯ ವಿಷಯಗಳ ಸಂಖ್ಯೆ ಬಹು ಕಡಿಮೆಯಾಗಿಯೇ ಇರುತ್ತದೆ ಮತ್ತು ರಾಜ್ಯಗಳು ತಮ್ಮ ಸಾಮರ್ಥ್ಯವನ್ನು ಮೀರಿದ ಹೊಣೆಗಾರಿಕೆಯನ್ನು ತಮ್ಮ ತಲೆಯ ಮೇಲಕ್ಕೆ ಎಳೆದುಕೊಳ್ಳುವುದಿಲ್ಲ. ಅಲ್ಲದೆ, ಮೈಸೂರು ಮತ್ತು ಬರೋಡಾಗಳಂತಹ ದೊಡ್ಡ ರಾಜ್ಯಗಳು ಸುವ್ಯವಸ್ಥಿತವಾದ ಆಡಳಿತವನ್ನು ಹೊಂದಿವೆ ಮತ್ತು ಈ ರಾಜ್ಯಗಳ ಆಡಳಿತದ ಮಟ್ಟಕ್ಕೆ ಬೇರೆ ಯಾವುದೇ ವ್ಯವಸ್ಥೆಯೂ ಬರುವುದಿಲ್ಲವೆಂಬುದರ ಬಗೆಗೆ ನನಗೆ ಖಾತ್ರಿಯಿದೆ.

ಆದರೆ, ಈಗ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ವಿಭಿನ್ನ ದೃಷ್ಟಿಕೋನ ಹೊಂದಿರುವವರ ನಡುವೆ ಸಮನ್ವಯವನ್ನು ತರಲು 'ಅಗತ್ಯವೆಂದು ಪರಿಗಣಿಸಲಾಗುವ ಪ್ರಸಂಗಗಳಲ್ಲಿ' ಎಂಬ ಪದಗಳನ್ನು ೯ನೆಯ ಖಂಡದ ಕೊನೆಯಲ್ಲಿ ಸೇರಿಸಬೇಕೆಂಬ ಪ್ರಸ್ತಾವವನ್ನು ಇಟ್ಟಿದ್ದಾರೆ. ಈ ಅಗತ್ಯವನ್ನೂ ಎಲ್ಲ ಪ್ರಸಂಗಗಳಲ್ಲಿಯೂ ಬಳಸಿಕೊಳ್ಳಬಹುದಾದುದರಿಂದ, ಅವರ ತಿದ್ದುಪಡಿಯು ಪರಿಸ್ಥಿತಿಯಲ್ಲಿ ಹೆಚ್ಚೇನನ್ನೂ ಮಾಡುವುದಿಲ್ಲ.

ನನ್ನ ಮಾತನ್ನು ಮುಗಿಸುವ ಮೊದಲು, ಮೊದಲನೆಯದಾಗಿ, ರಾಜ್ಯದ ವ್ಯಾಪ್ತಿಯ ಒಳಗೆ ಮಹಾಮಂಡಲಿಯ ಆಡಳಿತದ ತನಿಖೆಗೆ ಮತ್ತು ನಿಯಂತ್ರಣಕ್ಕೆ ಅವಕಾಶವನ್ನು ಕಲ್ಪಿಸಬೇಕು, ಮತ್ತು ಎರಡನೆಯದಾಗಿ, ರಾಜ್ಯದ ಸರ್ಕಾರವೇ ಮಹಾಮಂಡಲಿಯ ವಿಷಯಗಳ ನಿರ್ವಹಣೆಯನ್ನು ಶಾಶ್ವತವಾಗಿ ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತೇನೆ. ನಾನು ಮಂಡಿಸಿರುವ ತಿದ್ದುಪಡಿಯನ್ನು ಸದನವು ಪರಿಶೀಲಿಸಬೇಕು ಎಂದು ನಾನು ಪ್ರಾರ್ಥಿಸುತ್ತೇನೆ.

**ಶ್ರೀ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ** (ಸಿಕ್ಕಿಮ್ ಮತ್ತು ಕೂಚ್ ಬಿಹಾರ್ ಒಕ್ಕೂಟ) : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿ ಇರುವ ತಿದ್ದುಪಡಿಯು ಬಹಳ ಸಣ್ಣ ತಿದ್ದುಪಡಿಯಾಗಿದೆ. ಅದರಲ್ಲಿ ೯ನೆಯ ಖಂಡದಲ್ಲಿ ಇರುವ 'ಮಹಾಮಂಡಲಿಯ ಸೂಕ್ತ ಪ್ರಾಧಿಕಾರದಿಂದ' ಎಂಬ ಪದಗಳ ಬದಲಿಗೆ 'ಒಕ್ಕೂಟದ ಒಂದು ಕಾನೂನಿನ ಪ್ರಕಾರ' ಎಂಬ ಪದಗಳನ್ನು ಬದಲಿಸಬೇಕೆಂದು ಹೇಳಲಾಗಿದೆ. ಇದನ್ನು ಒಪ್ಪಿಕೊಂಡರೆ, ಖಂಡದ ಪಾಠವು ಹೀಗಿರುತ್ತದೆ:

"ಈ ಸಂವಿಧಾನದಲ್ಲಿ ಏನನ್ನೇ ಹೇಳಿದ್ದರೂ, ಮಹಾಮಂಡಲಿಗೆ ಸೇರಿದ ರಾಜ್ಯವೊಂದರ ಕಾರ್ಯನಿರ್ವಾಹಕ ಪ್ರಾಧಿಕಾರವು ತನ್ನ ರಾಜ್ಯದಲ್ಲಿ ಮಹಾಮಂಡಳಿಯ ಸಂಸತ್ತಿಗೆ ಸೇರಿದ ವಿಷಯಗಳಲ್ಲಿ, ಮಹಾಮಂಡಲಿಯ ಒಂದು ಕಾನೂನಿನ ಪ್ರಕಾರ ಮಹಾಮಂಡಲಿಯ ಅಧಿಕಾರಿಯ ಕಾರ್ಯನಿರ್ವಾಹಕ ಅಧಿಕಾರವು ರಾಜ್ಯದ ಕಾರ್ಯನಿರ್ವಾಹಕ ಅಧಿಕಾರದ ಬದಲಿಗೆ ಜಾರಿಗೆ ಬರುವವರೆಗೂ, ಕಾನೂನುಗಳನ್ನು ಮಾಡುವುದನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು."

ಮಾನ್ಯರೆ, ಇಲ್ಲಿ ಬಳಸಿರುವ 'ಅಧಿಕಾರಿ' ಎಂಬ ಪದದ ಅರ್ಥವು ಸ್ಪಷ್ಟವಾಗಿಲ್ಲ. ಅದು ಮಹಾಮಂಡಲಿಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂಬ ಅರ್ಥವನ್ನೂ ಕೊಡಬಹುದು. ನಾನು ಈ ಸದನವು ಅಂಗೀಕರಿಸಬೇಕು ಎಂದು ಬಯಸುವುದು ಏನೆಂದರೆ, ಒಂದು ರಾಜ್ಯದಲ್ಲಿ ಮಹಾಮಂಡಲಿಯ ಕಾರ್ಯನಿರ್ವಾಹಕ ಅಧಿಕಾರವು ಚಲಾಯಿಸಲ್ಪಡಬೇಕಾದರೆ, ಅದು ಒಕ್ಕೂಟದ ಒಂದು ಕಾನೂನಿನ ಅಡಿಯಲ್ಲಿ ಇರಬೇಕೇ ಹೊರತು ಕೇವಲ 'ಮಹಾಮಂಡಲಿಯ ಅಧಿಕಾರಿಯ' ಆದೇಶದಂತೆ ಅಲ್ಲ. ಬಹುಶಃ, ಮಾನ್ಯರೆ, ಈ ತಿದ್ದುಪಡಿಯು ಸಂಪೂರ್ಣವಾಗಿ ಅನಗತ್ಯವಾಗಿದೆ, ಏಕೆಂದರೆ, ಈ ಖಂಡದ ಕರಡನ್ನು ಸಿದ್ಧಪಡಿಸಿದವರು ಈ ಉಕ್ತಿಯನ್ನು ಸ್ಪಷ್ಟವಾಗಿ ನೀಡಲು ಉದ್ದೇಶಿಸಿದ್ದಿರಬಹುದು. ಇದರ ಬಗೆಗೆ ನನಗೆ ನಿಖರವಾಗಿ ತಿಳಿದಿಲ್ಲ. ಏನೇ ಆದರೂ, ಕರಡು ರಚನಾ ಸಮಿತಿಯವರು ಈ ಅಂಶವನ್ನು ಸರಿಯಾದ ಸಮಯದಲ್ಲಿ ತಮ್ಮ ಗಮನಕ್ಕೆ ತಂದುಕೊಂಡರೆ, ನನ್ನ ಉದ್ದೇಶವು ನೆರವೇರಿದಂತೆ.

(ಸರ್ವಶ್ರೀ ಕಿಶೋರಿಮೋಹನ್ ತ್ರಿಪಾಠಿ, ಬಿ.ಎಮ್. ಗುಪ್ತ, ಬಿಸ್ವನಾಥ್ ದಾಸ್, ಎಚ್.ಆರ್. ಗುರುವ್ ರೆಡ್ಡಿ, ಜೈನಾರಾಯಣ್ ವ್ಯಾಸ್, ಎಸ್.ವಿ. ಕೃಷ್ಣಮೂರ್ತಿ ರಾವ್ ಮತ್ತು ಕೆ.ಚೆಂಗಲರಾಯ ರೆಡ್ಡಿ ಅವರು ೨೦೪ ರಿಂದ ೨೧೦ರ ಕ್ರಮಾಂಕದವರೆಗಿನ ತಮ್ಮ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು** : ಇಷ್ಟು ತಿದ್ದುಪಡಿಗಳಿಗೆ ಮಾತ್ರ ನನಗೆ ಸೂಚನೆಗಳು ಬಂದಿದ್ದವು. ಈಗ ಖಂಡ ಹಾಗೂ ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ. ಈ ಖಂಡ ಅಥವಾ ತಿದ್ದುಪಡಿಗಳ ಮೇಲೆ ಸದಸ್ಯರಲ್ಲಿ ಯಾರಾದರೂ ಮಾತನಾಡಬಯಸುತ್ತಾರೆಯೇ?

**ಶ್ರೀ ಮಹಾವೀರ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯರೆ, ಸಂವಿಧಾನದ ಈ ಭಾಗವು ಬಹಳ ಪ್ರಮುಖವಾದದ್ದು, ಏಕೆಂದರೆ, ಭಾರತದಲ್ಲಿನ ಜನರಲ್ಲಿ ಬಹುಸಂಖ್ಯೆಯವರು ರಾಜ್ಯಗಳಲ್ಲಿದ್ದಾರೆ. ಪ್ರಸ್ತುತ, ಅವರಿಗೆ ಆಂತರಿಕ ಆಡಳಿತದ ಸಾಕಷ್ಟು ಸೌಲಭ್ಯಗಳು ದೊರಕಿವೆ. ಆದರೆ ಇದರ ಹೊರತಾಗಿ, ಪ್ರತಿ ರಾಜ್ಯದಲ್ಲಿಯೂ ಪರಮಾಧಿಕಾರವನ್ನು ಹೊಂದಿರುವ ರೆಸಿಡೆಂಟ್ ಅಧಿಕಾರಿ ಇದ್ದಾರೆ. ರಾಜ್ಯದ ಆಡಳಿತದಲ್ಲಿ ಅವರಿಗೆ ಪ್ರವೇಶವಿದ್ದು, ಅವರ ಮಾತಿಗೆ ಬೆಲೆ ಕೊಡಬೇಕಾಗಿದೆ ಮತ್ತು ಅಲ್ಲಿನ ಆಡಳಿತಗಾರರ ಮೇಲೆ ತಮ್ಮ ನಿಯಂತ್ರಣವನ್ನು ಈ ಅಧಿಕಾರಿ ಹೊಂದಿದ್ದಾರೆ. ಹಲವು ಬಾರಿ ಅವರು ಜನತೆಯ ಹಕ್ಕನ್ನು ಸಂರಕ್ಷಿಸಿದ್ದಾರೆ. ಈ ಅಧಿಕಾರಿಯ ಅಧಿಕಾರದ ಕಾಲಾವಧಿಯನ್ನು ಕೊನೆಗಾಣಿಸಿದ ಮೇಲೆ, ಅಲ್ಲಿನ ಶಾಸನಸಭೆಯು ಜನಗಳ ಹಕ್ಕನ್ನು ರಕ್ಷಿಸಲು ಯಾವುದೇ ಮಧ್ಯಮ ಮಾರ್ಗದ ವ್ಯವಸ್ಥೆಯನ್ನು ಮಾಡದೆ ಇದ್ದರೆ, ನಮ್ಮ ಸಂವಿಧಾನ ರಚನೆಯ ಕಾರ್ಯವು ಯಶಸ್ವಿಯಾಗುವುದಿಲ್ಲ. ರಾಜ್ಯಗಳು ಮತ್ತು ಅಲ್ಲಿನ ಜನತೆ ಒಕ್ಕೂಟವನ್ನು ಸೇರಿದ ಮೇಲೆ, ಅಲ್ಲಿನ ಜನತೆಯ ಯೋಗಕ್ಷೇಮವನ್ನು ಹಾಗೂ ಅವರ ರಕ್ಷಣೆಯನ್ನು ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರುತ್ತದೆ. ರಾಜ್ಯಗಳ ಜನತೆ, ಜನತೆಯ ಹಕ್ಕುಗಳು ಸಂಸತ್ತಿನ ಮುಂದೆ ಬಂದಾಗ ಅದು ಆಡಳಿತಗಾರರ ಸಹಕಾರವನ್ನು ಪಡೆಯುವ ಸಲುವಾಗಿ ಜನತೆಯ ಹಿತವನ್ನು ನಿರ್ಲಕ್ಷಿಸಿತು ಎಂದು ದೂರಬಾರದು ಎನ್ನುವುದಕ್ಕಾಗಿ ನಾನು ಇಲ್ಲಿ ತಮ್ಮ ಸಮಯವನ್ನು ಸ್ವಲ್ಪ ತೆಗೆದುಕೊಳ್ಳುತ್ತಿದ್ದೇನೆ. ಈಗ ರೂಪಿಸುತ್ತಿರುವ ಎಲ್ಲ ನಿಯಮಗಳೂ ಮತ್ತು ಉಪಬಂಧಗಳೂ ತಮ್ಮ ಅಂತಿಮ ಸ್ವರೂಪದಲ್ಲಿ ಈ ಸದನದ ಮುಂದೆ ಬರುವುದರಿಂದ ತಿದ್ದುಪಡಿಗಳನ್ನು ಮಂಡಿಸುವ ಮೂಲಕ ನಾನು ಸದನದ ಕಾರ್ಯಕ್ರಮದಲ್ಲಿ

ವಿಳಂಬವನ್ನುಂಟುಮಾಡುವುದಿಲ್ಲ. ಅದನ್ನು ಪರಿಶೀಲಿಸುವ ಮತ್ತು ಬದಲಾಯಿಸುವ ಹಕ್ಕು ಸದನಕ್ಕೆ ಇದೆ. ನಾನು ಹೇಳಬೇಕೆಂದಿದ್ದುದು ಇದು: ಪ್ರಸ್ತುತ ರಾಜ್ಯಗಳಲ್ಲಿ ಇರುವ ರೆಸಿಡೆಂಟರುಗಳು ಆಡಳಿತಗಾರರ ಅಧಿಕಾರ ಚಲಾವಣೆಯ ಮೇಲೆ ನಿಯಂತ್ರಣವನ್ನು ಹೊಂದಿದ್ದಾರೆ. ರೆಸಿಡೆಂಟರುಗಳನ್ನು ತೆಗೆದುಹಾಕಿದರೆ, ಅಲ್ಲಿ ನಿಯಂತ್ರಕರು ಯಾರೂ ಇರುವುದಿಲ್ಲ. ಈ ಆಡಳಿತಗಾರರ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳಲು ಯಾವ ವ್ಯವಸ್ಥೆಯನ್ನು ಯೋಜಿಸಿದೆ ಎಂಬುದನ್ನು ಸ್ಪಷ್ಟವಾಗಿ ಸಂಧಾನಸಮಿತಿಯು ಈಗ ಅಥವಾ ಅನಂತರ ಸೂಕ್ತ ಸಮಯದಲ್ಲಿ ಸದನದ ಮುಂದೆ ಪ್ರಸ್ತುತಪಡಿಸಬೇಕು. ಈಗಿರುವ ವ್ಯವಸ್ಥೆಯಲ್ಲಿ, ರಾಜ್ಯಗಳ ಆಡಳಿತಗಾರರು ಒಕ್ಕೂಟಕ್ಕೆ ಇರುವ ಎಲ್ಲ ಅಧಿಕಾರಗಳನ್ನೂ ಹಾಗೂ ಒಕ್ಕೂಟಕ್ಕೆ ಇರದಿರುವ ಕೆಲವು ಅಧಿಕಾರಗಳನ್ನೂ ಹೊಂದಿದ್ದಾರೆ. ಇದರ ಪರಿಣಾಮವೆಂದರೆ, ನಿರಂಕುಶ ಮನೋಭಾವದ ಮತ್ತು ದಬ್ಬಾಳಿಕೆಗಾರ ರಾಜ್ಯಗಳು ಹೆಚ್ಚು ಬಲಶಾಲಿಗಳಾಗುತ್ತವೆ ಮತ್ತು ಅವುಗಳ ಮೇಲೆ ನಿಯಂತ್ರಣವೇ ಇರುವುದಿಲ್ಲ. ಹಲವಾರು ರಾಜ್ಯಗಳಲ್ಲಿ ಶಾಸನಸಭೆಗಳೇ ಇಲ್ಲ. ಈಗಿನ ಪರಿಸ್ಥಿತಿಯಲ್ಲಿ, ವಿಶಾಲ್ಯವಾದ ವಿವೇಚನೆಯ ಅಧಿಕಾರವನ್ನು ರಾಜ್ಯಗಳ ಆಡಳಿತಗಾರರ ಬಳಿಯೇ ಇರುವಂತೆ ಮಾಡಿದರೆ, ಅವರು ಒಕ್ಕೂಟಕ್ಕೆ ಸೇರಿದರೆ, ಅದು ಅವರಿಗೆ ಅನುಕೂಲಕರವಾಗಿಯೇ ಪರಿಣಮಿಸುತ್ತದೆ. ಅವರು ಒಕ್ಕೂಟಕ್ಕೆ ಸೇರುವುದಕ್ಕೆ ಇದು ನಾವು ಅವರಿಗೆ ತೆರಬೇಕಾಗುವ ಬೆಲೆಯಾಗುತ್ತದೆ. ಸಂಪೂರ್ಣ ಅಧಿಕಾರವನ್ನು ರಾಜ್ಯಗಳ ಆಡಳಿತಗಾರರಿಗೆ ನೀಡಿದರೆ, ಅವರು ಒಕ್ಕೂಟಕ್ಕೆ ಸೇರಿದಾಗ, ಅದೇ ಆಡಳಿತಗಾರರು ಲಾಭವನ್ನು ಪಡೆದುಕೊಳ್ಳುತ್ತಾರೆ, ಏಕೆಂದರೆ, ರಾಜ್ಯಗಳ ಪ್ರಜೆಗಳು ಇಲ್ಲಿಯವರೆಗೆ ಕಾಂಗ್ರೆಸ್ ಮತ್ತು ಅಂತಹ ಇತರ ಸಂಸ್ಥೆಗಳ ವಿರುದ್ಧ ಹೊಡೆದಾಡುತ್ತಿದ್ದರು ಮತ್ತು ಈಗ ಅವುಗಳಿಂದ ಯಾವುದೇ ಸಹಾಯವನ್ನೂ ಅವರು ಪಡೆಯಲು ಸಾಧ್ಯವಿಲ್ಲ. ತಮ್ಮ ಅಧಿಕಾರವನ್ನು ರಾಜ್ಯಗಳ ಆಡಳಿತಗಾರರು ಮನಸೋಯಿಚ್ಛೆ ಬಳಸಿಕೊಳ್ಳುತ್ತಾರೆ. ಈ ಆಡಳಿತಗಾರರು ಇಂದು ಹೊಂದಿರುವ ಅಧಿಕಾರಗಳನ್ನು ಅವರಿಗೇ ಬಿಟ್ಟುಕೊಡುವುದು ಅಥವಾ ಒಕ್ಕೂಟಕ್ಕೆ ಇರುವ ಅಧಿಕಾರಗಳನ್ನು ಅವರಿಗೆ ನೀಡುವುದು ಯುಕ್ತವೇ. ಆದರೆ, ಅವರು ತಮ್ಮ ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳದಿರುವಂತೆ ಮಾಡಲು ಆ ಅಧಿಕಾರಗಳ ಮೇಲೆ ಕೆಲವು ನಿಯಂತ್ರಕ ಉಪಬಂಧಗಳನ್ನು ರೂಪಿಸಬೇಕು. ರಾಜ್ಯದ ಆಡಳಿತಗಾರರ ಅಧಿಕಾರದ ಮೇಲೆ ನಿಯಂತ್ರಣವನ್ನು ಹೊಂದಿರಲು ನಿಯಂತ್ರಕ ಉಪಬಂಧಗಳನ್ನು ೧೯೩೫ರ ಭಾರತ ಸರ್ಕಾರದ ಅಧಿನಿಯಮಗಳಲ್ಲಿ ಅಳವಡಿಸಬೇಕೆಂಬ ಸಲಹೆ ಬಂದಿತ್ತು. ರಾಜ್ಯಗಳ ಯಾವುದೇ ಕಾನೂನು ಒಕ್ಕೂಟದ ಕಾನೂನಿಗೆ ವಿರುದ್ಧವಾಗಿದ್ದರೆ ಅಥವಾ ಅನುಗುಣವಾಗಿಲ್ಲದಿದ್ದರೆ ಅಂತಹ ಕಾನೂನು ಅಸಿಂಧುವಾಗುತ್ತದೆ ಮತ್ತು ಆ ಸಂದರ್ಭದಲ್ಲಿ, ಒಕ್ಕೂಟದ ಕಾನೂನು ಆ ರಾಜ್ಯದಲ್ಲಿ ಜಾರಿಗೆ ಬರುತ್ತದೆ. ಇಲ್ಲಿ ಎದುರಾಗುವ ಸಮಸ್ಯೆಯೆಂದರೆ ಈಗ ಎರಡು ಆಧಿಪತ್ಯಗಳು ಇವೆ – ಒಂದು ಭಾರತ, ಮತ್ತೊಂದು ಪಾಕಿಸ್ತಾನ. ಇವೆರಡರಲ್ಲಿ ಪ್ರತಿಯೊಂದು ಆಧಿಪತ್ಯವೂ, ಇನ್ನೊಂದಕ್ಕಿಂತ ಹೆಚ್ಚು ರಾಜ್ಯಗಳನ್ನು ತನ್ನತ್ತ ಸೆಳೆಯಲು ಪ್ರಯತ್ನಿಸುತ್ತದೆ. ಈ ಹಗೆತನದ ಕಾರಣದಿಂದಾಗಿ, ರಾಜರು ತಮ್ಮ ಸಹಕಾರದ ಬೆಲೆಯನ್ನು ಹೆಚ್ಚಿಸುತ್ತಿದ್ದಾರೆ. ರಾಜ್ಯಗಳನ್ನು ನಮ್ಮತ್ತ ಸೆಳೆಯಲು ಅವರಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ನೀಡುವುದು ಅಪೇಕ್ಷಣೀಯವಲ್ಲವೆಂಬುದು ನನ್ನ ಭಾವನೆ. ಒಕ್ಕೂಟಕ್ಕೆ ಸೇರುವ ಸಂದರ್ಭದಲ್ಲಿ ಆ ಆಡಳಿತಗಾರರು ತಮ್ಮ ಯಾವ ಅಧಿಕಾರವನ್ನೂ ಬಿಟ್ಟುಕೊಡಲು ಸಿದ್ಧರಿಲ್ಲ. ಒಕ್ಕೂಟಕ್ಕೆ ಸೇರಿಕೊಳ್ಳುವುದರಿಂದ ಮಿಲಿಟರಿ ರಕ್ಷಣೆಯೂ ಸೇರಿದಂತೆ ಹಲವು ಲಾಭಗಳು ಅವರವಾಗುತ್ತವೆ, ಆದರೆ ಅದರಿಂದ ನಮಗಾಗುವ ಲಾಭವೇನು? ನಮ್ಮ ಕುಟುಂಬದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುತ್ತೇವೆ ಅಷ್ಟೆ. ವಿಶಾಲವಾದ ಒಕ್ಕೂಟದಿಂದ ಅವರು ಅಸಂಖ್ಯಾತ ಲಾಭಗಳನ್ನು ಪಡೆಯುತ್ತಾರೆ, ಆದರೆ, ಈ ಸವಲತ್ತುಗಳಿಗೆ ಪ್ರತಿಯಾಗಿ ಅವರು ತಮ್ಮ ಹಕ್ಕುಗಳಲ್ಲಿ ಎಷ್ಟನ್ನು ನಮಗೆ ಬಿಟ್ಟುಕೊಡುತ್ತಾರೆ? ಇದರ ಎಲ್ಲ ವಿವರಗಳೂ ನಮಗೆ ದೊರೆಯಬೇಕು. ನಮ್ಮ ಸಂಧಾನಸಮಿತಿ ಹಾಗೂ ರಾಜ್ಯಗಳ ನಡುವೆ ನಡೆಯುವ ಸಂಧಾನದ ಎಲ್ಲ ವಿವರಗಳೂ ಈ ಸದನಕ್ಕೆ ದೊರೆಯಬೇಕು.

ಅದಾದ ಮೇಲೆ ಮಾತ್ರ, ತಮ್ಮ ಎಷ್ಟು ಅಧಿಕಾರವನ್ನು ರಾಜ್ಯದ ಆಡಳಿತಗಾರರು ತಮ್ಮ ಬಳಿ ಉಳಿಸಿಕೊಳ್ಳಬಹುದು ಮತ್ತು ಅವರ ಮೇಲೆ ಒಕ್ಕೂಟದ ಸರ್ಕಾರವು ಯಾವ ರೀತಿಯ ನಿಯಂತ್ರಣವನ್ನು ಹೊಂದಿರಬೇಕು ಎಂಬುದನ್ನು ನಾವು ತೀರ್ಮಾನಿಸಬಹುದು. ಈ ಖಂಡವು, ಈಗ ಅದಿರುವ ಸ್ಥಿತಿಯಲ್ಲಿ, ರಾಜ್ಯಗಳಿಗೆ ಅಪಾರವಾದ ಅಧಿಕಾರಗಳನ್ನು ನೀಡುತ್ತಿದೆ ಆದರೆ, ಅವುಗಳ ಮೇಲೆ ಒಕ್ಕೂಟವು ಯಾವ ರೀತಿಯ ಅಧಿಕಾರವನ್ನು ಹೊಂದಿರುತ್ತದೆ ಎಂಬುದನ್ನು ಹೇಳುವುದಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸುವುದಕ್ಕೆ ನಾನು ಯಾವ ರೀತಿಯ ತಡೆಯನ್ನೂ ಒಡ್ಡುವುದಿಲ್ಲ, ಆದರೆ, ಯಾರಾದರೂ ಸದಸ್ಯರು ಈ ವಿಷಯವನ್ನು ಕುರಿತು ಮಾತನಾಡಿದರೆ, ಅವರು ಆವಶ್ಯಕವಾಗಿ ಈ ವಿಷಯಕ್ಕೆ ಸಮ್ಮತಿಸಬೇಕು ಅಥವಾ ಅದನ್ನು ವಿರೋಧಿಸಬೇಕು ಎಂಬುದು ಕಡ್ಡಾಯವಾಗಿರಬಾರದು ಮತ್ತು ಇದನ್ನು ಸದನದ ಸಂಪ್ರದಾಯವನ್ನಾಗಿಸಬೇಕು ಎಂದು ನಾನು ಹೇಳುತ್ತೇನೆ. ಯಾವುದಾದರೂ ಪ್ರಮುಖವಾದ ವಿಷಯವು ಸದನದಲ್ಲಿ ಚರ್ಚೆಯಾಗುತ್ತಿರುವಾಗ, ಸದಸ್ಯರಿಗೆ ಆ ವಿಷಯವನ್ನು ಬೆಂಬಲಿಸದೆ ಅಥವಾ ವಿರೋಧಿಸದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಇರಬೇಕು ಮತ್ತು ಅಂತಹ ಸದಸ್ಯರ ಅಭಿಪ್ರಾಯವು ದಾಖಲೆಯಲ್ಲಿ ಸೇರಬೇಕು. ನಾನು ಇಲ್ಲಿ ಈಗ ಮಾತನಾಡುತ್ತಿರುವುದು ಈ ಉದ್ದೇಶಕ್ಕಾಗಿಯೇ, ನನ್ನ ಅಭಿಪ್ರಾಯಗಳು ದಾಖಲಾಗಬೇಕು ಮತ್ತು ಇದರ ಮೂಲಕ ಸದನದಲ್ಲಿ ಕೆಲವು ಸದಸ್ಯರ ಅಭಿಪ್ರಾಯವು ಹೀಗಿತ್ತು ಎಂಬುದು ಸಂಧಾನಸಮಿತಿಯ ಗಮನಕ್ಕೆ ಬರುತ್ತದೆ. ರಾಜ್ಯಗಳು ಯಾವ ಹಕ್ಕು ಅಥವಾ ಅಧಿಕಾರಗಳನ್ನು ಹೊಂದಿವೆ ಮತ್ತು ಅವುಗಳ ಜೊತೆಗೆ ನಾವು ಯಾವ ಅಧಿಕಾರಗಳನ್ನು ನೀಡುತ್ತಿದ್ದೇವೆ ಎಂಬುದರ ಮೇಲೆ ನನ್ನ ಭಾಷಣವು ಬೆಳಕನ್ನು ಚೆಲ್ಲಬೇಕೆಂದು ನಾನು ಬಯಸುತ್ತೇನೆ. ನಾವು ಇಲ್ಲಿ ರಾಜ್ಯಗಳ ಜನತೆಯನ್ನು ಪ್ರತಿನಿಧಿಸುತ್ತಿರುವಾಗ, ರಾಜ್ಯಗಳ ಆಡಳಿತಗಾರರಿಗೆ ಸದ್ಯ ಅವರು ಹೊಂದಿರುವ ಅಧಿಕಾರಗಳಿಗಿಂತಲೂ ಹೆಚ್ಚಿನ ಅಧಿಕಾರವನ್ನು ನೀಡತಕ್ಕದ್ದಲ್ಲ. ಅವರು ಇಲ್ಲಿಯವರೆಗೆ ಬೇಕಾದಷ್ಟು ಅಧಿಕಾರವನ್ನು ಹೊಂದಿದ್ದರು. ಅವರು ಒಕ್ಕೂಟಕ್ಕೆ ಸೇರಿದಾಗ, ಅಧಿಕೃತವಾಗಿ ಇರುವ ರೆಸಿಡೆಂಟರ ಸ್ಥಾನವನ್ನು ತೆಗೆದುಹಾಕಲಾಗುತ್ತದೆ ಮತ್ತು ಕೆಲವು ರಾಜ್ಯಗಳು ನಿರಂಕುಶವಾಗುತ್ತವೆ. ಆದ್ದರಿಂದ, ಯಾವ ರಾಜ್ಯದ ವಿರುದ್ಧವೂ ಯಾವುದೇ ರೀತಿಯ ಆಪಾದನೆಯನ್ನು ಮಾಡದೆ ಮತ್ತು ಯಾರ ಮನಸ್ಸಿಗೂ ನೋವುಂಟುಮಾಡದೆ ನಾನು ಹೇಳಬಹುದಾದರೆ, ರಾಜ್ಯಗಳು ನಮ್ಮ ಒಕ್ಕೂಟದ ಕುಟುಂಬದ ಸದಸ್ಯರಾಗಬೇಕಾದರೆ, ಅವರು ನಮ್ಮ ತತ್ತ್ವಗಳಿಗೆ ಮತ್ತು ನಮ್ಮ ಪ್ರಜಾತಂತ್ರಕ್ಕೆ ಗೌರವವನ್ನು ತೋರಿಸಬೇಕು. ನಿರಂಕುಶವಾದ ಆಡಳಿತವನ್ನು ಹೊಂದಿರುವ ರಾಜ್ಯಗಳಿಗೆ ನಮ್ಮ ಒಕ್ಕೂಟದಲ್ಲಿ ಸ್ಥಾನವಿಲ್ಲ. ಕೆಲವು ನಾಯಕರು ನೀಡುವ ಆಶ್ವಾಸನೆಯ ಪ್ರಕಾರ ತಮಗೆ ಸಂಪೂರ್ಣವಾದ ಸ್ವಾತಂತ್ರ್ಯವು ಇದೆಯೆಂದು ರಾಜ್ಯಗಳು ಭಾವಿಸಬಹುದು. ಆದರೆ, ಈ ಸದನವು ಅವರ ಎಲ್ಲ ಕರಾರುಗಳಿಗೂ ಒಪ್ಪಿಕೊಂಡರೂ, ಅವರು ಒಕ್ಕೂಟವನ್ನು ಸೇರಿದಾಗ ಅವರ ನಿರಂಕುಶತ್ವವು ಅಪಾಯದಲ್ಲಿರುತ್ತದೆ ಎಂದು ನಾನು ಅವರಿಗೆ ಎಚ್ಚರಿಕೆಯನ್ನು ನೀಡುತ್ತಿದ್ದೇನೆ. ಭಾರತವು ಮತ್ತು ಈ ಸದನವು ಆದಷ್ಟು ಶೀಘ್ರವಾಗಿ ನಿರಂಕುಶತ್ವಕ್ಕೆ ಮಂಗಳವನ್ನು ಹಾಡುತ್ತದೆ ಮತ್ತು ರಾಜ್ಯಗಳು ಇದನ್ನು ಸಂಪೂರ್ಣವಾಗಿ ಅರಿತುಕೊಂಡು, ಒಕ್ಕೂಟವನ್ನು ಸೇರಬೇಕು. ಸಾಮಾನ್ಯ ಜನತೆ ಇದನ್ನು ಬಯಸುತ್ತಾರೆ. ಕೆಲವೊಂದು ಕಾರಣಗಳಿಂದಾಗಿ ಈ ಸದನವು ನಿರಂಕುಶ ಅಧಿಕಾರವನ್ನು ಕೊನೆಗಾಣಿಸಲಾರದೆ ಇದ್ದರೆ, ಈ ಸದನದ ಅವಧಿಯು ಮುಗಿದ ಮೇಲೆ ಹೊಸ ಸಂವಿಧಾನ ರಚನಾಸಭೆಯನ್ನು ಕರೆಯಲಾಗುತ್ತದೆ ಮತ್ತು ಅದು ಎಲ್ಲ ಆರ್ಥಿಕ ಸಮಸ್ಯೆಗಳಷ್ಟನ್ನೇ ಅಲ್ಲದೆ ರಾಜಕೀಯ ಸಮಸ್ಯೆಗಳನ್ನೂ ಪರಿಹರಿಸುತ್ತದೆ. ಆ ಕ್ರಾಂತಿಕಾರಿ ಸಂಸತ್ತು ನಿರಂಕುಶತೆಯ ಒಂದು ಸಣ್ಣ ಕುರುಹನ್ನೂ ಭಾರತದಲ್ಲಿ ಉಳಿಯಗೊಡುವುದಿಲ್ಲ. ಭಾರತದ ಒಕ್ಕೂಟವು ತನ್ನ ಮುಖದ ಮೇಲೆ ಈ ನಿರಂಕುಶಾಡಳಿತದ ಕಪ್ಪು ಕಲೆಯು ಹೆಚ್ಚುಕಾಲ ಇರುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ನಾನು ಹೇಳಬೇಕಾಗಿದ್ದುದು ಇಷ್ಟು.]*

**ಗೌರವಾನ್ವಿತ ಶ್ರೀ ಹುಸೇನ್ ಇಮಾಮ್** : ಮಾನ್ಯ ಸಭಾಧ್ಯಕ್ಷರೆ, ಒಕ್ಕೂಟದ ಘಟಕ ರಾಜ್ಯಗಳಲ್ಲಿ ಕನಿಷ್ಠ ಮಟ್ಟದ ಪ್ರಜಾತಂತ್ರವು ಇರತಕ್ಕದ್ದು ಎಂದು ಈಗ ತಾನೆ ಹೇಳಿದ ಭಾಷಣಕಾರರ ಅಭಿಪ್ರಾಯವನ್ನು ಕುರಿತು ಈ ಸದನದ ಸದಸ್ಯರಲ್ಲಿ ಭಿನ್ನಮತವಿರುವುದು ಸಾಧ್ಯವೇ ಇಲ್ಲ. ಗೌರವಯುತ ಅಸ್ತಿತ್ವಕ್ಕೆ ಒಂದು ನಿರ್ದಿಷ್ಟ ಗುಣಮಟ್ಟವಿರುತ್ತದೆ, ಮತ್ತು ಕೆಲವು ಕನಿಷ್ಠ ಕ್ರಮಗಳು, ಅತ್ಯಾವಶ್ಯಕವೆಂಬಂತೆ ಇರುತ್ತವೆ. ಈ ಕಾಲದಲ್ಲಿ ತಮಗೆ ತೋರಿದಂತೆ ಆಳ್ವಿಕೆಯನ್ನು ನಡೆಸಲು ತಮಗೆ ದೈವದತ್ತ ಹಕ್ಕುಗಳು ಇವೆ ಎಂದು ಯಾರಾದಾರೂ ಹೇಳಿಕೊಳ್ಳುವುದು ತಪ್ಪಾಗುತ್ತದೆ. ಮಧ್ಯಮುವಾರ್ಗವನ್ನು ಹಿಡಿಯುವ ಮತ್ತು ಸಂಧಾನವನ್ನು ಸಾಧನವನ್ನಾಗಿಸಿಕೊಳ್ಳುವ ಮನೋಭಾವ ನನ್ನದು. ಆದರೆ ಈ ಎರಡೂ ಮಾರ್ಗಗಳಿಗೆ ಒಂದು ಮಿತಿಯಿದ್ದು ಅದರಿಂದಾಚೆಗೆ ನೀವು ಅದನ್ನು ಅನುಸರಿಸಲಾರಿರಿ. ಕೆಲವೊಂದು ಮೂಲತತ್ತ್ವಗಳಿದ್ದು, ಅವುಗಳನ್ನು ನಾವು ಒಪ್ಪಿಕೊಳ್ಳಲೇಬೇಕು. ವಿದೇಶೀ ಸರ್ಕಾರವು ೫೬೦ ಘಟಕಗಳ ಅಸ್ತಿತ್ವಕ್ಕೆ ಅನುಮತಿಯನ್ನು ನೀಡಿತ್ತು ಎಂದ ಮಾತ್ರಕ್ಕೆ, ಈ ಘಟಕಗಳ ಸ್ವತಂತ್ರ ಅಸ್ತಿತ್ವವನ್ನು ಸಂವಿಧಾನ ರಚನಾಸಭೆಯೂ ಒಪ್ಪಿಕೊಳ್ಳಲೇಬೇಕು ಎಂಬ ಅಗತ್ಯವೇನೂ ಇಲ್ಲ. ಇಂದಿನ ದಿನಗಳಲ್ಲಿ ಸಣ್ಣಸಣ್ಣ ಘಟಕಗಳು ಪರಸ್ಪರ ಹೋರಾಟದಲ್ಲಿಯೇ ತೊಡಗಿಕೊಂಡಿರುವುದು ಸಾಧ್ಯವಿಲ್ಲ. ಕೈಗಾರಿಕೀಕರಣ ಮತ್ತು ಕುಟೀರ ಕೈಗಾರಿಕೆಗಳನ್ನು ಗಮನಿಸಿ. ಕುಟೀರ ಕೈಗಾರಿಕೆಗಳ ಅವನತಿಯನ್ನು ನೀವು ಪ್ರತಿ ದಿನವೂ ನೋಡುತ್ತಿರುವಿರಿ. ನಾವು ಅವುಗಳನ್ನು ರಕ್ಷಿಸಲು ಮತ್ತು ಅವುಗಳಿಗೆ ಬೆಂಬಲವನ್ನು ನೀಡಲು ಪ್ರಯತ್ನಿಸುತ್ತಿದ್ದೇವೆ, ಏಕೆಂದರೆ, ಅವು ಕಾರ್ಮಿಕರಿಗೆ ದೊಡ್ಡ ದೊಡ್ಡ ಕೈಗಾರಿಕೆಗಳಿಗಿಂತ ಹೆಚ್ಚು ಲಾಭಕರವಾಗಿರುತ್ತವೆ. ಹಾಗೆಯೇ, ಈ ೫೬೦ ಘಟಕಗಳೂ ಸಾಮಾನ್ಯ ಜನರಿಗೆ ಹೆಚ್ಚಿನ ಲಾಭಕರವಾಗಿರುತ್ತವೆಂದು ತೋರಿದ್ದರೆ, ನಾನು ಅವುಗಳ ಬೆಂಬಲಕ್ಕೆ ನಿಲ್ಲುತ್ತಿದ್ದೆ. ಆದರೆ ಅವುಗಳಲ್ಲಿ ಬಹಳಷ್ಟು ಘಟಕಗಳು ಎಷ್ಟು ಚಿಕ್ಕವಾಗಿರುವವೆಂದರೆ, ಅಕ್ಕಪಕ್ಕದ ಘಟಕಗಳೊಂದಿಗೆ ಸೇರಿಕೊಂಡು ದೊಡ್ಡ ಘಟಕವಾಗುವುದು ಆವಶ್ಯಕವೆಂದು ಅವು ಯೋಚಿಸುತ್ತಿವೆ. ಇದು ಸರಿಯಾದ ದಿಕ್ಕಿನತ್ತ ಹಾಕುತ್ತಿರುವ ಹೆಜ್ಜೆ ಮತ್ತು ಹಾಗೆ ಅವು ಪೂರ್ಣಪ್ರಮಾಣದವರೆಗೆ ಮುಂದುವರಿದರೆ, ಅವುಗಳ ಅಸ್ತಿತ್ವವನ್ನು ಇಂದೂ ನಾವು ಒಪ್ಪಬಹುದು. ಆದರೆ, ವೈಯಕ್ತಿಕತೆಯು ಹಾಗೆಯೇ ಮುಂದುವರಿದರೆ, ಮತ್ತು ಘಟಕಗಳು ತಾವೇ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡು ಅದರಲ್ಲಿ ಸಾಮಾನ್ಯ ಪ್ರಜೆಗಳಿಗೆ ಆವಶ್ಯಕವಾದ ಸಾಮಾನ್ಯ ಸವಲತ್ತುಗಳನ್ನು ಮತ್ತು ಅನುಕೂಲಗಳನ್ನು ನೀಡದೆ ಇದ್ದರೆ, ಅಂತಹ ರಾಜ್ಯಗಳ ಅಸ್ತಿತ್ವಕ್ಕೆ ಗಂಡಾಂತರವು ಕಾದಿರುತ್ತದೆ ಎಂದು ನನಗೆ ಎನಿಸುತ್ತದೆ. ಈ ರಾಜ್ಯಗಳ ಜನತೆಯ ಹಕ್ಕುಗಳು, ಬ್ರಿಟಿಷ್ ಭಾರತದಲ್ಲಿನ ಪ್ರಜೆಗಳ ಹಕ್ಕುಗಳಷ್ಟೇ ಅಮೂಲ್ಯವಾದವು ಮತ್ತು ಅವುಗಳನ್ನು ರಕ್ಷಿಸಬೇಕು ಎಂಬ ವಿಷಯದತ್ತ ಈ ಸದನ ಹಾಗೂ ಸಂಧಾನ ಸಮಿತಿಯ ಸದಸ್ಯರು ಗಮನ ಹರಿಸಬೇಕು ಎಂಬ ಹಿಂದಿನ ಭಾಷಣಕಾರರ ಮನವಿಯನ್ನು ನಾನು ಪುಷ್ಟೀಕರಿಸುತ್ತೇನೆ. (ಕೇಳಿ, ಕೇಳಿ) ಪ್ರಾಂತ್ಯಗಳಲ್ಲಿನ ಪ್ರಜೆಗಳ ಕ್ಷೇಮದತ್ತ ನಾವು ನೀಡುತ್ತಿರುವಷ್ಟೇ ಕಾಳಜಿಯನ್ನು ರಾಜ್ಯಗಳಲ್ಲಿನ ಜನತೆಯ ರಕ್ಷಣೆಗೂ ನೀಡಬೇಕು. ಪ್ರಜಾತಂತ್ರವು ನಿಗದಿತ ಕನಿಷ್ಠ ಮಟ್ಟದಲ್ಲಿಯಾದರೂ ಇರಬೇಕು, ಜನತೆಗೆ ಕನಿಷ್ಠ ಮಟ್ಟದ ಹಕ್ಕುಗಳಾದರೂ ಇರಬೇಕು ಮತ್ತು ಈ ಭರತ ಖಂಡದಲ್ಲಿ ಯಾರೂ ಅವುಗಳಿಂದ ವಂಚಿತರಾಗಬಾರದು. ರಾಜ್ಯವು ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಅವು ಪ್ರಗತಿಯತ್ತ ನಡೆಯಲು ಪ್ರಯತ್ನಿಸಬೇಕು ಮತ್ತು ನಾವು ಅವುಗಳಿಗೆ ಹಾಗೆ ಮಾಡಲು ಸಹಾಯವನ್ನು ಮಾಡದಿದ್ದರೆ, ನಾವು ನಮಗೆ ವಹಿಸಿರುವ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಸೋಲುತ್ತಿದ್ದೇವೆ ಎಂದರ್ಥ. ರಾಜ್ಯಗಳ ಬಹುಭಾಗವು ಬ್ರಿಟಿಷರು ಇಲ್ಲಿಂದ ಕಾಲ್ತೆಗೆಯುವುದಕ್ಕೆ ಮೊದಲು ಇದ್ದ ಹೀನಸ್ಥಿತಿಯಲ್ಲಿಯೇ ಮುಂದುವರಿದರೆ ನಮ್ಮ ಸ್ವಾತಂತ್ರ್ಯಕ್ಕೆ ಯಾವ ಮೌಲ್ಯವೂ ಉಳಿದಿರುವುದಿಲ್ಲ. ಆದುದರಿಂದ ನಾನು ಈ ಮನವಿಯನ್ನು ಬೆಂಬಲಿಸುತ್ತೇನೆ ಮತ್ತು ಇದರಿಂದ ಉತ್ತಮವಾದ ಪರಿಣಾಮವು ಬರುತ್ತದೆಯೆಂದು ಭಾವಿಸುತ್ತೇನೆ.

**ಶ್ರೀ ಜೈನಾರಾಯಣ್ ವ್ಯಾಸ್** (ಜೋಧ್‌ಪುರ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ಪ್ರಕೃತ ರಾಜ್ಯಗಳ

ಇಡೀ ಸಮಸ್ಯೆಗಳು ಸದನದ ಮುಂದೆ ಇಲ್ಲ, ಆದರೆ ನಾವು ರಾಜರುಗಳಿಗೆ; ಕೇಂದ್ರಕ್ಕೆ ಸಂಬಂಧಿತ ವಿಷಯಗಳಲ್ಲಿ ಯಾವ ಅಧಿಕಾರವನ್ನು ನೀಡಬೇಕು ಎಂಬುದನ್ನು ಮಾತ್ರ ಪರಿಶೀಲಿಸಬೇಕು. ಆದುದರಿಂದ ನಾನು ಈ ವಿಷಯವನ್ನು ಮಾತ್ರ ಕುರಿತು ಮಾತನಾಡುತ್ತೇನೆ ಮತ್ತು ಈ ವಿಷಯವನ್ನು ಬಿಟ್ಟು ಇತರ ವಿಷಯಗಳತ್ತ ಈ ಸದನವು ತನ್ನ ಗಮನವನ್ನು ಹರಿಸಬಾರದೆಂದು ಬಯಸುತ್ತೇನೆ.

ಪ್ರಸ್ತುತ ಇರುವ ವ್ಯವಸ್ಥೆಯಲ್ಲಿ ಇಲ್ಲದಿರುವ ಅಧಿಕಾರಗಳನ್ನು ರಾಜರು ಅಥವಾ ರಾಜ್ಯಗಳು ಹೊಂದುತ್ತಾರೆ/ಹೊಂದಲಿವೆ ಎಂಬುದು ನಿಜ. ಆದರೆ ಪ್ರಸ್ತಾವದಲ್ಲಿರುವ ಬಳಸಿರುವ ಪದಗಳು, ಕಾನೂನು ಬೇರೆಯ ವ್ಯವಸ್ಥೆಯನ್ನು ಮಾಡದಿದ್ದರೆ, ಅವರ ಬಳಿ ಈಗಿರುವ ಅಧಿಕಾರಗಳು ಮುಂದುವರಿಯುತ್ತವೆಯಷ್ಟೇ ಹೊರತು, ಅದಕ್ಕಿಂತ ಹೆಚ್ಚಿನದಲ್ಲ ಎಂದು ಹೇಳುತ್ತವೆ. ಹೀಗಿದ್ದೂ ನಮ್ಮ ಒಕ್ಕೂಟಕ್ಕೆ ವಹಿಸಲಾಗಿರುವ ವಿಷಯಗಳ ಸಂಖ್ಯೆ ಅಧಿಕವಾಗಿರುವುದರಿಂದ ಹಾಗೂ ಅವು ವಿವಿಧ ವಿಷಯಗಳನ್ನೊಳಗೊಂಡಿರುವುದರಿಂದ, ರಾಜರುಗಳಿಗೆ ನೀಡುವ ಅಧಿಕಾರವು ಬಹುಶಃ ಕೆಲವು ರಾಜ್ಯಗಳಲ್ಲಿ ದುರ್ಬಳಕೆಗೆ ತುತ್ತಾಗಬಹುದು ಎಂಬ ಭಯವು ಕಾಡಬಹುದು. ಆದರೆ, ರಾಜ್ಯಗಳು ಈಗ ಒಕ್ಕೂಟಕ್ಕೆ ಸೇರಿರುವುದರಿಂದ, ಅಲ್ಲಿನ ರಾಜರು ದೇಶದ ಇತರ ಭಾಗಗಳ ಹಾದಿಯನ್ನೇ ತುಳಿಯುತ್ತಾರೆ ಎಂಬ ಭರವಸೆಗೆ ಅವಕಾಶವಿದೆ ಅಥವಾ ಆ ದಾರಿಗೆ ಬರಲು ನಾವು ಅವರನ್ನು ವಿನಂತಿಸಿಕೊಳ್ಳಬಹುದು. ತಮಗೆ ನೀಡಲಾಗಿರುವ ಅಧಿಕಾರಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಪ್ರಾಂತ್ಯಗಳನ್ನು ಕೂಡ ನಾವು ಕೇಳಿಕೊಳ್ಳಬೇಕು. ರಾಜ್ಯಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಶ್ರೀ ತ್ಯಾಗಿಯವರು ಹೇಳಿದರು. ನಾನು ಒಂದು ರಾಜ್ಯದ ಪ್ರಜೆ ಮತ್ತು ಆ ರಾಜ್ಯದ ಜನರನ್ನು ನಾನು ಪ್ರತಿನಿಧಿಸುತ್ತಿದ್ದೇನೆ. ರಾಜ್ಯಗಳು ನೇಮಕ ಮಾಡಿದ ಪ್ರತಿನಿಧಿಗಳ ಸ್ಥಾನಮಾನವು ರಾಜ್ಯದ ಜನತೆಯನ್ನು ಪ್ರತಿನಿಧಿಸುವವರಿಗೆ ಇರುವುದಿಲ್ಲವೆಂಬುದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಅವರು ರಾಜ್ಯ ಸರ್ಕಾರಗಳ ಪರವಾಗಿ ಮಾತನಾಡುತ್ತಾರೆ. ನಾವು ಇನ್ನೂ ಆ ಹಂತವನ್ನು ತಲುಪಿಲ್ಲ. ನಿಜವಾಗಿಯೂ ಇದು ನಮಗೆ ನೋವಿನ ಸಂಗತಿ. ನಾವು ನಮ್ಮ ಯುಕ್ತ ಸ್ಥಾನವನ್ನು ಪಡೆಯುವ ಆಸೆಯನ್ನು ಕೈಬಿಟ್ಟಿದ್ದೇವೆ ಎಂಬುದು ಇದರ ಅರ್ಥವಲ್ಲ. ಈ ಪರಿಸ್ಥಿತಿಯಲ್ಲಿ ಬಹಳ ಕಾಲ ಮುಂದುವರಿಯುವುದು ನಮಗೆ ಅಸಾಧ್ಯವಾಗುತ್ತದೆ. ನಮ್ಮ ಒಕ್ಕೂಟ ಸರ್ಕಾರವು ರಾಜರು, ಅವರ ಸಚಿವರುಗಳು ಮತ್ತು ಸರ್ಕಾರದ ಮೇಲೆ ತನ್ನ ಪ್ರಭಾವವನ್ನು ಬೀರಿ, ಜನತೆಯ ಪ್ರತಿನಿಧಿಗಳಿಗೂ ಆಯಾ ರಾಜ್ಯಗಳ ಆಂತರಿಕ ಆಡಳಿತದಲ್ಲಿ ಸಮಾನವಾದ ಸ್ಥಾನಗಳನ್ನು ನೀಡುವಂತೆ ಮಾಡುತ್ತಾರೆ ಎಂದು ನಾನು ಆಶಿಸುತ್ತೇನೆ. ನಾವು ಸಂಧಾನದ ಮೂಲಕ ಈ ವಿಷಯವನ್ನು ಬಗೆಹರಿಸಿಕೊಳ್ಳುತ್ತೇವೆಂಬ ನಂಬಿಕೆ ನನಗಿದೆ. ಆದರೂ, ನಮ್ಮ ಸಂಧಾನಗಳು ಇದನ್ನು ಸೌಹಾರ್ದಯುತವಾಗಿ ಪರಿಹರಿಸಿಕೊಳ್ಳಲು ವಿಫಲವಾದರೆ, ಆಗಸ್ಟ್ ೧೫ರ ಅನಂತರ ಆಳುವವರು ಮತ್ತು ರಾಜ್ಯದ ಜನತೆ ಪರಸ್ಪರ ವಿರೋಧೀ ಮನೋಭಾವವನ್ನು ತಾಳುತ್ತಾರೆ. ತಮಗೆ ಸಂಬಂಧಿಸಿದ ವಿಷಯಗಳನ್ನು ಪರಿಹರಿಸಿಕೊಳ್ಳುವ ಶಕ್ತಿಯನ್ನು ಜನರು ಹೊಂದಿದ್ದಾರೆ. ನಮಗೆ ಅನುಕಂಪವನ್ನು ತೋರಿದ್ದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಆದರೆ, ನಮ್ಮ ನಿಲವು ಒಕ್ಕೂಟಕ್ಕೆ ಸಂಬಂಧಿಸಿದ ವಿಷಯಗಳಿಗೆ ಗಂಭೀರವಾಗಿ ಬಾಧಕವಾಗುವುದಿಲ್ಲ ಎಂಬುದನ್ನೂ ನಾನು ಇಲ್ಲಿ ಹೇಳಬೇಕು. ಒಕ್ಕೂಟವು ತನ್ನ ಹಿತವನ್ನು ಮಾತ್ರ ಲಕ್ಷಿಸಿದರೆ ಆಗ ಅದರ ಮೇಲೆ ನಮ್ಮ ನಿಲುವು ಸ್ವಲ್ಪ ಪರಿಣಾಮವನ್ನು ಬೀರಬಹುದು. ಇಷ್ಟು ಹೇಳಿ, ನಾನು ಮೂಲ ನಿರ್ಣಯವನ್ನು ಬೆಂಬಲಿಸುತ್ತೇನೆ.]*

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ಈ ವಿಷಯಗಳಲ್ಲಿ ಜನತೆಯ ಪ್ರತಿನಿಧಿಗಳ ದನಿ ಇರಬೇಕೆಂದು ಸೂಚಿಸುವ ಒಂದು ತಿದ್ದುಪಡಿಗೆ ಸೂಚನೆಯನ್ನು ನೀಡಿದ್ದೆ. ಆದರೆ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ರಾಜ್ಯಗಳ ಸಚಿವರುಗಳು ಅಂಗೀಕರಿಸಿದುದರಿಂದ, ನಾನು ನನ್ನ ತಿದ್ದುಪಡಿಯನ್ನು ಹಿಂದಕ್ಕೆ ಪಡೆದೆ. ಇದರ ಪರಿಣಾಮವಾಗಿ ರಾಜ್ಯಗಳಲ್ಲಿ

ಹೊಸ ಬೆಳಕಿನ ಉದಯವಾಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಈ ತಿದ್ದುಪಡಿಯ ಪರಿಣಾಮಗಳನ್ನೆಲ್ಲ ಅರಿತೇ ಸಚಿವರುಗಳು ಇದನ್ನು ಒಪ್ಪಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ರಾಜ್ಯಗಳ ಜನತೆಯ ಪ್ರತಿನಿಧಿಗಳಾದ ನಮ್ಮ ಪರಿಸ್ಥಿತಿಯು ಬಹಳ ಸೂಕ್ಷ್ಮವಾದದ್ದಾಗಿದೆ. ಒಂದೆಡೆ, ನಾವು ಭಾರತದ ಒಕ್ಕೂಟಕ್ಕೆ ಹಾನಿಯಾಗುವಂತಹ ಯಾವುದೇ ನಿಲುವನ್ನೂ ತೆಗೆದುಕೊಳ್ಳುವುದಿಲ್ಲ. ಒಗ್ಗಟ್ಟು ನಮ್ಮ ಇಂದಿನ ತುರ್ತು ಅಗತ್ಯವಾಗಿದೆ. ಈ ದೃಷ್ಟಿಯಿಂದ ನಾವು ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದೇವೆ. ಈ ತಿದ್ದುಪಡಿಯನ್ನು ಒಪ್ಪಿಕೊಂಡ ಮೇಲೆ ನಾವು ಹೆಚ್ಚು ವಿಳಂಬವಿಲ್ಲದೆ ರಾಜ್ಯಗಳಲ್ಲಿ ಕನಿಷ್ಠ ಮಟ್ಟದವರೆಗಾದರೂ ಪ್ರಜಾತಾಂತ್ರಿಕ ವ್ಯವಸ್ಥೆಯು ಸ್ಥಾಪಿತವಾಗುತ್ತದೆ ಎಂದು ನಾವು ನಂಬುತ್ತೇವೆ. ಏಕೆಂದರೆ, ಒಕ್ಕೂಟದ ಸಂಸತ್ತಿಗೆ ಪ್ರತಿನಿಧಿಗಳನ್ನು ಚುನಾಯಿಸಲು ವಯಸ್ಕಮತದಾನವನ್ನು ಅನುಸರಿಸಲಾಗುತ್ತದೆ ಮತ್ತು ಪೌರತ್ವದ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳನ್ನು ಕೂಡ ಒಪ್ಪಿಕೊಂಡ ಹಾಗಾಗುತ್ತದೆ ಎಂಬುದು ಒಕ್ಕೂಟದ ಸಂಸತ್ತಿನಲ್ಲಿ ಇದರ ಅಂಗೀಕಾರವಾಗಿರುವುದರ ಅರ್ಥ. ಈ ಮೂಲಭೂತ ತತ್ತ್ವಗಳ ಅಂಗೀಕಾರವು ರಾಜ್ಯಗಳ ಆಡಳಿತದ ಮೇಲೆ ಕೆಲವು ಪರಿಣಾಮಗಳನ್ನು ಬೀರುತ್ತದೆ. ಶೀಘ್ರದಲ್ಲಿಯೇ, ಅತಿ ಹೆಚ್ಚಿನ ಹೊಣೆಯನ್ನು ಹೊತ್ತುಕೊಂಡಿರುವ ಸಚಿವರು ತಮ್ಮ ಕರ್ತವ್ಯಗಳನ್ನು ತಮ್ಮನ್ನು ಆಳುವವರಿಗಷ್ಟೇ ಅಲ್ಲದೆ, ರಾಜ್ಯದ ಜನತೆಗೆ ಹಾಗೂ ಕೇಂದ್ರದ ಒಕ್ಕೂಟಕ್ಕೂ ಸಲ್ಲಿಸುತ್ತಾರೆ ಮತ್ತು ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುತ್ತಾರೆ ಎಂಬ ಆಸೆಯನ್ನು ಹೊಂದಿದ್ದೇನೆ. ಈ ಆಶಯದೊಂದಿಗೆ ತಿದ್ದುಪಡಿಮಾಡಿದ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಎ. ರಾಮಸ್ವಾಮಿ ಮುದಲಿಯಾರ್** (ಮೈಸೂರು ರಾಜ್ಯ) : ಈ ಘನವಾದ ಸಭೆಯಲ್ಲಿ ಪ್ರಮುಖವಾದ ಈ ವಿಷಯದ ಮೇಲೆ ನಾನು ಒಂದೆರಡು ಮಾತುಗಳನ್ನಷ್ಟೆ ಆಡುತ್ತೇನೆ. ನಾನು ಸ್ವಲ್ಪ ಹಿಂಜರಿತದಿಂದಲೇ ಹೇಳುವ ಕೆಲವು ರಾಜ್ಯಗಳ 'ಪ್ರತಿನಿಧಿಗಳು' (ಅವರನ್ನು ರಾಜ್ಯದ ಅಧಿಕೃತ ಸಚಿವರು ಎಂದು ವರ್ಣಿಸಲಾಯಿತು), ಭಾರತ ಸರ್ಕಾರದ ಅಧಿನಿಯಮದ ೧೨೫ನೆಯ ಪ್ರಕರಣವನ್ನು ಇಲ್ಲಿ ಸೇರಿಸಲು ಒಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆ. ಆ ಅಧಿನಿಯಮವು ಸೂಚಿಸುವಂತೆ ಮಹಾಮಂಡಲಿಯ ಕಾರ್ಯನಿರ್ವಹಣಾ ಅಧಿಕಾರವನ್ನು ರಾಜ್ಯಗಳು ಮತ್ತು ರಾಜ್ಯಗಳ ಆಡಳಿತಗಾರರು ತಮ್ಮ ಅಧಿಕಾರಗಳ ಮೂಲಕ ಜಾರಿಗೆ ತರುತ್ತಾರೆ ಮತ್ತು ರಾಜ್ಯಗಳ ಈ ಮಹಾಮಂಡಲಿಯು ಸರಿಯಾಗಿ ಕೆಲಸಮಾಡುವಂತೆ ರಾಜ್ಯಗಳ ಕಾರ್ಯವನ್ನು ತನಿಖೆ ಮಾಡುವ ತನ್ನ ಹಕ್ಕಿಗಷ್ಟೇ ತೃಪ್ತವಾಗಬೇಕಾಗಿದೆ. ಇಂದಿಗೂ ಭಾರತದಲ್ಲಿ ಮಹಾಮಂಡಲಿಯ ಅಥವಾ ಭಾರತ ಸರ್ಕಾರದ ಅಗತ್ಯ ಕಾರ್ಯಗಳನ್ನೆಲ್ಲಾ ಕಾರ್ಯಗತಗೊಳಿಸುತ್ತಿರುವುದು ರಾಜ್ಯ ಸರ್ಕಾರಗಳು ಮತ್ತು ರಾಜ್ಯಗಳ ಕಾರ್ಯನಿರ್ವಾಹಕ ಅಧಿಕಾರಿಗಳೇ ದುಂಡುಮೇಜಿನ ಪರಿಷತ್ತಿನ ವಿವಿಧ ಅಧಿವೇಶನಗಳಲ್ಲಿ ಭಾರತ ಸರ್ಕಾರದ ಕಾಯಿದೆಯು ಪರಿಶೀಲನೆಯ ಹಂತದಲ್ಲಿದ್ದಾಗ ಸಂಯುಕ್ತ ಸಂಸತ್ತು ಮಾಡುವ ಕಾನೂನುಗಳಿಗೆ ಒಕ್ಕೂಟಕ್ಕೆ ಸೇರಲಿರುವ ರಾಜ್ಯಗಳು ಯಾವ ಬಗೆಯ ಆಕ್ಷೇಪಣೆಯನ್ನೂ ಹೊಂದಿರುವುದಿಲ್ಲ, ಆದರೆ ಅವುಗಳನ್ನು ಜಾರಿಮಾಡುವ ಕಾರ್ಯನಿರ್ವಾಹಕ ಅಧಿಕಾರವು ರಾಜ್ಯಗಳ ಅಧಿಕಾರಿಗಳ ಕೈಯಲ್ಲಿಯೇ ಇರತಕ್ಕದ್ದು ಎಂದು ಹೇಳಲಾಗಿತ್ತು. ಅಂದರೆ, ಮಹಾಮಂಡಲಿಯು ಶಾಸನಗಳನ್ನು ರೂಪಿಸುವ ಅಧಿಕಾರವನ್ನು ಮಾತ್ರ ಹೊಂದಿರುತ್ತವೆ, ಆ ಶಾಸನಗಳನ್ನು ಜಾರಿಗೊಳಿಸುವ ಅಧಿಕಾರವು ರಾಜ್ಯಗಳದ್ದಾಗಿರುತ್ತದೆ. ಈ ನಿರ್ಧಾರವನ್ನು ೧೯೩೦ರಷ್ಟು ಹಿಂದೆಯೇ ತೆಗೆದುಕೊಳ್ಳಲಾಗಿತ್ತು. ಈ ಮಧ್ಯೆ, ಪರಿಸ್ಥಿತಿಯು ಕೆಲವು ರಾಜ್ಯಗಳಲ್ಲಿ ಬಹಳ ದೂರದವರೆಗೆ ಹೋಗಿದ್ದಿತು ಮತ್ತು ಕೆಲವು ರಾಜ್ಯಗಳಲ್ಲಿ ಅದು ಇನ್ನೂ ಮುಂದೆ ಹೋಗಿ ಜನತೆಯನ್ನು ರಾಜ್ಯದ ಆಡಳಿತದಲ್ಲಿ ಒಳಗೊಳ್ಳುವಷ್ಟರ ಮಟ್ಟವನ್ನು ಮುಟ್ಟಿದ್ದಿತು. ಜನಾಭಿಪ್ರಾಯದ ಮುನ್ನಡೆ, ರಾಜ್ಯಗಳಲ್ಲಿಯೇ ಮೂಡಿರುವ ಅರಿವು, ಮತ್ತು ರಾಜ್ಯಗಳು ಮಹಾಮಂಡಲಿಯನ್ನು ಸೇರಬಹುದಾದಂತಹ ವಾತಾವರಣ ಹಾಗೂ ರಾಜ್ಯಗಳ ಪ್ರತಿನಿಧಿಗಳಿಗೆ ಒಕ್ಕೂಟದ ಸಂಸತ್ತಿನಲ್ಲಿ ದೊರಕಿರುವ ಸ್ಥಾನಗಳು – ಇವೆಲ್ಲವೂ ರಾಜ್ಯಗಳ

ಪ್ರಗತಿಯ ಮತ್ತು ರಾಜ್ಯಗಳ ಆಡಳಿತದಲ್ಲಿ ರಾಜ್ಯಗಳ ಪ್ರಜೆಗಳನ್ನು ಒಳಗೊಳ್ಳುವಿಕೆಯ ಪ್ರಕ್ರಿಯೆಗಳ ವೇಗವನ್ನು ಹೆಚ್ಚಿಸುತ್ತಿವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. (ಹರ್ಷೋದ್ಗಾರ). ನಾನು ಯಾವುದೇ ರಾಜ್ಯವನ್ನು ವೈಯಕ್ತಿಕವಾಗಿ ಹೆಸರಿಸುವುದಿಲ್ಲ, ಆದರೆ ಕೆಲವು ರಾಜ್ಯಗಳು ಶೀಘ್ರವಾಗಿ ಬೆಳವಣಿಗೆಯನ್ನು ಹೊಂದಿ ಸದ್ಯದಲ್ಲಿಯೇ ತಮ್ಮ ಪ್ರಜೆಗಳಿಗೆ ಅಧಿಕಾರದಲ್ಲಿ ಪಾಲನ್ನು ನೀಡಲಿವೆ ಎಂಬುದು ನನ್ನ ಮನಸ್ಸಿನಲ್ಲಿದೆ. ೧೯೩೦-೩೧ರಷ್ಟು ಹಿಂದೆಯೇ, ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ ರಾಜ್ಯಗಳ ಪ್ರತಿನಿಧಿಗಳು ಶಾಸನಗಳನ್ನು ರೂಪಿಸುವ ಅಧಿಕಾರವು ಮತ್ತು ಅದನ್ನು ಜಾರಿಗೊಳಿಸುವ ಅಧಿಕಾರವು ರಾಜ್ಯಗಳಿಗಿರಬೇಕು ಎಂಬ ನೀತಿಯನ್ನು ಒಪ್ಪಿಕೊಂಡಿದ್ದರು. ನಾನು ಮುಂದಿಡುತ್ತಿರುವ ಪ್ರಸ್ತಾವವು ಯಾವ ಅಧಿಕಾರಶಾಹಿ ಅಥವಾ ಪ್ರಜಾಪ್ರಭುತ್ವವಿರೋಧೀ ರಾಜ್ಯಗಳ ಪರವಾಗಿಯೂ ಇಲ್ಲ, ಆದರೆ, ಅದು ಪ್ರಜೆಗಳ ಪರವಾಗಿ ಮಂಡಿಸಿದ ಪ್ರಸ್ತಾವವೇ ಆಗಿದೆ – ಅಬೆಂದರೆ, ಆಯಾ ರಾಜ್ಯಗಳಲ್ಲಿನ ಕಾರ್ಯನಿರ್ವಾಹಕ ಅಧಿಕಾರವು ಆಯಾ ರಾಜ್ಯಗಳ ಪ್ರಾಧಿಕಾರ ಅಥವಾ ರಾಜ್ಯಗಳ ಅಧಿಕಾರಿಗಳ ಕೈಯಲ್ಲಿಯೇ ಇರತಕ್ಕದ್ದು. ಕಾರ್ಯನಿರ್ವಹಣಾ ಅಧಿಕಾರವನ್ನು ತನ್ನ ಅಧಿಕಾರಿಗಳ ಮೂಲಕ ಮಹಾಮಂಡಲಿಯು ನಿರ್ದೇಶಿಸಬೇಕಾದರೂ, (ಅವರ ಆ ನಿರ್ದೇಶನದ ಅನಂತರ ಆ ಅಧಿಕಾರಿಗಳು ತಮ್ಮ ನಿರ್ವಾಹಕ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ), ಅನಂತರ ಪ್ರಜೆಗಳು ತಮ್ಮ ಜವಾಬ್ದಾರಿಯುತ ಪ್ರತಿನಿಧಿಗಳ ಮೂಲಕ ಸ್ವಲ್ಪ ಮಟ್ಟಿಗೆ ಈ ಹೊಣೆಗಾರಿಕೆಯನ್ನು ತಮ್ಮ ಹೆಗಲ ಮೇಲಕ್ಕೆ ತೆಗೆದುಕೊಳ್ಳುತ್ತಾರೆ ಅಲ್ಲದೆ, ಹಂತಹಂತವಾಗಿ ಅವರು ಬಹಳಷ್ಟು ಮಟ್ಟಿಗೆ ರಾಜ್ಯಗಳ ಆಡಳಿತದಲ್ಲಿಯೂ ಪಾತ್ರವಹಿಸಲಾರಂಭಿಸುತ್ತಾರೆ. ಒಂದು ವೇಳೆ ಒಕ್ಕೂಟವು ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಮಧ್ಯೆ ಪ್ರವೇಶಮಾಡಿದರೆ, ಇದರಿಂದ ರಾಜ್ಯದ ರಾಜರು ಏನನ್ನೂ ಕಳೆದುಕೊಳ್ಳುವುದಿಲ್ಲ, ಬದಲಿಗೆ ಜನಪ್ರಿಯ ಪ್ರತಿನಿಧಿಗಳು ಎಂದು ಕರೆಯಲ್ಪಡುತ್ತಿರುವ ಜನತೆಯ ಪ್ರತಿನಿಧಿಗಳು ಆಡಳಿತದಲ್ಲಿ ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಪ್ರಾಂತ್ಯಗಳಲ್ಲಿ ಕೆಲಮಟ್ಟಿಗೆ ಸಂಯುಕ್ತ ಅಧಿಕಾರವು ಸಂಯುಕ್ತ ಕಾರ್ಯನಿರ್ವಾಹಕ ಪ್ರಾಧಿಕಾರದ ಮೂಲಕವೇ ಚಲಾಯಿಸಲ್ಪಡುತ್ತದೆ ಎಂದು ಹೇಳಬಹುದು. ಒಕ್ಕೂಟದ ಸಂವಿಧಾನ ಸಮಿತಿ ಹಾಗೂ ಅದರ ಪ್ರಕ್ರಿಯೆಗಳಲ್ಲಿ ಭಾಗವಹಿಸಿದವರು ಪ್ರಾಂತ್ಯಗಳು ಮತ್ತು ರಾಜ್ಯಗಳ ನಡುವೆ ಮೂಲಭೂತವಾದ ವ್ಯತ್ಯಾಸವಿದೆ ಎಂಬುದನ್ನು ಅರಿತುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ತಮ್ಮ ವ್ಯಾಪ್ತಿಯಲ್ಲಿ ಮಹಾಮಂಡಲಿಯ ಅಧಿಕಾರಗಳನ್ನು ಕುರಿತು ತೆಗೆದುಕೊಂಡಿರುವ ತೀರ್ಮಾನಗಳ ವಿಷಯದಲ್ಲಿ ಪ್ರಾಂತ್ಯಗಳು ತೃಪ್ತಿಯನ್ನು ಹೊಂದಿವೆಯೇ ಅಥವಾ ಹೊಂದಲಿವೆಯೋ ಎಂಬುದು ನನಗೆ ತಿಳಿದಿಲ್ಲ. ಪ್ರಾಂತ್ಯಗಳಿಗೆ ಸಂಬಂಧಪಟ್ಟ ವಿಷಯಗಳ ಪಟ್ಟಿ ಮತ್ತು ಸಹವರ್ತಿ ಪಟ್ಟಿಗಳನ್ನು ಸದನವು ಇನ್ನೂ ಪರಿಶೀಲಿಸಿಲ್ಲ. ಪರಿಶೀಲನೆಯ ಅನಂತರ ಇವುಗಳ ಹಣೆಯ ಬರಹವು ಏನಾಗುತ್ತದೆ ಎಂಬುದನ್ನು ಊಹಿಸುವ ಧೈರ್ಯವನ್ನು ನಾನು ಮಾಡುವುದಿಲ್ಲ. ಮಾನ್ಯರೆ, ಆದರೆ, ನಾನು ಇಲ್ಲಿಯವರೆಗೆ ರಾಜ್ಯಗಳೊಡನೆ ಅಷ್ಟಾಗಿ ಸಂಬಂಧವನ್ನು, ಒಡನಾಟವನ್ನು ಹೊಂದಿರಲಿಲ್ಲ. ನನ್ನ ೩೦ ವರ್ಷಗಳ ವೃತ್ತಿಜೀವನವು, ಆಗಸ್ಟ್ ೧೫ರವರೆಗೆ ಬ್ರಿಟಿಷ್ ಭಾರತದ ಪ್ರಾಂತ್ಯಗಳು ಎಂದು ಕರೆಯಲ್ಪಡುವ ಪ್ರಾಂತ್ಯಗಳೊಂದಿಗೇ ಇತ್ತು. ಹೋರಾಟದ ದಿನಗಳಲ್ಲಿ ಹೋರಾಟದ ವಿಷಯವಾಗಿದ್ದ ಪ್ರಾಂತೀಯ ಸ್ವಾಯತ್ತತೆಯ ವಿಚಾರವು ಪ್ರಾಂತ್ಯಗಳಲ್ಲಿ ಬಲವಾಗಿದೆ ವಾಸ್ತವವಾದ ವಿಷಯವಾಗಿದೆ ಎಂಬುದನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಹಲವಾರು ವಿಷಯಗಳ ಆಡಳಿತವನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವುದರ ಮೂಲಕ ಕೇಂದ್ರವು ಬಲಯುತವಾಗುತ್ತದೆ ಎಂಬ ವಾದವನ್ನು ಪ್ರಾಂತ್ಯಗಳು ಒಪ್ಪುವ ಸಂಭವವು ಇಲ್ಲ. ನನ್ನ ದೃಷ್ಟಿಯಲ್ಲಿ ಸದೃಢವಾದ ಕೇಂದ್ರದ ಕಲ್ಪನೆ ಅದಲ್ಲ. ಯಾವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಸದೃಢವಾಗಿರಬೇಕು. ಇಂತಹ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಮತ್ತು ವಿಶ್ಲೇಷಣಾತ್ಮಕವಾಗಿ ಪರಿಶೀಲಿಸಿದರೆ, ಕೆಲವು ನಿರ್ದಿಷ್ಟ ಅಧಿಕಾರಕ್ಕೆ ಸಂಬಂಧಿಸಿದ ಹಾಗೆ ಕೆಲವು ವಿಷಯಗಳಿಗೆ ಕೇಂದ್ರ ಸರ್ಕಾರವು – ಅಂದರೆ, ಸಂಯುಕ್ತ ಸರ್ಕಾರವು – ಸಮಗ್ರ ಹಾಗೂ ವಿಶಾಲವಾದ ಅಧಿಕಾರಗಳನ್ನು ಹೊಂದಿರಬೇಕು, ಹಾಗೆಂದ

ಮಾತ್ರಕ್ಕೆ, ಅದರ ಅರ್ಥ ಪೇಟೆಂಟ್‌ಗಳ ಹಕ್ಕಿನಂತಹ ವಿಷಯವೇನ್ನೂ ಕೇಂದ್ರವು ತಾನೇ ತೆಗೆದುಕೊಂಡು ಪೇಟೆಂಟ್ ಮತ್ತು ಕಾಪಿರೈಟ್‌ಗಳ ಮೇಲಿನ ಹಕ್ಕನ್ನು ಚಲಾಯಿಸುವ ಮೂಲಕ ಸದೃಢವಾದ ಕೇಂದ್ರವನ್ನು ಕಟ್ಟಬಹುದು ಎಂಬ ಅರ್ಥವಲ್ಲ. ಅದು ಬೇರೆಯ ಕಾರಣಗಳಿಗಾಗಿ ಅಪೇಕ್ಷಣೀಯವಿರಬಹುದು. ಆದರೆ, ಬಲಯುತವಾದ ಕೇಂದ್ರ ಸರ್ಕಾರದ ವಿಷಯದಲ್ಲಿ ಯೋಚಿಸುವಾಗ, ಅತಿ ಹೆಚ್ಚು ವಿಷಯಗಳು ಕೇಂದ್ರ ಸರ್ಕಾರದ ಬಳಿಯಿದ್ದರೆ ಅದು ಬಲವಾಗಿರುತ್ತದೆ ಎಂದು ಹೇಳುವುದು ತಪ್ಪು ಎಂಬುದನ್ನು ನಾವು ಮರೆಯಬಾರದು. ನನ್ನ ದೃಷ್ಟಿಯಲ್ಲಿ ಅಧಿಕಾರದ ವಿಷಯಗಳನ್ನು ಹೆಚ್ಚು ಹೆಚ್ಚಾಗಿ ಒಕ್ಕೂಟಕ್ಕೆ ಸೇರಿಸುವುದರ ಮೂಲಕ ಮಹಾಮಂಡಲಿಯನ್ನು ನೀವು ದುರ್ಬಲಗೊಳಿಸುತ್ತೀರಿ. ನನ್ನ ಈಗಿನ ಹೊಸ ಅವತಾರವನ್ನು ಮರೆತು, ಪ್ರಾಂತ್ಯಗಳ ಪರವಾಗಿ ನಾನು ಮಾತನಾಡಲು ಅನುಮತಿಯನ್ನು ನೀಡಿದರೆ, ಕೇಂದ್ರ ಸರ್ಕಾರದ ಬೆಂಬಲದೊಂದಿಗೆ ಹೆಚ್ಚಿನ ವಿಷಯಗಳನ್ನು ಪ್ರಾಂತ್ಯಗಳೇ ನಿರ್ವಹಿಸಬೇಕು ಎಂಬುದನ್ನು ನಾನು ಒತ್ತಿ ಹೇಳುತ್ತೇನೆ. ಕೆಲವೊಂದು ತುರ್ತುಸಂದರ್ಭಗಳು ನಮಗೆ ಎದುರಾಗಬಹುದು, ಅಂತಹ ಸಂದರ್ಭಗಳಲ್ಲಿ ಎಲ್ಲ ವಿಷಯಗಳಲ್ಲಿಯೂ ಕೇಂದ್ರವೇ ನಿರ್ವಹಣಾಧಿಕಾರಗಳನ್ನು ತನ್ನ ಕೈಗೆ ತೆಗೆದುಕೊಳ್ಳುವುದಕ್ಕೆ ನಮ್ಮ ಸಮ್ಮತಿಯಿದೆ. ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ ಅಥವಾ ಇದೆಯೆಂಬುದು ಸಾಬೀತಾದಾಗ, ಎಲ್ಲ ನಿರ್ಬಂಧಗಳೂ ಮಾಯವಾಗುತ್ತವೆ. ಇಂತಹ ಸನ್ನಿವೇಶಗಳನ್ನು ನಾವು ಭಾರತ ಸರ್ಕಾರದ ಅಧಿನಿಯಮದಲ್ಲಿಯೂ ಕಾಣಬಹುದಾಗಿತ್ತು ಮತ್ತು ಕೇಂದ್ರ ಸರ್ಕಾರವು ಎಲ್ಲ ಅಧಿಕಾರಗಳನ್ನೂ ಹೊಂದಿರಬಹುದು. ಆದರೆ, ಸಾಮಾನ್ಯ ದಿನಗಳಲ್ಲಿ ದೈನಂದಿನ ವ್ಯವಹಾರಗಳನ್ನು ನಿರ್ವಹಿಸುವಾಗ, ಪ್ರಾಂತ್ಯಗಳು ಸಾಧ್ಯವಿದ್ದಷ್ಟು ವಿಶಾಲವಾದ ಅಧಿಕಾರಗಳನ್ನು ಹೊಂದಿರಬೇಕು ಎಂದು ಬಲವಾಗಿ ಮತ್ತು ಅಷ್ಟೇ ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ದೃಢವಾಗಿ ಹೇಳಬೇಕೆಂದರೆ, ರಾಜ್ಯಗಳು ಇನ್ನೂ ಹೆಚ್ಚಿನ ಅಧಿಕಾರಗಳನ್ನು ಹೊಂದಿರಬೇಕು ಮತ್ತು ಅವುಗಳ ಅಧಿಕಾರ ನಿರ್ವಹಣೆಯಲ್ಲಿ ಕೇಂದ್ರಕ್ಕೆ ಮಧ್ಯೆ ಪ್ರವೇಶವಿರಬಾರದು ಮತ್ತು ರಾಜ್ಯಗಳು ತಮ್ಮ ವಿಷಯಗಳನ್ನು ಕುರಿತು ಅಬಾಧಿತವಾಗಿ ತಮ್ಮ ಆಡಳಿತವನ್ನು ನಡೆಸಿಕೊಂಡು ಹೋಗುವಂತಿರಬೇಕು. ಈ ವಿಷಯಗಳ ನಿರ್ವಹಣಾಧಿಕಾರವನ್ನು ಕೆಲವು ರಾಜ್ಯಗಳಿಗೆ ನೀಡುವಲ್ಲಿ ಸಮಸ್ಯೆಗಳು ಇರಬಹುದು. ಅಂತಹ ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ನನ್ನ ಮಿತ್ರ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯು ಸೂಚಿಸಬಹುದು. ಈ ಕಾರಣದಿಂದಲೇ ಈ ತಿದ್ದುಪಡಿಯನ್ನು ನಾವು ಇನ್ನೂ ಅಂಗೀಕರಿಸಿಲ್ಲ. ಅಂತಹ ಅಪವಾದಗಳನ್ನು ಹೊರತುಪಡಿಸಿದರೆ, ಸಮರ್ಪಕವಾಗಿ ಆಡಳಿತವನ್ನು ನಡೆಸಿಕೊಂಡು ಹೋಗುವ, ಚುನಾಯಿತ ಅಥವಾ ಚುನಾಯಿತರಲ್ಲದ ಆಡಳಿತಗಾರರನ್ನು ಹೊಂದಿ ತಮ್ಮ ಆಡಳಿತವನ್ನು ಸೂಕ್ತ ರೀತಿಯಲ್ಲಿ ನಡೆಸಿಕೊಂಡು ಹೋಗುವ ರಾಜ್ಯಗಳ ಅಧಿಕಾರವನ್ನು ಕೇಂದ್ರ ಸರ್ಕಾರವು ಅತಿಕ್ರಮಿಸಬಾರದು ಎಂಬುದು ಸಾಮಾನ್ಯ ನಿಯಮವಾಗಿರಬೇಕು. ಪ್ರಾಂತ್ಯಗಳ ಪ್ರತಿನಿಧಿಗಳು ಬಹಳಷ್ಟು ಸಂಖ್ಯೆಯಲ್ಲಿರುವ ಈ ಸಭೆಯಲ್ಲಿ ನಾನು ಹೇಳಬೇಕೆಂದಿರುವುದನ್ನು ಹೇಳುವ ಧೈರ್ಯವನ್ನು ನಾನು ಮಾಡಲಾರೆ, ಪ್ರಾಂತ್ಯಗಳ ಆಡಳಿತಕ್ಕಿಂತ ಹೆಚ್ಚು ಸಮರ್ಥವಾಗಿ ಕೆಲವು ರಾಜ್ಯಗಳು ಆಡಳಿತವನ್ನು ನಡೆಸುತ್ತಿವೆ ಎಂಬುದನ್ನು ಸಾಕ್ಷ್ಯಾಧಾರಗಳ ಮೂಲಕ ತೋರಿಸಿಕೊಡಬಲ್ಲವು ಎಂದು ನಾನು ಭಾವಿಸುತ್ತೇನೆ. ಅಂತಹ ದಾಖಲೆಗಳ ಹಿನ್ನೆಲೆಯಲ್ಲಿ, ಆಡಳಿತವು ಆಯಾ ರಾಜ್ಯದ್ದೇ ಆಗಿರಬೇಕೆನ್ನುವುದನ್ನು ಹೆಚ್ಚುಕಡಿಮೆ ಈ ಸದನದ ಎಲ್ಲ ಸದಸ್ಯರೂ, ಸಂದರ್ಭದ ಅಗತ್ಯಕ್ಕೆ ಸ್ಪಂದಿಸುವ ಎಲ್ಲ ರಾಜ್ಯಗಳೂ ಒಪ್ಪುತ್ತವೆ ಎಂಬುದನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವ ಮೂಲಕ, ರಾಜ್ಯಗಳು ತಮ್ಮದೇ ಆದ ಕಾರ್ಯನಿರ್ವಹಣಾಧಿಕಾರವನ್ನು ಹೊಂದಿರಬೇಕು ಎನ್ನುವ ತತ್ತ್ವವನ್ನು ಬಿಟ್ಟುಕೊಟ್ಟ ಹಾಗಾಗುವುದಿಲ್ಲ ಮತ್ತು ವಿಶೇಷ ಪ್ರಸಂಗಗಳಲ್ಲಿ ಇದಕ್ಕೆ ಅಪವಾದವೆನ್ನುವಂತಹ ನೀತಿಯನ್ನು ಅನುಸರಿಸಬಹುದು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯರೆ, ಈ ನಿರ್ಣಯವನ್ನು ಮಂಡಿಸಿದವರ ಹಾಗೂ ರಾಜ್ಯಗಳ ಕೆಲವು ಪ್ರತಿನಿಧಿಗಳ ನಡುವೆ ಒಪ್ಪಂದವು ಉಂಟಾದ ಮೇಲೆ ನಾನು ಇದನ್ನು ಕುರಿತು ಮಾತನಾಡಬೇಕೆಂಬ ಇಚ್ಛೆ ನನಗಿರಲಿಲ್ಲ. ಈ ವಿಷಯದಲ್ಲಿ ವ್ಯವಹರಿಸುವಾಗ, ಮಹಾಮಂಡಲಿ ಅಥವಾ ಸಂಯುಕ್ತ ರಚನೆಗೆ ಸೇರಿರುವ ಪ್ರಾಂತ್ಯಗಳ ಅಧಿಕಾರ ವ್ಯಾಪ್ತಿಯನ್ನು ಕುರಿತು ವಿಶ್ಲೇಷಿಸತೊಡಗುವುದು ನನಗೆ ಅನಗತ್ಯ. ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಹೇಳಿದುದರ ಪರವಾಗಿ ನಾನು ಹೇಳಬಹುದಾದದ್ದು ಬಹಳಷ್ಟು ಇರಬಹುದು. ಆದರೆ, ಕೇಂದ್ರಕ್ಕೆ ಎಷ್ಟು ರಾಜ್ಯಗಳು ಸೇರಿವೆ ಎಂಬ ಸಂಖ್ಯೆಯ ಮೇಲೆ ಅದರ ಶಕ್ತಿಯು ಅವಲಂಬಿಸಿರುವುದಿಲ್ಲ. ಆದರೆ, ಅದು ನಿಂತಿರುವುದು ಕೇಂದ್ರದ ಕೈಯಲ್ಲಿ ರಾಷ್ಟ್ರವನ್ನು ಕಟ್ಟುವ ಮತ್ತು ಅದನ್ನು ರಕ್ಷಿಸುವ ಎಷ್ಟು ವಿಷಯಗಳು ಇವೆ ಮತ್ತು ತನ್ನ ಬಲವನ್ನು ಎಲ್ಲ ಕಡೆಯಲ್ಲಿಯೂ ಚಲಾಯಿಸಲು ಯಾವ ರೀತಿಯಲ್ಲಿ ಅದು ಸನ್ನದ್ಧವಾಗಿದೆ ಎಂಬುದರ ಮೇಲೆ. ಆದರೆ, ಇವೆಲ್ಲವೂ ಸದನದ ಮುಂದೆ ಈಗಿರುವ ವಿಷಯಕ್ಕೆ ಸಂಬಂಧಿಸದೆ ಇರುವಂತಹದ್ದು. ಕಾರ್ಯನಿರ್ವಹಣಾ ಅಧಿಕಾರವು ಶಾಸಕಾಂಗದ ಅಧಿಕಾರಗಳೊಡನೆ ಹಾಸುಹೊಕ್ಕಾಗಿ ಬೆರೆತಿರಬೇಕು ಎಂಬುದು ಹಿಂದಿನ ಖಂಡದ ಸಾರ. ಮಹಾಮಂಡಲಿಯು ಕೆಲವೊಂದು ಕಾನೂನುಗಳನ್ನು ಮಾಡುವ ಅಧಿಕಾರವನ್ನು ಹೊಂದಿದ್ದರೆ, ಅವುಗಳನ್ನು ಮಹಾಮಂಡಲಿಯಾದ್ಯಂತ ಜಾರಿಗೊಳಿಸುವ ಅಧಿಕಾರವನ್ನೂ ಅದು ಹೊಂದಿರಬೇಕು. ಇದು ಸಾಮಾನ್ಯಜ್ಞಾನದಿಂದ ಸರಿಯೆಂದು ಹೇಳಬಹುದಾದ ಮತ್ತು ಎಲ್ಲರೂ ಮಾನ್ಯಮಾಡಿರುವ ಸಂವಿಧಾನದ ನೀತಿಯಾಗಿದೆ. ಇದಕ್ಕೆ ರಾಜ್ಯದ ಮುಖಂಡರಾಗಲೀ, ಅಥವಾ ಪ್ರಾಂತ್ಯದ ಮುಖಂಡರಾಗಲೀ ಯಾವ ಆಕ್ಷೇಪಣೆಯನ್ನೂ ಎತ್ತುವ ಹಾಗಿಲ್ಲ.

ಎರಡನೆಯ ಪ್ರಶ್ನೆಯೆಂದರೆ, ಈ ಕಾರ್ಯನಿರ್ವಹಣಾಧಿಕಾರವನ್ನು ಬಳಸುವ ಬಗೆ ಹೇಗೆ? ಒಪ್ಪಂದಗಳ ಮೂಲಕ, ಒಕ್ಕೂಟವು ನೇರವಾಗಿ ನೇಮಿಸುವ ಏಜೆನ್ಸಿಯ ಮೂಲಕ ಅಥವಾ ಈಗಿನ ಸಂದರ್ಭದಲ್ಲಿ ರಾಜ್ಯಗಳನ್ನೇ ಅಥವಾ ಪ್ರಾಂತ್ಯಗಳನ್ನೇ ಏಜೆನ್ಸಿಯಾಗಿ ಮಾಡುವ ಮೂಲಕ ಅದನ್ನು ಜಾರಿಗೊಳಿಸಬಹುದು. ಏನೇ ಆದರೂ, ಅಂತಿಮವಾಗಿ ಇದರ ಹೊಣೆಗಾರಿಕೆ ಒಕ್ಕೂಟ ಸರ್ಕಾರದ ಮೇಲೆಯೇ ಇರುತ್ತದೆ ಮತ್ತು ಈ ವಿಷಯವನ್ನು ಸಮರ್ಥವಾಗಿ ನಡೆಸಲಾಗುತ್ತಿದೆ ಎಂಬ ತೃಪ್ತಿಯು ಮಹಾಮಂಡಲಿಗೆ ಉಂಟಾಗಬೇಕು. ಈ ರಾಜ್ಯ, ಆ ರಾಜ್ಯ ಅಥವಾ ಮತ್ತೊಂದು ರಾಜ್ಯದಲ್ಲಿ ಸಮರ್ಥ ಆಡಳಿತವಿದೆಯೆಂದರೆ, ಕೇಂದ್ರ ಸರ್ಕಾರವು ಮಧ್ಯೆ ಪ್ರವೇಶಿಸುವುದೇ ಇಲ್ಲ. ಇಡೀ ದೇಶದಲ್ಲಿ ಆಡಳಿತವು ಸಮರ್ಥವಾಗಿ ನಡೆಯುತ್ತಿದೆ ಎಂಬುದನ್ನು ತೀರ್ಮಾನಮಾಡಲು ಮಹಾಮಂಡಲಿಯೇ ಅಂತಿಮ ಹಾಗೂ ಏಕಮಾತ್ರ ತೀರ್ಪುಗಾರನಾಗಿರುತ್ತದೆ. ಮತ್ತು ಪ್ರತಿಯೊಂದು ರಾಜ್ಯವೂ, ಪ್ರಾಂತ್ಯವೂ ಮತ್ತು ಪ್ರತಿಯೊಂದು ಏಜೆನ್ಸಿಯೂ, ಅಷ್ಟರ ಮಟ್ಟಿಗೆ ಕೇಂದ್ರದ ಏಜೆನ್ಸಿಗಳಾಗಿರುತ್ತವೆ. ಈ ತಿದ್ದುಪಡಿಯ ಉದ್ದೇಶ ಬಹಳ ಸ್ಪಷ್ಟವಾಗಿದೆ. ರಾಜ್ಯಗಳ ಆಡಳಿತ ಯಂತ್ರವು ಸರಿಯಾಗಿ ನಡೆಯುತ್ತಿದ್ದರೆ, ನೀವು ಮಧ್ಯೆ ಪ್ರವೇಶಮಾಡಬೇಕಾಗಿರುವುದಿಲ್ಲ. ಅಲ್ಲಿ, ಅವು ಇರುವ ಹಾಗೆಯೇ ಇರಲಿ. ಅಂತಿಮವಾಗಿ ಎಲ್ಲ ಅಧಿಕಾರಗಳೂ ಬಳಿಯೇ ಇರುತ್ತವೆ – ಈ ನೀತಿಗೆ ನಾವೆಲ್ಲರೂ ಬದ್ಧರಾಗಿದ್ದೇವೆ. ಆದರೆ, ಇದರ ಅರ್ಥ ಮಹಾಮಂಡಲಿಯಾಗಲಿ ಅಥವಾ ಒಕ್ಕೂಟದ ಕಾರ್ಯಾಂಗವಾಗಲೀ ಪ್ರಯೋಗಗಳನ್ನು ಮಾಡುವುದರಲ್ಲಿಯೇ ನಿರತವಾಗಿರುವುದಿಲ್ಲ. ಹಾಗೇಕೆ ಮಾಡಬೇಕು? ಉದಾಹರಣೆಗೆ: ಅಂಚೆ ಅಥವಾ ಇನ್ನಾವುದೇ ಸೇವೆಯನ್ನು ರಾಜ್ಯಗಳು ಒದಗಿಸುತ್ತಿದ್ದರೆ, ಮಹಾಮಂಡಲಿಗೆ ಆ ಕ್ಷೇತ್ರದಲ್ಲಿ ಮಧ್ಯೆ ಪ್ರವೇಶಿಸುವ ಅಗತ್ಯವೇ ಇರುವುದಿಲ್ಲ. ಬದಲಿಗೆ, ರಾಜ್ಯದಲ್ಲಿರುವ ಏಜೆನ್ಸಿಯು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ, ಈ ವಿಷಯದಲ್ಲಿ ಅಂತಿಮ ಅಧಿಕಾರವು ಒಕ್ಕೂಟದ ಬಳಿ ಇರುತ್ತದೆ. ಇದು ಈ ತಿದ್ದುಪಡಿಯ ಹಿಂದಿರುವ ತತ್ತ್ವ ಮತ್ತು ಯಾವುದಾದರೂ ರಾಜ್ಯವು ಇದಕ್ಕೆ ಆಕ್ಷೇಪಿಸುತ್ತದೆ ಎಂದು ನಾನು ಭಾವಿಸುವುದಿಲ್ಲ. ಇದು ಅತಿ ಎನ್ನಿಸಬಹುದಾದ ಮಾರ್ಗಗಳಿಗೆ ಮಧ್ಯದಲ್ಲಿರುವ ಮಾರ್ಗ. ಇಲ್ಲಿ ಮತ್ತು ಈಗಲೇ ಮಹಾಮಂಡಲಿಯು ಈ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಒಂದು ವಿಶೇಷ ಏಜೆನ್ಸಿಯನ್ನು ಪ್ರಾರಂಭಿಸಬೇಕು. ಇದು

ಒಂದು ಅತಿಯಾದರೆ, ಇನ್ನೊಂದು ದೃಷ್ಟಿಯ ಪ್ರಕಾರ ಈಗಿರುವ ವ್ಯವಸ್ಥೆಯೇ, ಅದು ತೃಪ್ತಿಕರವಾಗಿರುವ ಎಡೆಗಳಲ್ಲಿಯಾದರೂ, ಮುಂದುವರಿಯಬೇಕು. ಈ ಖಂಡದ ದೃಷ್ಟಿಯೆಂದರೆ, ಏಜೆನ್ಸಿಯು ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ಅಸಮರ್ಥವಾಗಿದೆ ಎಂದು ಮಹಾಮಂಡಲಿಯ ಸರ್ಕಾರಕ್ಕೆ ಎನಿಸಿದರೆ, ತೀರ್ಮಾನವನ್ನು ಮಹಾಮಂಡಲಿಯ ಸರ್ಕಾರವೇ ತೆಗೆದುಕೊಳ್ಳಬೇಕು ಮತ್ತು ಅಲ್ಲಿ ಮಧ್ಯೆ ಪ್ರವೇಶಿಸಬೇಕೆ, ಬೇಡವೆ ಎನ್ನುವುದನ್ನು ತೀರ್ಮಾನಿಸುವುದು ಮಹಾಮಂಡಲಿಯ ಅಧಿಕಾರವಾಗಿರುತ್ತದೆ. ಈ ವಿಷಯದಲ್ಲಿ ಅಪಾರ್ಥಗಳಿಗೆ ಎಡೆಯಿರಬಾರದು. ಭಾರತ ಸರ್ಕಾರದ ಅಧಿನಿಯಮದ ೧೨೬ನೆಯ ಪ್ರಕರಣದ ಹಿಂದಿರುವ ಉದ್ದೇಶವು ಈ ಸಂವಿಧಾನದಿಂದ ದೂರ ಸರಿದಿದೆ. ಇದು ರಾಜ್ಯಗಳು ಹಾಗೂ ಒಕ್ಕೂಟದ ಪ್ರಾಧಿಕಾರಗಳ ನಡುವಿನ ಪ್ರಶ್ನೆಯಲ್ಲ. ಇದು ಒಕ್ಕೂಟದ ಜವಾಬ್ದಾರಿಯ ಪ್ರಶ್ನೆಯಾಗಿದೆ. ಅದು ದೂರದೃಷ್ಟಿಗೆ ಸೇರಿದ ವಿಷಯವಾಗಿದೆ. ಒಂದು ವಿಷಯವನ್ನು ರಾಜ್ಯದ ಏಜೆನ್ಸಿಯೊಂದು ಸಮರ್ಥವಾಗಿ ನಿರ್ವಹಿಸುತ್ತಿದ್ದರೆ, ಆ ಏಜೆನ್ಸಿಯ ಸೇವೆಯನ್ನು ಮುಂದುವರಿಸಿಕೊಂಡು ಹೋಗಬೇಕು. ಈ ಖಂಡ ಹಾಗೂ ಹಿಂದಿನ ಖಂಡದ ಹಿಂದಿರುವ ತತ್ತ್ವವೆಂದರೆ, ಕಾನೂನುಗಳನ್ನು ಜಾರಿಮಾಡುವಲ್ಲಿ, ಅಂತಿಮ ಹೊಣೆಗಾರಿಕೆಯು ಒಕ್ಕೂಟದ್ದೇ ಆಗಿರುತ್ತದೆ ಮತ್ತು ಮಹಾಮಂಡಲಿಯ ಮಾತ್ರವಾಗಿರುತ್ತದೆ ಹಾಗೂ ಇಲ್ಲಿ, ಕಾರ್ಯನಿರ್ವಹಣಾಧಿಕಾರವು ಶಾಸಕಾಂಗದ ಅಧಿಕಾರದಿಂದ ದೂರ ಸರಿದಿರುವುದಿಲ್ಲ. ಈ ಅಭಿಪ್ರಾಯದ ಮೇಲೆ, ನಾನು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಾಡಿರುವ ಈ ಮಾರ್ಪಾಟಿಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆಯೇ ಹೊರತು ಇನ್ನಾವ ಕಾರಣದಿಂದಲೂ ಅಲ್ಲ.

**ಶ್ರೀ ಕೆ. ಸಂತಾನಮ್ :** ಶ್ರೀ ಅಲ್ಲಾದಿಯವರು ಮಹಾಮಂಡಲಿಯ ವ್ಯವಸ್ಥೆಯ ತತ್ತ್ವವನ್ನು ಸ್ಪಷ್ಟವಾಗಿ ವಿವರಿಸಿರುವುದರಿಂದ ನನಗೆ ಸಂತೋಷವಾಗಿದೆ. ನಾನೂ ಅದೇ ಹಾದಿಯಲ್ಲಿ ಮುಂದುವರಿಯುತ್ತೇನೆ. ಆದರೆ, ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಸೂಚಿಸಿದ ಒಂದು ಅಂಶದ ಮೇಲೆ ನಾವು ಗಮನವನ್ನು ಹರಿಸಬೇಕಾಗಿದೆ. ರಾಜ್ಯಗಳು ಪ್ರಜಾತಂತ್ರದ ವ್ಯವಸ್ಥೆಯೊಳಕ್ಕೆ ಬರುತ್ತಿರುವುದರಿಂದ ಕೇಂದ್ರದ ವಿಷಯಗಳ ನಿರ್ವಹಣೆಯನ್ನು ಅವುಗಳ ಕೈಯಲ್ಲಿಯೇ ನೀಡುವುದು ಆಕ್ಷೇಪಣಾರ್ಹವಾಗುವುದಿಲ್ಲ ಎಂದು ಹೇಳಿದರು. ಮಾನ್ಯರೆ, ಇದು ಸರಿಯೆಂದು ನನಗೆ ತೋರುವುದಿಲ್ಲ. ರಾಜ್ಯಗಳು ಪ್ರಜಾತಂತ್ರಕ್ಕೆ ಹೆಚ್ಚು ಹೆಚ್ಚು ಹತ್ತಿರವಾದಂತೆ ಪ್ರಾಂತೀಯ ಮತ್ತು ಮಹಾಮಂಡಲಿಗಳಿಗೆ ಸೇರಿದ ವಿಷಯಗಳು ಹೆಚ್ಚು ಸ್ಪಷ್ಟವಾಗುತ್ತ ಬರಬೇಕು. ಇದು ನನ್ನ ದೃಷ್ಟಿ. ರಾಜ್ಯದ ಆಡಳಿತಗಾರರು, ಅವರ ದಿವಾನರು ಮಹಾಮಂಡಲಿಯನ್ನು ಯಾವಾಗ ಧಿಕ್ಕರಿಸುತ್ತಾರೆಯೋ, ಆಗ ಮಹಾಮಂಡಲಿ ಅವರೊಡನೆ ವ್ಯವಹರಿಸುವುದು ಸುಲಭವಾಗುತ್ತದೆ. ಏಕೆಂದರೆ, ಮಹಾಮಂಡಲಿಯ ಸರ್ಕಾರಕ್ಕೆ ರಾಜ್ಯಗಳ ಜನತೆಯ ಬೆಂಬಲ ದೊರೆಯುತ್ತದೆ. ಆದರೆ ಮಹಾಮಂಡಳಿಯ ವಿಷಯಗಳು ಪ್ರಜಾತಂತ್ರಕ್ಕೆ ಒಳಪಟ್ಟ ರಾಜ್ಯಗಳಲ್ಲಿದ್ದರೆ, ಆಗ ಜನತೆಗೆ ಅಲ್ಲಿ ತಮ್ಮದೇ ಆದ ಹಿತಾಸಕ್ತಿಗಳಿರುತ್ತವೆ ಮತ್ತು ಅವರು ಒಕ್ಕೂಟದ ಪ್ರಭುತ್ವವನ್ನು ವಿರೋಧಿಸಬಹುದು. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಮಹಾಮಂಡಲಿಯ ಎಲ್ಲ ಯೋಜನೆಗಳಲ್ಲಿ ಮಹಾಮಂಡಲಿಯ ಮತ್ತು ಘಟಕಗಳ ಅಧಿಕಾರಗಳ ನಡುವೆ ವ್ಯತ್ಯಾಸವು ಸ್ಪಷ್ಟವಾಗಿರಬೇಕು. ಮಹಾಮಂಡಲಿಗೆ ಸೇರಿರುವ ಎಲ್ಲ ವಿಷಯಗಳಲ್ಲಿಯೂ ಮಹಾಮಂಡಲಿಯ ಸರ್ಕಾರದ ಅಧಿಕಾರಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಬೇಕು ಮತ್ತು ಸ್ವಾಯತ್ತ ಘಟಕಗಳಿಗೆ ಸೇರಿದ ವಿಷಯಗಳಲ್ಲಿ ಮಾತ್ರ ಕಾರ್ಯನಿರ್ವಾಹಕ ಅಧಿಕಾರವಿರಬೇಕು. ಈ ವ್ಯತ್ಯಾಸವನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಎಷ್ಟರವರೆಗೆ ಕೊಂಡೊಯ್ದಿದ್ದಾರೆಂದರೆ, ಅಲ್ಲಿನ ಸಂಯುಕ್ತ ನ್ಯಾಯಾಲಯಗಳು ಸಂಯುಕ್ತ ಕಾನೂನುಗಳಿಗೆ ಸಂಬಂಧಿಸಿದ ಪ್ರಕರಣಗಳನ್ನೂ, ರಾಜ್ಯಗಳ ನ್ಯಾಯಾಂಗವು ರಾಜ್ಯಗಳ ಕಾನೂನಿಗೆ ಸಂಬಂಧಿಸಿದ ಪ್ರಕರಣಗಳನ್ನೂ ನೋಡಿಕೊಳ್ಳುತ್ತವೆ. ಕಾಲಕಳೆದಂತೆ ಭಾರತದ ಮಹಾಮಂಡಲಿಯು ಅದೇ ನೀತಿಯನ್ನು ಅನುಸರಿಸಬೇಕಾಗುವುದು. ಮಹಾಮಂಡಲಿಯ ಬಲವು ಅದರಲ್ಲಿ ಸೇರಿರುವ ಘಟಕಗಳ ಸಂಖ್ಯೆಯ ಮೇಲೆ ನಿಂತಿರುವುದಿಲ್ಲವೆಂದು

ಹೇಳಿದ ಶ್ರೀ ರಾಮಸ್ವಾಮಿ ಮುದಲಿಯಾರ್ ಅವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಭಾರತೀಯ ಮಹಾಮಂಡಲಿಗೆ ೪-೫ ರಾಜ್ಯಗಳು ಮಾತ್ರ ಸೇರಿರಲಿ, ಎಲ್ಲಿಯವರೆಗೆ ಅದು ತನ್ನ ಅಧೀನ ರಾಜ್ಯಗಳ ಮೇಲೆ ಸಂಪೂರ್ಣವಾದ ಅಧಿಕಾರವನ್ನು ಹೊಂದಿರುತ್ತದೆಯೋ ಅಲ್ಲಿಯವರೆಗೆ ಅದು ಖಂಡಿತವಾಗಿಯೂ ಸಶಕ್ತವಾಗಿರುತ್ತದೆ. ಈ ಚರ್ಚೆಯಲ್ಲಿ, ಅದರಲ್ಲಿಯೂ ಮಹಾಮಂಡಲಿಯ ಬಲದ ವಿಷಯವನ್ನು, ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಪ್ರಸ್ತಾಪಿಸಿದ್ದು ನನಗೆ ವಿಷಾದವಿದೆ. ಯಾವ ವಿಷಯಗಳು ಮಹಾಮಂಡಲಿಗೆ ಸೇರಬೇಕು ಮತ್ತು ಯಾವುವು ರಾಜ್ಯಗಳಿಗೆ ಸೇರಬೇಕು ಎನ್ನುವುದು ಬೇರೆಯದೇ ಆದ ವಿಷಯವಾಗಿದ್ದು, ನಮ್ಮಲ್ಲಿ ಹಲವರು ಶ್ರೀ ರಾಮಸ್ವಾಮಿ ಮುದಲಿಯಾರ್ ಅವರೊಡನೆ ಸಹಮತವನ್ನು ಹೊಂದಬೇಕಾಗುತ್ತದೆ. ಆದರೆ ಈ ಒಂದು ಖಂಡಕ್ಕೆ ಅದರೊಡನೆ ಯಾವ ಸಂಬಂಧವೂ ಇಲ್ಲ. ನಾವು ಮಹಾಮಂಡಲಿಯ ವಿಷಯಗಳನ್ನು ವ್ಯಾಖ್ಯಾನಿಸುತ್ತೇವೆ ಎಂದು ಇಟ್ಟುಕೊಳ್ಳಿ. ಇವುಗಳ ಮೇಲೆ ಎಲ್ಲಿಯವರೆಗೆ ಮಹಾಮಂಡಲಿಯು ತನ್ನ ಅಧಿಕಾರವನ್ನು ಹೊಂದಿರಬಹುದು? ಇದು ಈ ಖಂಡದ ವಿಷಯ. ಶ್ರೀ ಅಲ್ಲಾದಿಯವರು ಸಾಮಾನ್ಯ ನಿಯಮಗಳನ್ನು ಹೇಳಿ ಅವುಗಳನ್ನು ವಿವರಿಸಿದರು. ಮಹಾಮಂಡಲಿಯ ರಾಜ್ಯಗಳ ಕೈಗೆ ಅಧಿಕಾರವನ್ನು ಒಪ್ಪಿಸಿದರೆ, ಆ ರಾಜ್ಯಗಳು ಪ್ರಜಾತಂತ್ರಕ್ಕೆ ಒಳಪಟ್ಟ ಮೇಲೆ, ಈ ಕ್ರಮ ಇನ್ನೂ ಹೆಚ್ಚು ಅಪಾಯಕಾರಿಯಾಗುತ್ತದೆ ಎಂದು ನಾನು ಹೇಳುತ್ತೇನೆ. ಅಂತಹ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದ ದೇಶಪ್ರೇಮಕ್ಕೂ ಮತ್ತು ಪ್ರಾಂತ್ಯಗಳ ಮಟ್ಟದ ದೇಶಪ್ರೇಮಕ್ಕೂ ಘರ್ಷಣೆಗಳು ಉದ್ಭವಿಸುತ್ತವೆ. ಸ್ಥಳೀಯ ಘರ್ಷಣೆಗಳು ಬಹು ಅಪಾಯಕಾರಿಯಾಗಿರುತ್ತವೆ. ಪ್ರಾಂತೀಯ ಪ್ರಾಧಿಕಾರವು ನಾವು ಯಾವುದನ್ನು ಮೊದಲಿನಿಂದಲೂ ತಡೆಯಲು ಪ್ರಯತ್ನಿಸುತ್ತಿದ್ದೇವೆಯೋ, ಆ ವಿಚ್ಛಿದ್ರಕಾರಿ ಶಕ್ತಿಗಳನ್ನು ಹೆಚ್ಚು ಕ್ರಿಯಾಶೀಲವನ್ನಾಗಿಸುತ್ತದೆ. ಆದ್ದರಿಂದ ಮಹಾಮಂಡಲಿಗೆ ಸೇರಿದ ಎಲ್ಲ ವಿಷಯಗಳಲ್ಲಿಯೂ, ತನಗೆ ಅಗತ್ಯವೆಂದೆನಿಸಿದಾಗ ಒಕ್ಕೂಟವು ಕಾರ್ಯನಿರ್ವಹಣಾಧಿಕಾರವನ್ನು ತಾನೇ ಕೈಗೆ ತೆಗೆದುಕೊಳ್ಳಬಹುದು ಎಂಬುದನ್ನು ನಾವು ಸ್ಪಷ್ಟಪಡಿಸೋಣ. ಸದ್ಯಕ್ಕೆ ಆ ಅಧಿಕಾರಗಳನ್ನು ರಾಜ್ಯಗಳಿಗೆ ಒಪ್ಪಿಸಿದ್ದು ಅಗತ್ಯಬಿದ್ದಾಗ ಒಕ್ಕೂಟವು ಅವುಗಳನ್ನು ಮರಳಿ ಪಡೆಯಬೇಕು. ರಾಜ್ಯಗಳಿಗೆ ನೀಡಿದ ಹೆಚ್ಚು ಹೆಚ್ಚು ಅಧಿಕಾರಗಳು ಜನತೆಯ ಕೈಯಲ್ಲಿರುತ್ತವೆ ಎಂಬ ವಾದವು ಯಾವುದೇ ಬೆಲೆಯನ್ನೂ ಉಳ್ಳದ್ದಲ್ಲ. ವಾಸ್ತವವಾಗಿ ಅವು ರಾಜ್ಯಗಳಿಗೆ ಹೆಚ್ಚು ಅಧಿಕಾರಗಳನ್ನು ನೀಡಬಾರದು ಎಂಬುದನ್ನು ಸೂಚಿಸುತ್ತವೆ. ಆದ್ದರಿಂದ ಮಹಾಮಂಡಲಿಗಾಗಿ ಒಕ್ಕೂಟದ ಅಧಿಕಾರಗಳನ್ನು ನಾವು ಸಂರಕ್ಷಿಸೋಣ. ಅಂತಿಮ ಕರಡನ್ನು ಸದನದಲ್ಲಿ ಮಂಡಿಸಿದಾಗ ಒಕ್ಕೂಟದ ವಿಷಯಗಳ ಪಟ್ಟಿಯಲ್ಲಿ ವ್ಯಾಖ್ಯಾನಿಸಿರುವ ಹಾಗೆ ಮಹಾಮಂಡಲಿಯ ಅಧಿಕಾರಗಳನ್ನು ಕುರಿತು ಯಾವುದೇ ಸಂಶಯವೂ ಇರತಕ್ಕದ್ದಲ್ಲ.

**ಶ್ರೀ ಗೋಪೀಕೃಷ್ಣ ವಿಜಯ ವರ್ಗೀಯ :** *[ಮಾನ್ಯ ಸಭಾಧ್ಯಕ್ಷರೆ, ನಾನು ಭಾರತೀಯ ರಾಜ್ಯವೊಂದರ ಪ್ರತಿನಿಧಿಯಾಗಿ ಬಂದಿದ್ದೇನೆ. ನಮ್ಮ ದೇಶವು ಸದೃಢ ಕೇಂದ್ರವನ್ನು ಹೊಂದಿರಬೇಕು ಎಂಬುದು ನನ್ನ ಉದ್ದೇಶ. ದುರದೃಷ್ಟದಿಂದ, ನಮ್ಮ ದೇಶವು ಹತ್ತು ಹಲವು ಭಾಗಗಳಿಂದ ಕೂಡಿದೆ. ಕೆಲವು ಭಾರತೀಯ ರಾಜ್ಯಗಳಲ್ಲಿ, ಕೆಲವೊಂದು ವಿಭಾಗಗಳಲ್ಲಿ ಮತ್ತು ಪ್ರಾಂತ್ಯಗಳಲ್ಲಿಯೂ ಕೂಡ, ಸ್ಥಳೀಯ ಸ್ವಾಯತ್ತತೆಗಾಗಿ ಬೇಡಿಕೆಯ ಅಲೆ ಎದ್ದಿದೆ. ಇದು ನಮ್ಮ ದೇಶವನ್ನು ದುರ್ಬಲಗೊಳಿಸುತ್ತದೆ. ಪರಿಣಾಮವಾಗಿ ಕೇಂದ್ರವು ಸದೃಢವಾಗಿರಲು ಸಾಧ್ಯವಾಗುವುದಿಲ್ಲ.

ಎಲ್ಲ ರಾಜ್ಯಗಳವರೂ ಸೇರಿದಂತೆ ನಾವೆಲ್ಲರೂ, ನಮ್ಮ ನಮ್ಮ ಹಕ್ಕುಗಳನ್ನು ಕೇಂದ್ರಕ್ಕೆ ಒಪ್ಪಿಸಿ ಕೇಂದ್ರಕ್ಕೆ ಗರಿಷ್ಠ ಅಧಿಕಾರವನ್ನು ನೀಡಬೇಕು ಮತ್ತು ತನ್ಮೂಲಕ ದೇಶವನ್ನು ಬಲಪಡಿಸಬೇಕು. ಈ ಪರಿಸ್ಥಿತಿಯಲ್ಲಿ ರಾಜ್ಯಗಳ ಕಾರ್ಯಾಂಗದ ವ್ಯಾಪ್ತಿಯನ್ನು ಹೆಚ್ಚು ವಿಸ್ತೃತಗೊಳಿಸಬಾರದು. ಶ್ರೀ ಮುದಲಿಯಾರ್ ಅವರು ಸಲಹೆಯನ್ನು ಮಾಡಿದಂತೆ, ಕೇಂದ್ರಕ್ಕೆ ನೀಡಿರುವ ವಿಷಯಗಳ ಸಂಖ್ಯೆಯಷ್ಟೆ ಸದೃಢ ಕೇಂದ್ರವನ್ನು ಹೊಂದಲು ಸಾಕಾಗುವುದಿಲ್ಲ. ಇದು ಸರಿಯಾದುದೇ ಆದರೂ, ಕೆಲವು ವಿಷಯಗಳನ್ನು ಕೇಂದ್ರಕ್ಕೆ ವಹಿಸಬೇಕಾಗುತ್ತದೆ

ಮತ್ತು ಅವುಗಳ ಮೇಲೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವ ಅಧಿಕಾರವನ್ನು ರಾಜ್ಯಗಳ ಕೈಯಲ್ಲಿ ಇಡಬಾರದು.

ರಾಜ್ಯಗಳು ಹಾಗೂ ಪ್ರಾಂತ್ಯಗಳಲ್ಲಿರುವ, ಕೇಂದ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಕೇಂದ್ರಕ್ಕೇ ಒಪ್ಪಿಸಬೇಕು. ರಾಜ್ಯಗಳು ಹಾಗೂ ಪ್ರಾಂತ್ಯಗಳ ಬಳಿ ಸಾಧ್ಯವಾದಷ್ಟೂ ಕನಿಷ್ಠ ಅಧಿಕಾರವು ಇರಬೇಕು. ಅವುಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುವುದು ಉಚಿತವಾಗುವುದಿಲ್ಲ. ಸ್ವಿಟ್ಜರ್‌ಲೆಂಡ್ ಮತ್ತು ಇತರ ಸಣ್ಣಸಣ್ಣದೇಶಗಳಲ್ಲಿ ಕಾರ್ಯಾಂಗದ ಹೆಚ್ಚಿನ ಅಧಿಕಾರಗಳನ್ನು ಪ್ರಾಂತ್ಯಗಳಿಗೆ ನೀಡಲಾಗಿದೆ. ಆದರೆ, ನಮ್ಮ ದೇಶದಲ್ಲಿ ಅದು ಕೆಲವು ತೊಂದರೆಗಳಿಗೆ ಕಾರಣವಾಗುವುದರಿಂದ ನಾವು ಹಾಗೆ ಮಾಡಲಾಗುವುದಿಲ್ಲ. ಆದ್ದರಿಂಗ ಅತಿಯೆನಿಸುವಷ್ಟು ಅಧಿಕಾರವನ್ನು ರಾಜ್ಯಗಳಿಗೆ ವಹಿಸಿಕೊಡತಕ್ಕದ್ದಲ್ಲ. ರಾಜ್ಯಗಳಲ್ಲಿ ನಡೆಯಬೇಕಾದ ಕೇಂದ್ರದ ಅಧಿಕಾರವು ಕೇಂದ್ರದ ವ್ಯವಸ್ಥೆಯ ಅಡಿಯಲ್ಲಿಯೇ ನಡೆಯಬೇಕು. ಆದರೆ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸಲಹೆ ಮಾಡಿದ ಹಾಗೆ, ಈ ಖಂಡಕ್ಕೆ ಉಪಬಂಧವೊಂದನ್ನು ಸೇರಿಸುವ ಅಗತ್ಯವಿಲ್ಲ. ನಾವು ಅದನ್ನು ಆಕ್ಷೇಪಿಸುವುದೂ ಇಲ್ಲ. ಆದರೆ, ದೇಶದಲ್ಲಿ ಸದೃಢವಾದ ಕೇಂದ್ರವನ್ನು ಸೃಷ್ಟಿಮಾಡುವುದು ಸರಿಯಾದ ಕ್ರಮ ಎಂದು ನಾನು ಭಾವಿಸುತ್ತೇನೆ. ಅದರ ಬಗೆಗೆ ರಾಜ್ಯಗಳು ಗೊಣಗಾಡಬಾರದು. ನಾವು ಬಲಯುತವಾದ ಕೇಂದ್ರ ಸರ್ಕಾರವನ್ನು ಹೊಂದಬೇಕಾದರೆ, ನಾವು ಕೇಂದ್ರಕ್ಕೆ ಎಲ್ಲ ವಿಷಯಗಳನ್ನು ವಹಿಸಿಕೊಡಬೇಕು. ಅದಿಲ್ಲದೆ ಇದ್ದರೆ, ಕೇಂದ್ರ ಸರ್ಕಾರವು ಪ್ರಗತಿಯನ್ನು ಸಾಧಿಸಲಾರದು. ಆದುದರಿಂದ, ಕೇಂದ್ರ ಸರ್ಕಾರವು ಬಲಯುತವಾಗಿರಬೇಕು ಎಂದು ರಾಜ್ಯಗಳು ಮತ್ತು ಪ್ರಾಂತ್ಯಗಳು ಬಯಸುವುದಾದರೆ, ಕೇಂದ್ರಕ್ಕೆ ಅವು ಗರಿಷ್ಠ ಅಧಿಕಾರವನ್ನು ನೀಡಬೇಕು. ಇದು ಅವುಗಳ ಕೈಯಲ್ಲಿಯೇ ಇದೆ. ನಾವು ಕೇಂದ್ರವನ್ನು ಬಲಪಡಿಸಬೇಕು ಮತ್ತು ನಿರ್ದೇಶನ ನೀಡುವ ಹಾಗೂ ತನಿಖೆ ಮಾಡುವ ಅಧಿಕಾರವು ಮಹಾಮಂಡಲಿಯ ಸರ್ಕಾರಕ್ಕೆ ಇರಬೇಕು. ರಾಜ್ಯಗಳು ಆದಷ್ಟೂ ಹೆಚ್ಚು ಅಧಿಕಾರಗಳನ್ನು ಪಡೆಯುವತ್ತ ತಮ್ಮ ದೃಷ್ಟಿಯನ್ನು ಹರಿಸಬಾರದು. ಆದುದರಿಂದ, ನಾನು ಈ ತಿದ್ದುಪಡಿಯನ್ನು ವಿರೋಧಿಸುವುದಿಲ್ಲ. ಈಗ ಇರುವ ಹಾಗೆಯೇ, ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಅಂಗೀಕರಿಸಬೇಕು. ಆದರೂ, ನಮ್ಮ ಉದ್ದೇಶ, ಕೇಂದ್ರವನ್ನು ಸಾಧ್ಯವಾದಷ್ಟೂ ಬಲಪಡಿಸಬೇಕು.

**ಶ್ರೀ ಆರ್.ಕೆ. ಸಿಧ್ವಾ :** ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಭಾಷಣದ ಅನಂತರ, ಶ್ರೀ ಅಲ್ಲಾದಿಯವರು ಈ ನಿರ್ಣಯದ ಉದ್ದೇಶವೇನಿರಬೇಕು ಎಂಬುದನ್ನು ಬಹಳ ಚೆನ್ನಾಗಿ ವಿವರಿಸಿದರು. ಒಳ್ಳೆಯದಾಯಿತು. ಮಾನ್ಯರೆ, ಈ ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಿದುದಕ್ಕಾಗಿ ರಾಜ್ಯಗಳ ಪ್ರತಿನಿಧಿಗಳಿಗೆ ಅಭಿನಂದಿಸುತ್ತೇನೆ ಮತ್ತು ಈ ವಿಷಯದಲ್ಲಿ ದಾರಿ ತೋರಿಸಿದ ಇತರ ರಾಜ್ಯಗಳಿಗೂ, ಇಲ್ಲಿಗೆ ಉಳಿದ ರಾಜ್ಯಗಳೂ ಪ್ರವೇಶಿಸುವಂತೆ ಮಾಡಿದ ರಾಜ್ಯಗಳಿಗೂ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ದೇಶದ ಒಂದು ಭಾಗವು ಪ್ರಜಾಸತ್ತೆಯ ಹಾದಿಯನ್ನು ಹಿಡಿದಿರುವಾಗ, ಸುಮಾರು ೧೦ ಕೋಟಿಯಷ್ಟು ಇರುವ ಇನ್ನೊಂದು ಭಾಗವು ನಿರಂಕುಶಾಧಿಕಾರದ ಆಡಳಿತದಲ್ಲಿರುವುದು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ನಾನು ಹೇಳಬಯಸುತ್ತೇನೆ. ಭಾರತವು ಸ್ವತಂತ್ರವಾದ ಮೇಲೆ ರಾಜ್ಯಗಳಲ್ಲಿರುವ ನಮ್ಮ ಸಹೋದರರೂ ಸ್ವತಂತ್ರರಾಗುತ್ತಾರೆ ಎಂಬುದು ನಮ್ಮ ನೀತಿಯಾಗಿತ್ತು ಮತ್ತು ಹಾಗೆ ನಾವು ಘೋಷಣೆಯನ್ನು ಮಾಡಿದ್ದೆವು ಕೂಡ. ಆದುದರಿಂದ, ಈ ಪವಿತ್ರ ಸದನದಲ್ಲಿ ನಾವೆಲ್ಲರೂ, ಅಂದರೆ, ಆಡಳಿತಗಾರರು, ಅವರ ಪ್ರತಿನಿಧಿಗಳು ಎಲ್ಲರೂ ಸೇರಿರುವಾಗ, ಅದು ನಮ್ಮ ಉದ್ದೇಶ ಹಾಗೂ ಬಯಕೆಯಾಗಿದೆ ಎಂಬುದನ್ನು ಅವರಿಗೆ ನಾವು ಹೇಳಬೇಕು. ಕೆಲವು ಆಡಳಿತಗಾರರು ಕೆಲವು ಭಾಗದಲ್ಲಿ ಪ್ರಜಾತಂತ್ರವಿದ್ದು ಮತ್ತೆ ಕೆಲವು ಕಡೆ ನಿರಂಕುಶಾಧಿಕಾರವಿರಬಾರದು ಎಂಬುದನ್ನು ಮನವರಿಕೆ ಮಾಡಿಕೊಂಡಿರುವುದರಿಂದ ನನಗೆ ಸಂತೋಷವಾಗಿದೆ. ನಾನು ಹಲವು ರಾಜ್ಯಗಳನ್ನು ಕುರಿತು ದೀರ್ಘ ವಿಶ್ಲೇಷಣೆಗೆ ತೊಡಗುವುದಿಲ್ಲ. ಆದರೆ, ಕೆಲವು ರಾಜ್ಯಗಳಲ್ಲಿ

ಸ್ಥಳೀಯ ಸಂಸ್ಥೆಗಳು, ಪುರಸಭೆಗಳು ಇಲ್ಲದ ರಾಜ್ಯಗಳಲ್ಲಿ, ಶಾಸನಸಭೆಗಳಿದ್ದು ಅವುಗಳ ಬಹುತೇಕ ಸದಸ್ಯರು ನಾಮನಿರ್ದೇಶಿತರಾಗಿದ್ದಾರೆಂಬುದನ್ನು ನಾನು ಬಲ್ಲೆ. ಪುರಸಭೆ ಮತ್ತು ಶಾಸನಸಭೆಗಳೆರಡರ ಎಲ್ಲ ಸದಸ್ಯರೂ ಚುನಾಯಿತರಾಗಬೇಕು. ನಾಮನಿರ್ದೇಶನದ ಕಾಲ ಮುಗಿದುಹೋಗಿದೆ ಮತ್ತು ನಾವು ಪ್ರಜಾತಂತ್ರದ ಪ್ರಕಾರ ನಡೆದುಕೊಳ್ಳಬೇಕೆಂದಿದ್ದರೆ, ಈ ಎಲ್ಲ ನಾಮನಿರ್ದೇಶನವನ್ನು ಕೊನೆಗಾಣಿಸಿ. ರಾಜರು ಚುನಾಯಿತ ಪ್ರತಿನಿಧಿಗಳ ಶಾಸನಸಭೆಯನ್ನು ಹೊಂದಿರಬೇಕು ಮತ್ತು ಪ್ರಾಂತೀಯ ಶಾಸನಸಭೆಗಳ ಸದಸ್ಯರಿಗೆ ಇರುವ ಅಧಿಕಾರವನ್ನು ಈ ರಾಜರು ತಮ್ಮ ಶಾಸನಸಭೆಯ ಸದಸ್ಯರಿಗೂ ನೀಡಬೇಕು ಎಂಬ ಸಲಹೆಯನ್ನು ನಾನು ನೀಡುತ್ತೇನೆ. ಚುನಾಯಿತ ಪ್ರತಿನಿಧಿಗಳು ಇಲ್ಲದಿರುವ ಪುರಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಬೇಕು. ಈ ಸಂಸ್ಥೆಗಳೇ ಇಲ್ಲದಿರುವ ಕಡೆ ಅವುಗಳನ್ನು ಸ್ಥಾಪಿಸಬೇಕು. ಮುದ್ರಣಶಾಲೆಯನ್ನು ಸ್ಥಾಪಿಸಲು ಅವಕಾಶವನ್ನು ನೀಡದ ಒಂದು ರಾಜ್ಯವನ್ನು ನಾನು ಬಲ್ಲೆ. ಆದರೆ, ನಾನು ಆ ರಾಜ್ಯದ ಹೆಸರನ್ನು ಹೇಳಲಿಚ್ಛಿಸುವುದಿಲ್ಲ. ಅದು ಸುಮಾರಾಗಿ ದೊಡ್ಡ ರಾಜ್ಯ. ಈ ವಿಷಯದಲ್ಲಿ ಅಪಶ್ರುತಿಯನ್ನು ಹಾಡಲು ಬಯಸುವುದಿಲ್ಲ. ನಮ್ಮ ಉತ್ಸಾಹವೂ ಉತ್ತಮವಾಗಿದ್ದು, ನಾವು ರಾಜ್ಯದ ಜನತೆಗೆ ನೀಡಿರುವ ವಾಗ್ದಾನವನ್ನು ಜಾರಿಗೆ ತರಬೇಕಾದ ಕಾಲವು ಸಮೀಪಿಸಿದೆಯೆಂದು ನಾನು ರಾಜರುಗಳಿಗೆ ತಿಳಿಸಬಯಸುತ್ತೇನೆ. ನಾವು ನಮಗೆ ಆ ಸ್ವಾತಂತ್ರ್ಯವು ದೊರಕಿದಾಗ ಜನತೆಗೂ ಸ್ವಾತಂತ್ರ್ಯ ದೊರೆಯುತ್ತದೆ ಎಂದು ಅವರಿಗೆ ಹೇಳುತ್ತಲೇ ಬಂದಿದ್ದೇವೆ. ಆದ್ದರಿಂದ ರಾಜ್ಯಗಳು ಕೂಡ ದೇಶದ ಇತರ ಭಾಗಗಳು ಆಳಲ್ಪಡುವ ರೀತಿಯಲ್ಲಿಯೇ, ಆಳಲ್ಪಡುವಂತೆ ಮಾಡಲು ನಮ್ಮ ಕೈಲಾದುದೆಲ್ಲವನ್ನೂ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

**ಶ್ರೀ ಎಮ್.ಎಸ್. ಅನೆ (ಡೆಕ್ಕನ್ ರಾಜ್ಯಗಳು) :** ಮಾನ್ಯ ಸಭಾಧ್ಯಕ್ಷರೆ, ಈಗ ಚರ್ಚಿಸಲಾಗುತ್ತಿರುವ ತಿದ್ದುಪಡಿಯು ಕೆಲವು ಪ್ರಮುಖ ರಾಜ್ಯಗಳ ಸಚಿವರ ಹಾಗೂ ಬ್ರಿಟಿಷ್ ಭಾರತವನ್ನು ಪ್ರತಿನಿಧಿಸುತ್ತಿರುವ ಅಧಿಕಾರೇತರ ಸದಸ್ಯರ ನಡುವೆ ಆದ ರಾಜಿಯ ಫಲ. ಈ ರಾಜ್ಯಗಳ ಸಚಿವರಲ್ಲಿ ಕೆಲವರು ಇಂದು ಈಗ ನಮ್ಮೊಂದಿಗೆ ಇದ್ದಾರೆ ಮತ್ತು ಸಂವಿಧಾನ ರಚನಾಸಭೆಯಲ್ಲಿದ್ದು ನಮಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಈ ರಾಜಿಯ ಪರಿಣಾಮಗಳನ್ನು ಸರಿಯಾಗಿ ವಿವರಿಸಬಲ್ಲವರೆಂದರೆ ರಾಜಿ ಸಂಧಾನದಲ್ಲಿ ಭಾಗಿಯಾಗಿದ್ದವರೆ. ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಏನನ್ನು ಹೇಳುತ್ತಾರೆಂಬುದನ್ನು ನಾವು ಇನ್ನೂ ಕೇಳಬೇಕಾಗಿದೆ. ಆದರೆ, ರಾಜೀ ಸಂಧಾನದಲ್ಲಿ ಭಾಗಿಯಾಗಿದ್ದ ಸಚಿವವರ್ಗದಲ್ಲಿದ್ದ ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಈ ಸಂಧಾನಕ್ಕೆ ಒಪ್ಪಿಕೊಂಡಾಗ ತಮ್ಮ ಮನಸ್ಸಿನಲ್ಲಿ ಇದ್ದ ಭಾವನೆಗಳನ್ನು ಈಗಾಗಲೇ ತಿಳಿಸಿದ್ದಾರೆ. ಅದನ್ನೇ ಈ ತಿದ್ದುಪಡಿಗಳಲ್ಲಿ ಸೇರಿಸಲಾಗಿದೆ. ನಾನು ಸಾಮಾನ್ಯವಾದ ಒಂದೆರಡು ವಿಷಯಗಳನ್ನು ಕುರಿತು ಮಾತನಾಡಲಿದ್ದೇನೆ. ಅದರಲ್ಲಿ ವಿಶಿಷ್ಟವಾದ ಅಂಶಗಳೇನೂ ಇರುವುದಿಲ್ಲ. ಸಂಯುಕ್ತ ಸರ್ಕಾರದ ವಿಷಯಗಳನ್ನು ಜಾರಿಗೆ ತರುವ ಕಾರ್ಯನಿರ್ವಾಹಕ ಪ್ರಾಧಿಕಾರವು ಆಯಾ ರಾಜ್ಯದ ರಾಜರುಗಳೇ ಆಗಿರುತ್ತಾರೆಂಬುದು ನನಗೆ ಸ್ಪಷ್ಟವಾಗಿದೆ. ಆದರೆ, ಇಲ್ಲಿನ ಖಂಡದಲ್ಲಿ ರಾಜ್ಯಗಳ ಆಡಳಿತವು ಯಾವ ಗುಣಮಟ್ಟದಲ್ಲಿರಬೇಕೆಂಬುದನ್ನು ಪ್ರತೀಕ್ಷೆ ಮಾಡಲಾಗುತ್ತದೆ ಎಂಬ ಎಚ್ಚರಿಕೆ ಇದೆ. ಕನಿಷ್ಠಪಕ್ಷ ಸಂವಿಧಾನ ರಚನಾಸಭೆಯಾದರೂ ಈ ಯೋಚನಾಲಹರಿಯಲ್ಲಿದೆ ಎಂದು ನಾನು ನಂಬಿದ್ದೇನೆ. ರಾಜ್ಯಗಳ ಆಡಳಿತವನ್ನು ಕೇಂದ್ರವು ಬದಲಾಯಿಸಲು ತನ್ನ ಅಧಿಕಾರವನ್ನು ಬಳಸಬಾರದೆಂದು ಈ ಸದನವು ಅಪೇಕ್ಷಿಸುತ್ತದೆ. ನಾವು ಎದುರಿಸಬೇಕಾಗಿರುವ ಒತ್ತಡ, ಸನ್ನಿವೇಶಗಳು ಮತ್ತು ಅದರ ಪರಿಸ್ಥಿತಿಗಳು ರಾಜ್ಯಗಳು ತಮ್ಮ ಆಡಳಿತವನ್ನು ನಡೆಸುವುದರ ಮೇಲೆ ಮಾನಸಿಕವಾಗಿ ಪ್ರಭಾವವನ್ನು ಬೀರುತ್ತವೆ. ಪ್ರಗತಿಯ ಚಿಹ್ನೆಗಳು ಈಗಾಗಲೇ ಕಾಣಿಸಲಾರಂಭಿಸಿವೆ. ಮತ್ತು ಕೆಲ ಕಾಲದವರೆಗೆ ಇದು ಅಡೆತಡೆಯಿಲ್ಲದೆ ಮುಂದುವರಿಯುತ್ತದೆ ಎಂಬ ಆಶಾಭಾವನೆ ನಮಗಿದೆ. ನಾವು ಒಂದು ರಾಜಿ ಸಂಧಾನವನ್ನು ಮಾಡಿಕೊಂಡಿದ್ದೇವೆ ಮತ್ತು ಪ್ರಸ್ತುತ ನಮ್ಮ ವಿಶ್ವಾಸವನ್ನು ಆ ಆಶಾಭಾವನೆಯ ಮೇಲೆ ನೆಟ್ಟಿರೋಣ. ಸಮಯ ಬಂದರೆ, ಕೇಂದ್ರವು ತನ್ನ ಅಧಿಕಾರವನ್ನು ಅಗತ್ಯಕ್ಕೆ ಅನುಸಾರವಾಗಿ ಬಳಸಲು

ಹಿಂಜರಿಯುವುದಿಲ್ಲ. ಇದನ್ನು ಹೇಳಲು ಬಳಸಿರುವ ಪದಸರಣಿಗಳೇ ಸ್ಪಷ್ಟವಾಗಿವೆ ಎಂದೆನಿಸುತ್ತದೆ. ದೇಶದ ಹಿತಾಸಕ್ತಿಯನ್ನು ಹೃದಯದಲ್ಲಿ ಇಟ್ಟುಕೊಂಡವರು ಕೇಂದ್ರ ಹಾಗೂ ರಾಜ್ಯಗಳ ಅಧಿಕಾರ ಮತ್ತು ಬಾಧ್ಯತೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಕೇಂದ್ರ ಹಾಗೂ ರಾಜ್ಯಗಳ ನಡುವೆ ಸಾಂಗತ್ಯವೇರ್ಪಡುವಂತೆ ಮಾಡಲು, ರಾಜ್ಯಗಳು ಕೇಂದ್ರದೊಂದಿಗೆ ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವ ಮೂಲಕ ನಾವು ಸುಭದ್ರ ಭಾರತವನ್ನು ಕಟ್ಟಬಯಸುತ್ತೇವೆ. ನಮ್ಮ ಅಂತಿಮ ಅಭೀಷ್ಟೆ ಶಕ್ತಿಯುತವಾದ ಭಾರತವನ್ನು ಕಟ್ಟುವುದು. ಇಂತಹ ನಿರ್ಮಿತಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ಮುಕ್ತ ಸಹಕಾರವನ್ನು ಅವಲಂಬಿಸಿರುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ ನೀತಿಯು ಅಗತ್ಯವಾಗಿರುವ ಏಕತೆಯನ್ನು ಕಾಯ್ದುಕೊಂಡು ಹೋಗುವುದಾಗಿರುತ್ತದೆ. ತಮ್ಮ ಪ್ರಜೆಗಳನ್ನು ರಾಜ್ಯದ ಆಡಳಿತದಲ್ಲಿ ಒಳಗೊಳ್ಳುವಂತೆ ಮಾಡಿಕೊಂಡು ಅವರ ಅನುಕಂಪವನ್ನು ಆದಷ್ಟು ಶೀಘ್ರವಾಗಿ ಪಡೆಯುವುದು ರಾಜ್ಯ ಸರ್ಕಾರಗಳ ಕರ್ತವ್ಯವಾಗಿರಬೇಕು.

ಇಷ್ಟು ಹೇಳಿ ನಾನು ತಿದ್ದುಪಡಿಗೆ ನನ್ನ ಬೆಂಬಲವನ್ನು ಸೂಚಿಸುತ್ತಿದ್ದೇನೆ.

**ಸರ್ ಬಿ.ಎಲ್. ಮಿಟ್ಟರ್** : ಮಾನ್ಯರೆ, ಒಂದು ಅತ್ಯಂತ ಸರಳಾದ ತಿದ್ದುಪಡಿಯು ಇಷ್ಟೊಂದು ಚರ್ಚೆಗೆ ಮತ್ತು ಕೆಲಮಟ್ಟಿನ ಬಿಸಿ ವಾತಾವರಣಕ್ಕೆ ಕಾರಣವಾದುದು ನಿಜಕ್ಕೂ ಆಶ್ಚರ್ಯದ ವಿಷಯವಾಗಿದೆ. ಈ ತಿದ್ದುಪಡಿಯ ಉದ್ದೇಶವೇನು? ಅದಕ್ಕೆ ಎರಡು ಉದ್ದೇಶಗಳಿವೆ: ಮೊದಲನೆಯದು, ಸಂಸತ್ತಿನ ಪರಮಾಧಿಕಾರವು ಸ್ವಯಂ ಸಿದ್ಧವಾದುದು ಎಂದು ತಿದ್ದುಪಡಿಮಾಡಿದ ಖಂಡವು ತಿಳಿಸುತ್ತದೆ. ಅದರಲ್ಲಿನ ಕೊನೆಯ ಭಾಗ ಹೀಗಿದೆ: "ತನಗೆ ಅಗತ್ಯವೆಂದು ಕಂಡುಬಂದ ಪ್ರಸಂಗಗಳಲ್ಲಿ ಸಂಯುಕ್ತ ಸರ್ಕಾರವು ಅವಕಾಶವನ್ನು ಮಾಡಿಕೊಡುವವರೆಗೆ". ಸಂಯುಕ್ತ ಸರ್ಕಾರವು ಪರಮಾಧಿಕಾರವನ್ನು ಹೊಂದಿರುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಮೊದಲ ಭಾಗದ ಒಕ್ಕಣೆ ಹೀಗಿದೆ: "ಮಹಾಮಂಡಲಿಯ ಭಾಗವಾಗಿರುವ ರಾಜ್ಯದ ಆಡಳಿತಗಾರರ ಕಾರ್ಯನಿರ್ವಾಹಕ ಅಧಿಕಾರವು ಆ ರಾಜ್ಯದಲ್ಲಿ ಒಕ್ಕೂಟಕ್ಕೆ ವಹಿಸಿರುವ ವಿಷಯದಲ್ಲಿ ಚಲಾಯಿಸಲ್ಪಡುತ್ತಿರುವುದು ಮುಂದುವರಿಯುತ್ತದೆ." – ಅಂದರೆ, ಹಾಲಿ ಇರುವ ಸ್ಥಿತಿಯು ಮುಂದುವರಿಯುತ್ತದೆ ಅಷ್ಟೆ.

ನಾವು ಈ ಸದನದಲ್ಲಿ ರೂಪಿಸುತ್ತಿರುವ ಸಂವಿಧಾನವು ಅವಾಸ್ತವವಾದುದಲ್ಲ, ದೇಶದಲ್ಲಿರುವ ಪರಿಸ್ಥಿತಿಯನ್ನು ಅವು ಇರುವ ಹಾಗೆಯೇ ಪರಿಗಣಿಸಬೇಕು, ಆ ಪರಿಸ್ಥಿತಿಯ ಬೆಳಕಿನಲ್ಲಿ ಯುಕ್ತವಾದ ಒಂದು ಸಂವಿಧಾನವನ್ನು ರಚಿಸಬೇಕು. ಅಂತಹ ಅಂಶಗಳಲ್ಲಿ ಒಂದು ಎಂದರೆ, ಕೆಲವು ದೊಡ್ಡ ರಾಜ್ಯಗಳ ಸರ್ಕಾರಗಳು ಕೇಂದ್ರಕ್ಕೆ ವಹಿಸಿರುವ ಕೆಲವು ವಿಷಯಗಳನ್ನು ತಾನೇ ನಿರ್ವಹಿಸುತ್ತಿವೆ. ಅದರಿಂದ ಯಾರಿಗೂ ಇರಿಸುಮುರಿಸಾಗಿಲ್ಲ. ಅದರಿಂದಾಗಿ ಕಾರ್ಯನಿರ್ವಾಹಕ ಸಾಮರ್ಥ್ಯವು ಕುಂದಿಲ್ಲ. ಹಾಗಿರುವಾಗ ಪರಿಸ್ಥಿತಿಯು ಎಂದಿನಂತೆಯೇ ಮುಂದುವರಿಯುತ್ತಿರುತ್ತದೆ. ನಿಮಗೆ ಈ ವ್ಯವಸ್ಥೆಯಲ್ಲಿ ಏನಾದರೂ ಅಧಿಕಾರದ ದುರ್ಬಳಕೆ ಅಥವಾ ಅಸಾಮರ್ಥ್ಯವು ಕಾಣಿಸಿದರೆ, ಅದನ್ನು ಸರಿಪಡಿಸಲು ಒಕ್ಕೂಟದ ಸಂಸತ್ತು ಇದೆ. ಇದೊಂದು ಸರಳ ಖಂಡವಾಗಿದ್ದು, ಎರಡು ತತ್ತ್ವಗಳನ್ನು ಒಳಗೊಂಡಿದೆ. ಮೊದಲನೆಯದು ಒಕ್ಕೂಟದ ಪರಮಾಧಿಕಾರ ಮತ್ತು ಎರಡನೆಯದು ಇರುವ ಸ್ಥಿತಿಯ ಮುಂದುವರಿಕೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನಿಜವಾಗಿಯೂ ಪ್ರಮುಖವಾಗಿದ್ದ ಒಂದು ವಿಷಯದ ಮೇಲೆ ಕುತೂಹಲಕಾರಿಯಾದ ಚರ್ಚೆಯನ್ನು ನಡೆಸಿದೆವು. ಆದರೆ ವಿರುದ್ಧಾಭಿಪ್ರಾಯಗಳನ್ನು ಹೊಂದಿದ್ದವರು ಒಂದು ಸಮನ್ವಯದ ಒಪ್ಪಂದಕ್ಕೆ ಬಂದಿದ್ದಾರೆ. ಹೆಚ್ಚುಕಡಿಮೆ ಕಳೆದ ಒಂದು ಗಂಟೆಯಷ್ಟು ಕಾಲ ಇದರ ಮೇಲೆ ನಡೆದ ವಾಗ್ಝರಿಗೆ ನಾನು ಏನನ್ನೂ ಸೇರಿಸಬಯಸುವುದಿಲ್ಲ. ನಾನು ಹೇಳಬೇಕೆಂದಿರುವುದು ಇಷ್ಟೆ: ಮಾನ್ಯರೆ, ಇದರ ಹಿಂದಿರುವ ಮೂಲತತ್ತ್ವವೆಂದರೆ, ಕೇಂದ್ರದ ಕಾರ್ಯನಿರ್ವಾಹಕ ಅಧಿಕಾರವು

ಅದರ ಶಾಸಕಾಂಗದ ಅಧಿಕಾರದಷ್ಟೇ ವಿಶಾಲವಾದುದು, ಅಂದರೆ, ಕೇಂದ್ರಕ್ಕೆ ವಹಿಸಿರುವ ವಿಷಯಗಳ ನಿರ್ವಹಣೆಯಲ್ಲಿನ ಹೊಣೆಗಾರಿಕೆ ಕೇಂದ್ರದ್ದೇ ಆಗಿರುತ್ತದೆ. ಹೊಸ ಸಂವಿಧಾನದಲ್ಲಿ ಹೇಳಲಾಗುವ ಕೇಂದ್ರದ ವಿಷಯಗಳನ್ನು ಕೆಲವು ದೊಡ್ಡ ರಾಜ್ಯಗಳು ತಾವೇ ನಿರ್ವಹಿಸುತ್ತವೆ ಎಂಬ ವಾಸ್ತವ ಅಂಶವನ್ನೂ ನಾವು ಗಮನದಲ್ಲಿಟ್ಟುಕೊಂಡಿರಬೇಕು. ಪ್ರಸ್ತುತ ಇರುವ ವ್ಯವಸ್ಥೆಗಳನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಲು ನಾವು ಅವಕಾಶಗಳನ್ನು ಕಲ್ಪಿಸುತ್ತಿದ್ದೇವೆ. ಆದರೆ ಅಂತಹ ಮುಂದುವರಿಕೆಯ ಮೇಲೆ ಕೇಂದ್ರವು ತನ್ನ ಪರಮಾಧಿಕಾರವನ್ನು ಹೊಂದಿದೆ ಎಂಬ ನಿಯಮವೂ ಇದೆ. ನಾವು ಅದನ್ನು ಬಿಟ್ಟುಬಿಡುವಂತಿಲ್ಲ. ಸರ್ ಬಿ.ಎಲ್. ಮಿಟ್ಟರ್ ಅವರು ಹೇಳಿದಂತೆ, ಕೇಂದ್ರದ ವಿಷಯಗಳನ್ನು ನಿರ್ವಹಿಸುವ ಪರಮಾಧಿಕಾರವು ಇರುವುದು ಕೇಂದ್ರದ ಕೈಯಲ್ಲಿಯೇ. ಶ್ರೀ ರಾಮಸ್ವಾಮಿ ಮುದಲಿಯಾರ್ ಅವರ ವಾದವನ್ನು ನಾವು ತಿರುವುಮುರುವು ಮಾಡಬೇಕು. ಕೇಂದ್ರಕ್ಕೆ ಸಂಬಂಧಪಟ್ಟ ವಿಷಯಗಳನ್ನು ರಾಜ್ಯಗಳಲ್ಲಿ ನಿರ್ವಹಿಸುವ ಅಧಿಕಾರವು ಆಯಾ ರಾಜ್ಯಗಳಿಗೇ ಇರತಕ್ಕದ್ದು ಎಂಬುದು ಸಾಮಾನ್ಯ ನಿಯಮವಾಗಿರಬೇಕು ಎಂಬುದು ಅವರ ವಾದವಾಗಿರುವಂತೆ ಕಾಣಿಸುತ್ತದೆ. ಆದರೆ, ಒಂದು ವಿಶೇಷವಾದ ಅಪವಾದದ ಕ್ರಮವಾಗಿ, ಅಗತ್ಯವಿರುವ ಸಂದರ್ಭಗಳಲ್ಲಿ ಕೇಂದ್ರವು ಈ ನಿರ್ವಹಣಾ ಕಾರ್ಯವನ್ನು ತನ್ನ ಕೈಗೆ ತೆಗೆದುಕೊಳ್ಳಬೇಕು. ನಾನು ಇಲ್ಲಿ ಎತ್ತಿ ತೋರಿಸಬೇಕಾದ ಅಂಶವೆಂದರೆ, ಕೇಂದ್ರಕ್ಕೆ ಸಂಬಂಧಿತ ವಿಷಯಗಳ ನಿರ್ವಹಣೆಯ ಜವಾಬ್ದಾರಿ ಸಾಮಾನ್ಯವಾಗಿ ಕೇಂದ್ರ ಸರ್ಕಾರದ್ದೇ ಆಗಿರುತ್ತದೆ. ಆದರೆ, ಅದು ಅನಿವಾರ್ಯವಾಗಿ ಅಗತ್ಯವೆಂದಾಗುವವರೆಗೆ, ಯೋಗ್ಯ ಮಟ್ಟದಲ್ಲಿ ರಾಜ್ಯಗಳು ಆ ವಿಷಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರೆ, ಕೇಂದ್ರ ಸರ್ಕಾರವು ಅದರಲ್ಲಿ ಮೂಗು ತೂರಿಸುವುದಿಲ್ಲ.

ಒಂದು ತಿದ್ದುಪಡಿಯನ್ನು ಮಂಡಿಸಿದವರ ಅಭಿಪ್ರಾಯ ಹೀಗಿತ್ತು: 'ರಾಜ್ಯಗಳ ಕಾರ್ಯನಿರ್ವಾಹಕ ಆಡಳಿತವನ್ನು ಕೇಂದ್ರ ಸರ್ಕಾರವು ತನ್ನ ಕೈಗೆ ತೆಗೆದುಕೊಳ್ಳುವುದನ್ನು ಕೇಂದ್ರದ ಕಾನೂನಿನ ಮೂಲಕ ನಡೆಸಬೇಕೆ ಹೊರತು ಈ ಖಂಡದ ಮೂಲಕವಲ್ಲ.' ಅವರಿಗೆ ನಾನು ಒಂದು ಉದಾಹರಣೆಯನ್ನು ನೀಡಬಯಸುತ್ತೇನೆ. ಅದು ವಿದೇಶಾಂಗ ವ್ಯವಹಾರ. ವಿದೇಶಾಂಗ ವ್ಯವಹಾರದ ಬಹುಪಾಲು ನಿರ್ವಹಣೆಯಾಗುವುದು ಶಾಸಕಾಂಗದ ವತಿಯಿಂದಲ್ಲ, ಬದಲಿಗೆ ಕಾರ್ಯಾಂಗದ ಮೂಲಕ. ಅಂತಹ ವಿಷಯಗಳಲ್ಲಿ ಕೇಂದ್ರದ ಕಾನೂನುಗಳತ್ತ ಮುಖಮಾಡುವುದು ಸಂಪೂರ್ಣವಾಗಿ ಅನಾವಶ್ಯಕ. ಅದನ್ನು ಕೇಂದ್ರದ ಕಾರ್ಯಾಂಗವು ತಾನೇ ನಿರ್ವಹಿಸಿಕೊಂಡು ಹೋಗುತ್ತದೆ.

ಮಾನ್ಯರೆ, ಈ ವಿಷಯಕ್ಕೆ ಸಂಬಂಧಿಸಿದ ಹಾಗೆ, ಒಕ್ಕೂಟದ ವಿಷಯಗಳ ಕಾರ್ಯನಿರ್ವಾಹಕ ಆಡಳಿತದಲ್ಲಿ, ಶ್ರೀ ರಾಮಸ್ವಾಮಿ ಮುದಲಿಯಾರ್ ಅವರು ಹೇಳಿದ ಹಾಗೆ ಪ್ರಾಂತ್ಯ ಮತ್ತು ರಾಜ್ಯಗಳ ನಡುವೆ ಮೂಲಭೂತವಾದ ವ್ಯತ್ಯಾಸಗಳೇನೂ ಇರುವುದಿಲ್ಲ. ಇರುವ ಒಂದೇ ವ್ಯತ್ಯಾಸವೆಂದರೆ, ರಾಜ್ಯಗಳು ಒಕ್ಕೂಟಕ್ಕೆ ಸೇರಿದ ವಿಷಯಗಳ ನಿರ್ವಹಣೆಯನ್ನು ಮಾಡುತ್ತಿವೆ, ಆದರೆ ಪ್ರಾಂತ್ಯಗಳು ಮಾಡುತ್ತಿಲ್ಲ ಅಷ್ಟೆ. ವಿಷಯಗಳನ್ನು ನಿರ್ವಹಿಸುವ ಹಕ್ಕನ್ನು ಕುರಿತು ಹೇಳುವುದಾದರೆ, ರಾಜ್ಯಗಳು ಮತ್ತು ಪ್ರಾಂತ್ಯಗಳ ನಡುವೆ ವ್ಯತ್ಯಾಸವೇನೂ ಇಲ್ಲ. ವಾಸ್ತವವಾಗಿ, ರಾಜ್ಯ ಮತ್ತು ಪ್ರಾಂತ್ಯಗಳ ನಡುವೆ ಇರುವ ಪ್ರಮುಖ ವ್ಯತ್ಯಾಸವೆಂದರೆ, ಅವುಗಳ ಆಂತರಿಕ ಆಡಳಿತದಲ್ಲಿ ಇರುವ ವ್ಯತ್ಯಾಸಗಳು. ಈಗಾಗಲೇ ಕೆಲವು ಭಾಷಣಕಾರರು ಈ ವಿಷಯದ ಬಗೆಗೆ ಮಾತನಾಡಿರುವುದರಿಂದ, ನಾನು ಅದರ ವಿವರಕ್ಕೆ ಹೋಗುವುದಿಲ್ಲವಾದರೂ, ಒಂದು ಅಂಶವನ್ನು ನಾನು ಒತ್ತಿ ಹೇಳಲು ಬಯಸುತ್ತೇನೆ. ಅದು ಬಹುಶಃ ಶ್ರೀ ಸಂತಾನಮ್ ಅವರು ಮುಂದಿಟ್ಟ ಅಂಶ. ಅದು ಹೀಗಿದೆ: ಮಹಾಮಂಡಲಿಗೆ ಸೇರಿದ ವಿಷಯಗಳ ಆಡಳಿತವನ್ನು ಮಹಾಮಂಡಲಿಯು ಕೈಗೆತ್ತಿಕೊಳ್ಳುವ ಅಗತ್ಯವು ಅಲ್ಪವೇನಾಗಿರುವುದಿಲ್ಲ, ಆದರೆ ಒಮ್ಮೆ ಸಾಮಾಜಿಕ ಸಂಸ್ಥೆಗಳು ರಾಜ್ಯಗಳಲ್ಲಿ ಈಗ ಇರುವುದಕ್ಕಿಂತ ಹೆಚ್ಚು ಹೆಚ್ಚು ಪರಿಚಿತವಾದಂತೆ, ಈ ಅಗತ್ಯವು ಇನ್ನೂ ಹೆಚ್ಚಾಗುತ್ತದೆ. ಎಷ್ಟಾದರೂ, ಒಕ್ಕೂಟ ವ್ಯವಸ್ಥೆಯು ಕೇಂದ್ರ

ಹಾಗೂ ರಾಜ್ಯಗಳ ನಡುವೆ ಆಡಳಿತದ ಹೊಣೆಯನ್ನು ಹಂಚಬೇಕು ಅಥವಾ ತಾನೇ ಪರಮಾಧಿಕಾರವನ್ನು ಚಲಾಯಿಸಬೇಕು ಎಂಬ ತತ್ತ್ವವನ್ನು ಪರಿಶೀಲಿಸಲೇಬೇಕಾಗುತ್ತದೆ. ರಾಜ್ಯಗಳಷ್ಟೇ ಮಹಾಮಂಡಲಿಯು ಕೂಡ ಸಂವಿಧಾನದ ಒಂದು ಭಾಗವೇ ಆಗಿರುತ್ತದೆ ಎಂಬುದನ್ನು ರಾಜ್ಯಗಳ ಆಡಳಿತಗಾರರು ಮತ್ತು ಜನತೆ ಅರಿತುಕೊಳ್ಳಬೇಕಾಗಿರುವುದರಿಂದ, ಪ್ರಸ್ತುತ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದಕ್ಕೆ ನಾವೇಕೆ ಹಿಂದುಮುಂದು ನೋಡಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. ಒಕ್ಕೂಟದ ಸಂಸತ್ತಿನಲ್ಲಿ ರಾಜ್ಯಗಳಿಗೆ ಸಾಕಷ್ಟು ಪ್ರಾತಿನಿಧ್ಯವಿರುತ್ತದೆ. ಉದಾಹರಣೆಗೆ: ಮಹಾಮಂಡಲಿಯ ವಿಷಯಗಳ ಆಡಳಿತವನ್ನು ನೇರವಾಗಿ ಮಹಾಮಂಡಲಿಯೇ ನೋಡಿಕೊಳ್ಳಬೇಕು ಎಂಬ ಒಂದು ಕಾನೂನನ್ನು ಜಾರಿಗೆ ತಂದರೆ, ಆ ಕಾನೂನನ್ನು ಅಂಗೀಕರಿಸುವ ಪ್ರಕ್ರಿಯೆಯಲ್ಲಿ ರಾಜ್ಯಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಮಂಡಿಸಬಹುದು. ಆದ್ದರಿಂದ ಪ್ರಾಂತ್ಯಗಳಲ್ಲಿರುವ ಸಾಮಾನ್ಯ ತತ್ತ್ವವನ್ನು ರಾಜ್ಯಗಳಲ್ಲಿ ಬಳಸಬಾರದು ಎಂಬ ವಾದದ ಹಿಂದೆ ಯಾವುದಾದರೂ ನಿಜವಾದ ತತ್ತ್ವವಿದೆಯೆಂದು ನನಗೆ ತೋರುತ್ತಿಲ್ಲ. ಮಾನ್ಯರೆ, ಏನು ಮಾಡಬೇಕೆಂಬುದು ಸ್ಪಷ್ಟವಾಗಿರುವ ವಿಷಯದ ಮೇಲೆ ನಾನು ಮತ್ತೆ ಏನನ್ನೂ ಹೇಳಲು ಇಚ್ಛಿಸುವುದಿಲ್ಲ. ನಾನು ಮಂಡಿಸಿದ ಪ್ರಸ್ತಾವವನ್ನು ಈ ಸದನವು ಸಾಮಾನ್ಯವಾಗಿ ಅಂಗೀಕರಿಸುವ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದೆ. ನಾನು ಹೇಳಬೇಕಾದುದು ಇಷ್ಟೆ. ಇನ್ನೇನೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಅವುಗಳಲ್ಲಿ ಮೊದಲನೆಯದು ಸರ್ ಗೋಪಾಲಸ್ವಾಮಿಯವರ ತಿದ್ದುಪಡಿ. ಅದರಲ್ಲಿ ಈ ಕೆಳಗಿನ ಪದಗಳನ್ನು ೯ನೆಯ ಖಂಡಕ್ಕೆ ಸೇರಿಸಬೇಕು ಎನ್ನುವ ಪ್ರಸ್ತಾವವಿದೆ. ಅದು ಹೀಗಿದೆ:

"ಅಗತ್ಯವೆಂದು ಪರಿಗಣಿಸಿದ ಪ್ರಸಂಗಗಳಲ್ಲಿ".

ಸದನವು ಇದನ್ನು ಅಂಗೀಕರಿಸಿದೆ ಎಂದು ಭಾವಿಸುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ೯ನೆಯ ಖಂಡಕ್ಕೆ ಮಂಡಿಸಲಾದ ಇನ್ನೂ ಕೆಲವು ತಿದ್ದುಪಡಿಗಳಿವೆ. ಈಗ ಶ್ರೀ ಚಂದ್ರಶೇಖರಯ್ಯ ಅವರು ಈ ಖಂಡಕ್ಕೆ ಬದಲಿಸಬೇಕೆಂದು ಸೂಚಿಸಿರುವ ತಿದ್ದುಪಡಿ:

"ಮಹಾಮಂಡಲಿಗೆ ಸೇರಿದ ರಾಜ್ಯವೊಂದರ ಕಾರ್ಯನಿರ್ವಾಹಕ ಪ್ರಾಧಿಕಾರವು ತನ್ನ ರಾಜ್ಯದ ವ್ಯಾಪ್ತಿಯಲ್ಲಿ ಮಹಾಮಂಡಲಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣಾಧಿಕಾರವನ್ನು, ಮಹಾಮಂಡಲಿಯ ಅಧ್ಯಕ್ಷರ ಪರಿವೀಕ್ಷಣೆ ಮತ್ತು ಸೂಚನೆಗಳಿಗೆ ಒಳಪಟ್ಟು, ಮುಂದುವರಿಸಿಕೊಂಡು ಹೋಗಲು ಅವಕಾಶವನ್ನು ಮಾಡಿಕೊಡತಕ್ಕದ್ದು."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿನದು ಶ್ರೀ ಹಿಮ್ಮತ್‌ಸಿಂಗ್ ಮಹೇಶ್ವರಿ ಅವರು ೯ನೆಯ ಖಂಡಕ್ಕೆ ಬದಲಿಸಬೇಕೆಂದು ಸೂಚಿಸಿರುವ ತಿದ್ದುಪಡಿ:

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ, ಸರ್ ಗೋಪಾಲಸ್ವಾಮಿಯವರು ತಿದ್ದುಪಡಿಮಾಡಿದ ಮೂಲ ಪ್ರಸ್ತಾವವನ್ನು ಮತಕ್ಕೆ ಹಾಕುತ್ತಿದ್ದೇನೆ:

ತಿದ್ದುಪಡಿಮಾಡಲಾದ ೯ನೆಯ ಖಂಡವು ಅಂಗೀಕಾರವಾಯಿತು.

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರಿಗೆ ತಿಳಿದಿರುವ ಹಾಗೆ ಶ್ರೀ ಶ್ರೀಪ್ರಕಾಶ ಅವರು ಇಂದು ಬೆಳಗ್ಗೆ ಒಂದು ಪ್ರಸ್ತಾವವನ್ನು ಮಂಡಿಸಿದರು. ಅದನ್ನು ಮೂವರು ಸದಸ್ಯರ ಒಂದು ಸಮಿತಿಗೆ ವಹಿಸಿ ಅದರ ಕರಡನ್ನು ತಿದ್ದಿ, ಸದನದ ಮುಂದೆ ಮತ್ತೆ ಮಂಡಿಸಲು ಕೇಳಿಕೊಳ್ಳಲಾಗಿತ್ತು. ಅದು ಈಗ ಸಿದ್ಧವಾಗಿದೆ. ಗೌರವಾನ್ವಿತ ಸದಸ್ಯರು ಅದನ್ನು ಇಂದು ಚರ್ಚಿಸಿ ಅಂಗೀಕರಿಸಲು ಒಪ್ಪಿದರೆ ......

**ಹಲವು ಸದಸ್ಯರು** : ಚರ್ಚಿಸೋಣ

**ಶ್ರೀ ಶ್ರೀಪ್ರಕಾಶ** : ಮಾನ್ಯರೆ ನಾನು ಅದನ್ನು ಮಂಡಿಸುತ್ತಿದ್ದೇನೆ:

ಸಂವಿಧಾನ ರಚನಾಸಭೆಯ ಸಂರಚನೆ, ಚುನಾವಣಾ ಕ್ರಮ, ಸದಸ್ಯತ್ವದಿಂದ ಸದಸ್ಯರ ವಜಾ, ಇಲ್ಲಿಯವರೆಗೆ ಆದ ಚುನಾವಣೆಗಳು, ಇವುಗಳ ಬಗೆಗೆ ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಏನನ್ನೇ ಹೇಳಿದ್ದರೂ, ಮಹಾಪ್ರಭುಗಳ ಸರ್ಕಾರದ ೧೯೪೭ರ ಜೂನ್ ೩ರ ಹೇಳಿಕೆಯ ಪ್ರಕಾರ, ಇಲ್ಲಿಯವರೆಗೆ ಆದ ಚುನಾವಣೆಗಳನ್ನು ಸಕ್ರಮವಾಗಿವೆಯೆಂದೇ ಪರಿಗಣಿಸತಕ್ಕದ್ದು ಮತ್ತು ಸಂರಚನೆ ಮತ್ತು ಇಲ್ಲಿಯವರೆಗಿನ ನಡವಳಿಗಳನ್ನು ಕೂಡ ಕ್ರಮಬದ್ಧವಾಗಿವೆ ಎಂದು ಪರಿಗಣಿಸತಕ್ಕದ್ದು.

**ಶ್ರೀ ಎಚ್.ವಿ. ಕಾಮತ್** (ಮಧ್ಯಪ್ರಾಂತ್ಯಗಳು ಮತ್ತು ಬೇರಾರ್ : ಸಾಮಾನ್ಯ) : ಇಲ್ಲಿ ಉದ್ಭವಿಸಬಹುದಾದ ಯಾವುದೇ ಸಮಸ್ಯೆಗಳನ್ನು ನಿವಾರಿಸಲು ಸಂವಿಧಾನ ರಚನಾಸಭೆಯ ನಿಯಮಗಳಲ್ಲಿನ ೬೮ನೆಯ ಖಂಡವು ಅವಕಾಶಗಳನ್ನು ಮಾಡಿಕೊಡುತ್ತದೆ ಎಂದು ನಾನು ಸೂಚಿಸಬಹುದೇ? ಅದು ಅಧ್ಯಕ್ಷರಿಗೆ ಸೂಕ್ತ ಅಧಿಕಾರಗಳನ್ನು ನೀಡುತ್ತದೆ. .......

**ಮಾನ್ಯ ಸಭಾಧ್ಯಕ್ಷರು** : ಗಮನಕ್ಕೆ ಬಂದ ಸಮಸ್ಯೆಗಳನ್ನು ನಿವಾರಿಸಲು ಒಂದು ಪ್ರಸ್ತಾವವನ್ನು ಸದನದ ಮುಂದೆ ಇರಿಸಲಾಗಿದೆ. ಇದರ ಬಗೆಗೆ ಸದಸ್ಯರಲ್ಲಿ ಯಾರಾದರೂ ಏನನ್ನಾದರೂ ಹೇಳುತ್ತಾರೆಯೇ?

(ಯಾರೂ ಏಳಲಿಲ್ಲ)

ಹಾಗಿದ್ದರೆ ನಾನು ಇದನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಸದನವನ್ನು ಸೋಮವಾರ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

ಸಭೆಯನ್ನು ೧೯೪೭ರ ಜುಲೈ ೨೮ರ ಸೋಮವಾರ ಬೆಳಗ್ಗೆ ೧೦ ಗಂಟೆಯವರೆಗೆ ಮುಂದೂಡಲಾಯಿತು.

*[ಹಿಂದುಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*